ಬದಲಾಗುತ್ತಿರುವ ಮೊಗೇರರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು: ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಮತ್ತು ಮಂಗಳೂರು ತಾಲೂಕುಗಳ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದರ ಎಂ.ಫಿಲ್ ಪದವಿಗಾಗಿ
ಸಾದರ ಪಡಿಸಿದ ಸಂಪ್ರಬಂಧ

ಸಂಶೋಧಕರು

ಪ್ರಕಾಶ

ಮಾರ್ಗದರ್ಶಕರು
ಪ್ರೊ.ಡಾ.ವೈ.ರವೀದ್ರನಾಥ ರಾವ್
ಮುಖ್ಯಸ್ಥರು,ಸಮಾಜಶಾಸ್ತ್ರ ವಿಭಾಗ
ಸಂತ ಮೇರೀಸ್ ಸಿರಿಯನ್ ಕಾಲೇಜು
ಬ್ರಹ್ಮಾವರ,ಉಡುಪಿ ಜಿಲ್ಲೆ-576213

2012

ಕರ್ನಾಟಕ ಥಿಯೊಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು -575001

ಬದಲಾಗುತ್ತಿರುವ ಮೊಗೇರರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು: ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಮತ್ತು ಮಂಗಳೂರು ತಾಲೂಕುಗಳ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದರ ಎಂ.ಫಿಲ್ ಪದವಿಗಾಗಿ ಸಾದರ ಪಡಿಸಿದ
ಸಂಪ್ರಬಂಧ

ಸಂಶೋಧಕರು

ಪ್ರಕಾಶ

ಮಾರ್ಗದರ್ಶಕರು
ಪ್ರೊ.ಡಾ.ವೈ.ರವೀದ್ರನಾಥ ರಾವ್
ಮುಖ್ಯಸ್ಥರು,ಸಮಾಜಶಾಸ್ತ್ರ ವಿಭಾಗ
ಸಂತ ಮೇರೀಸ್ ಸಿರಿಯನ್ ಕಾಲೇಜು
ಬ್ರಹ್ಮಾವರ.ಉಡುಪಿ ಜಿಲ್ಲೆ–576213

2012

ಕರ್ನಾಟಕ ತಿಯೊಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು –575001

ಪ್ರಮಾಣಪತ್ರ

ಕನ್ನಡ ವಿಶ್ವವಿದ್ಯಾಲಯ,ಹಂಪಿ ಇದರ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ *"ಬದಲಾಗುತ್ತಿರುವ ಮೊಗೇರರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು : ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಮತ್ತು ಮಂಗಳೂರು ತಾಲೂಕುಗಳ ಅಧ್ಯಯನ"* ಎಂಬ ಶೀರ್ಷಿಕೆಯ ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು,ವಿಶ್ಲೇಷಣೆ ಮತ್ತು ಅಧ್ಯಯನದ ಫಲವಾಗಿದೆ. ಸಂತ ಮೆರೀಸ್ ಸಿರಿಯನ್ ಕಾಲೇಜು ಬ್ರಹ್ಮಾವರ ಇದರ ಸಮಾಜ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ.ಡಾ.ವೈ.ರವೀದ್ರನಾಥ ರಾವ್ ಅವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿದ ಈ ಸಂಪ್ರಬಂಧವನ್ನೂ ಬೇರಾವುದೇ ಪದವಿ, ಡಿಪ್ಲೋಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿ ಕೊಂಡಿಲ್ಲವೆಂದು ನಾನು ಈ ಮೂಲಕ ಧೃಢಪಡಿಸುತ್ತೇನೆ.

ದಿನಾಂಕ:31.05.2012

ಪ್ರಕಾಶ

ಕರ್ನಾಟಕ ತಿಯೊಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು

ಯೋಗ್ಯತಾ ಪತ್ರ

ಪ್ರಕಾಶ ರವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ *"ಬದಲಾಗುತ್ತಿರುವ ಮೊಗೇರರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು : ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಮತ್ತು ಮಂಗಳೂರು ತಾಲೂಕುಗಳ ಅಧ್ಯಯನ"* ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿ ಪ್ರಾಪ್ತಿಗಾಗಿ ಕನ್ನಡ ವಿಶ್ವವಿದ್ಯಾಲ,ಹಂಪಿಗೆ ಸಲ್ಲಿಸಬೇಕೆಂದು ಸಿದ್ದಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲ-ಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ದಿನಾಂಕ:31.05.2012

ಪ್ರೊ. ಡಾ. ವೈ. ರವೀದ್ರನಾಥ ರಾವ್
ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ
ಸಂತ ಮೇರೀಸ್ ಸಿರಿಯನ್ ಕಾಲೇಜು
ಬ್ರಹ್ಮಾವರ. ಉಡುಪಿ ಜಿಲ್ಲೆ 576213

ಬದಲಾಗುತ್ತಿರುವ ಮೊಗೇರರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು: ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಮತ್ತು ಮಂಗಳೂರು ತಾಲೂಕುಗಳ ಅಧ್ಯಯನ

ಅಧ್ಯಯನದ ವಿವರಗಳು

ಕೋಷ್ಟಕಗಳ ಪಟ್ಟಿ

ಅಧ್ಯಾಯ-ಒಂದು

ಪ್ರಸ್ತಾವನೆ

೧.೧ ಸಮುದಾಯದ ಕಲ್ಪನೆ

ಮಾನವ ಸಮಾಜವನ್ನು ಗಮನಿಸಿದಾಗ ಅನೇಕ ರೀತಿಯ ವೈವಿಧ್ಯತೆಗಳು ಗೋಚರವಾಗುತ್ತವೆ. ಒಂದು ಕಡೆ ಪುಟ್ಟ ಪುಟ್ಟ ಗ್ರಾಮಗಳು, ಇನ್ನೊಂದು ಕಡೆ ಕಿಕ್ಕಿರಿದು ತುಂಬಿದ ಜನಭರಿತ ನಗರ ಪ್ರದೇಶಗಳು, ಮತ್ತೊಂದೆಡೆ ಕಾಡು ಮೇಡುಗಳಲ್ಲಿ ಗಿರಿ ಕಂದರಗಳಲ್ಲಿ ವಾಸಿಸುವ ಆದಿವಾಸಿ ಸಮುದಾಯಗಳು ಕಂಡುಬರುತ್ತವೆ. ಬಡವರು-ಶ್ರೀಮಂತರು, ವಿದ್ಯಾವಂತರು-ಅವಿದ್ಯಾವಂತರು, ನಾಗರಿಕರು, ಅನಾಗರಿಕರು, ಜಾತಿಯ ಸ್ತರದಲ್ಲಿನ ವ್ಯತ್ಯಾಸಗಳು ಕಂಡುಬರುತ್ತದೆ. ಇಂತಹ ವ್ಯತ್ಯಾಸಗಳನ್ನು ಹೊಂದಿರುವ ಅಸಂಖ್ಯಾತ ಜನಸಮುದಾಯಗಳು ಸಮಾಜದಲ್ಲಿ ಕಂಡುಬರುತ್ತವೆ. ಆದರೆ ಪ್ರತಿಯೊಂದು ಸಮುದಾಯವೂ ತನ್ನದೇ ಆದ ಆಚಾರ-ವಿಚಾರ, ನಡೆ-ನುಡಿ, ನಂಬಿಕೆ-ನಡವಳಿಕೆ, ಸಂಸ್ಕೃತಿ, ಭಾಷೆ, ಧಾರ್ಮಿಕ ಭಾವನೆ, ಸಾಮಾಜಿಕ ಪದ್ಧತಿ, ಆಡಳಿತ ವ್ಯವಸ್ಥೆ ಮುಂತಾದವುಗಳನ್ನು ಹೊಂದಿರುತ್ತವೆ. ಆದ್ದರಿಂದ ಪ್ರತಿಯೊಂದು ಸಮುದಾಯಗಳೂ ಒಂದಕ್ಕಿಂತ ಒಂದು ಭಿನ್ನವಾಗಿದ್ದು ಅಧ್ಯಯನ ಯೋಗ್ಯವಾಗಿರುತ್ತವೆ.

ಸಾಮಾನ್ಯವಾಗಿ 'ಸಮುದಾಯ' ಎಂಬ ಪದವನ್ನು ಬಹಳ ಶಿಥಿಲವಾದ ಅರ್ಥದಲ್ಲಿ ಬಳಸುವುದು ಕಂಡುಬರುತ್ತದೆ.ಜಾತಿ ಸಮುದಾಯ, ಬುಡಕಟ್ಟಿನ ಸಮುದಾಯ, ಧಾರ್ಮಿಕ ಸಮುದಾಯ, ಭಾಷಾ ಸಮುದಾಯ, ಸಾಂಸ್ಕೃತಿಕ ಸಮುದಾಯ, ಔದ್ಯೋಗಿಕ ಸಮುದಾಯ, ಮಾನವ ಸಮುದಾಯ, ರಾಷ್ಟ್ರೀಯ ಸಮುದಾಯ ಹೀಗೆ ಸಂದರ್ಭಕ್ಕೆ ಅನುಗುಣವಾಗಿ ಹಲವು ಅರ್ಥಗಳಲ್ಲಿ ಈ ಪದವನ್ನು ಬಳಸಲಾಗುತ್ತಿದೆ. ಕುಟುಂಬದಂತಹ ಚಿಕ್ಕ ಸಂಘದಿಂದ ಹಿಡಿದು ಇಡೀ ಮಾನವ ಕೋಟಿಯಂತಹ ಬೃಹತ್ ಸಮೂಹವನ್ನು ಸೂಚಿಸಲು 'ಸಮುದಾಯ' ಎಂಬ ಪದವನ್ನು ಪ್ರಯೋಗಿಸಲಾಗುತ್ತಿದೆ.ಆದರೆ ಸಮಾಜಶಾಸ್ತ್ರದಲ್ಲಿ ಮಾತ್ರ 'ಸಮುದಾಯ' ಎಂಬುದು ಒಂದು 'ಮೂಲಕಲ್ಪನೆ'ಯಾಗಿದ್ದು, ಅದಕ್ಕೆ ವಿಶೇಷವಾದ ಅರ್ಥವನ್ನು ಕಲ್ಪಿಸಲಾಗಿದೆ.ಸಮಾಜಶಾಸ್ತ್ರಜ್ಞರು ಗ್ರಾಮ, ನಗರ, ಆದಿವಾಸಿಗಳ ನೆಲೆಗಳಿಗೆ ಸಮುದಾಯ ಎಂಬ ಪದವನ್ನು ಅನ್ವಯಿಸುತ್ತಾರೆ.ಈ ನಿಟ್ಟಿನಲ್ಲಿ ಸಮಾಜಶಾಸ್ತ್ರಜ್ಞರು ಈ ಪದಕ್ಕೆ ನೀಡಿರುವ ಒಂದೆರಡು ವ್ಯಾಖ್ಯಾನಗಳನ್ನು ಗಮನಿಸುವುದು ಅವಶ್ಯ.

ಕಿಂಗ್ಸ್‌ಲೇ ಡೇವಿಸ್(೧೯೮೧), ಅವರು 'ಸಾಮಾಜಿಕ ಜೀವನದ ಎಲ್ಲಾ ಅಂಶಗಳನ್ನು ಒಳಗೊಂಡಿರುವ ಒಂದು ಅತಿ ಚಿಕ್ಕ ಸ್ಥಾನೀಯ ಜನ ಸಮೂಹವನ್ನು ಸಮುದಾಯ' ಎನ್ನಬಹುದು ಎಂದಿದ್ದಾರೆ. *("The Community is the smallest territorial group that can embrace all aspects of Social life".)*ಆರ್.ಎಮ್.ಮೆಕೈವರ್ ಮತ್ತು ಸಿ.ಎಚ್. ಪೇಜ್(೧೯೬೨), 'ಸಾಮಾಜಿಕ ಸಾಮರಸ್ಯ ಅಥವಾ ಸಾಮಂಜಸ್ಯವನ್ನು ಹೊಂದಿರುವ ಒಂದು ಸಾಮಾಜಿಕ ನೆಲೆಯನ್ನೇ ಸಮುದಾಯ' ಎನ್ನಬಹುದು ಎಂದಿದ್ದಾರೆ.*("Wherever the members of any group small or large live together in such a way that share, not this or that particular interest, but the basic conditions of a common life, we call that group a community".)*

ಲುಂಡ್‌ಬರ್ಗ್(೧೯೫೮) ಅವರು 'ಮಾನವರು ನಿಯಮಿತ ಭೌಗೋಳಿಕ ಪ್ರದೇಶದಲ್ಲಿ ವಾಸಿಸುತ್ತಿದ್ದು ಒಂದೇ ರೀತಿಯ ಪರಸ್ಪರಾವಲಂಬಿತ ಜೀವನ ಸಾಗಿಸುತ್ತಿರುವುದಕ್ಕೆ' ಸಮುದಾಯ ಎಂದು ಕರೆದಿದ್ದಾರೆ. *(Community is "a human population living with in a limited geographic area and carrying on a common interdependent life".)*ಅಗ್‌ಬರ್ನ್ ಮತ್ತು ನಿಮ್‌ಕಾಫ್(೧೯೭೯), ಅವರು 'ಸಂಕುಚಿತ ಕ್ಷೇತ್ರದಲ್ಲಿ ಸಾಮಾಜಿಕ ಜೀವನದ ಸಂಪೂರ್ಣವಾದ ವ್ಯವಸ್ಥೆಯೇ ಸಮುದಾಯವಾಗಿದೆ' ಎಂದಿದ್ದಾರೆ. *(Community is "the total organization of social life with a limited area".)*ಈ ವ್ಯಾಖ್ಯೆಗಳು ಸಮುದಾಯವು ಬಹಳ ವಿಶಾಲವಾದ ಅರ್ಥವನ್ನು ಹೊಂದಿದೆ ಮತ್ತು ತನ್ನೊಳಗೆ ಹಲವಾರು ಅಂಶಗಳನ್ನು ಒಳಗೊಂಡಿದೆ ಎಂಬುದನ್ನು ಸೂಚಿಸುತ್ತವೆ. ಯಾವುದೇ ಒಂದು ಸಮೂಹ ಅಥವಾ ಸಂಘವನ್ನು ನಾವು ಸಮುದಾಯ ಎಂಬುದಾಗಿ ಕರೆಯಬೇಕಾದರೆ ಅದು ಕೆಲವೊಂದು ಲಕ್ಷಣಗಳನ್ನು ಅಥವಾ ಮೂಲಾಂಶಗಳನ್ನುಹೊಂದಿರಬೇಕು.

೧.೨ ಸಮುದಾಯದ ಲಕ್ಷಣ ಮತ್ತು ಮೂಲಾಂಶಗಳು

ನಿರ್ದಿಷ್ಟವಾದ ಸ್ಥಳ: ಪ್ರತಿಯೊಂದು ಸಮುದಾಯವು ಒಂದು ನಿಶ್ಚಿತ ನೆಲೆಯನ್ನು ಹೊಂದಿರುತ್ತದೆ.ಸಮುದಾಯದ ಕಲ್ಪನೆಯು ಯಾವಾಗಲೂ ನಿಶ್ಚಿತ ಭೂಪ್ರದೇಶವನ್ನು ಅವಲಂಬಿಸಿರುತ್ತದೆ.ಒಂದು ನಿಶ್ಚಿತ ಭೂಪ್ರದೇಶದಲ್ಲಿ ಶಾಶ್ವತವಾಗಿ ನೆಲೆಯೂರಲು ಆರಂಭಿಸಿದ ಮೇಲೆಯೇ ಒಂದು ಸಮೂಹವು 'ಸಮುದಾಯ' ಎನಿಸಿಕೊಳ್ಳುತ್ತದೆ.ಈ ಭೌತಿಕ ನೆಲೆಯು ಜನರ ಸಾಮಾಜಿಕ ಜೀವನದ ಮೇಲೆ, ಅವರ ಕುಟುಂಬ, ಮತ-ಧರ್ಮ, ನಂಬಿಕೆ-ಶ್ರದ್ಧೆ ಆಹಾರ-ವಿಹಾರ, ಆಚಾರ-ವಿಚಾರ, ವ್ಯವಹಾರ ಇವುಗಳ ಮೇಲೆ ಗಣನೀಯ ಪ್ರಭಾವವನ್ನು ಬೀರುತ್ತದೆ.

ಸಾಮುದಾಯಿಕ ಭಾವನೆ: ಒಂದು ನಿರ್ದಿಷ್ಟ ಪ್ರದೇಶದಲ್ಲಿ ನೆಲೆಸಿರುವ ಜನರಲ್ಲಿ ಆ ಸಮುದಾಯದ ಬಗೆಗೆ ಅದರ, ಅಭಿಮಾನಗಳು ಸಹಜವಾಗಿ ಬೆಳೆದು ಬರುತ್ತದೆ. ಅದನ್ನೇ ನಾವು ಸಾಮುದಾಯಿಕ ಭಾವನೆ ಅಥವಾ 'ನಾವು' ಎನ್ನುವ ಭಾವನೆ ಎಂದು ಕರೆಯುತ್ತೇವೆ. ಸಮುದಾಯವು ಪರಸ್ಪರ ಸುಖ ದುಃಖಗಳಲ್ಲಿ ಭಾಗಿಯಾಗುವ ವ್ಯಕ್ತಿಗಳ ಸಮೂಹ, ಅವರಲ್ಲಿ ಸಾಮೂಹಿಕ ಐಕ್ಯತೆಯ ಭಾವನೆ ಇರುತ್ತದೆ.ಮಾನಸಿಕ ಏಕರೂಪತೆ ವ್ಯಕ್ತಿಗಳಲ್ಲಿ ನಿಕಟ ಸಂಬಂಧವನ್ನೇರ್ಪಡಿಸುತ್ತದೆ.ಸಾಮುದಾಯಿಕ ಭಾವನೆ ಸದಾ ಜಾಗೃತವಾಗಿರಬೇಕಾದರೆ ಜನರಲ್ಲಿ ಸಮಾನ ಆಸಕ್ತಿಗಳು, ದೃಷ್ಟಿಕೋನ, ಜೀವನ ವಿಧಾನಗಳು ಇರಬೇಕಾಗುತ್ತದೆ.ಒಂದೇ ಸ್ಥಳದಲ್ಲಿ ವಾಸಿಸುವ ಜನರು ಸಹಜವಾಗಿ ಭಾವನಾತ್ಮಕತೆಯನ್ನು ಬೆಳೆಸಿಕೊಳ್ಳುತ್ತಾರೆ.

ಸ್ಥಿರತೆ: ಸಮುದಾಯವು ಜನರ ಗುಂಪು, ದೊಂಬಿ ಹಾಗೂ ಇತರ ಸಮೂಹಗಳಂತೆ ಕ್ಷಣಿಕವಾದುದಲ್ಲ. ಇದು ಸ್ಥಿರವಾದುದು. ಗ್ರಾಮ, ನಗರ, ಆದಿವಾಸಿ ನೆಲೆ ಮುಂತಾದುವುಗಳು ಸ್ಥಿರವಾದ ಮತ್ತು ಶಾಶ್ವತವಾದ ಸಮುದಾಯಗಳಾಗಿವೆ. ಕಾರಣಾಂತರಗಳಿಂದ ಅಲ್ಲಿರುವ ಜನರು ಸ್ಥಳಾಂತರ ಹೊಂದಬಹುದು.ಆದರೆ ಸಮುದಾಯಗಳು ಮಾತ್ರ ಶಾಶ್ವತವಾಗಿರುತ್ತವೆ.

ವಿಶಿಷ್ಟ ಹೆಸರು: ಪ್ರತಿಯೊಂದು ಸಮುದಾಯವೂ ತನ್ನದೇ ಆದ ವಿಶಿಷ್ಟ ಹೆಸರನ್ನು ಹೊಂದಿರುತ್ತವೆ. ಅದು ನಗರವಾಗಿರಲಿ, ಹಳ್ಳಿಯಾಗಿರಲಿ, ಆದಿವಾಸಿ ಸಮೂಹವಾಗಿರಲಿ, ದೇಶವಾಗಿರಲಿ, ಇದಕ್ಕೊಂದು ನಿರ್ದಿಷ್ಟವಾದ ಹೆಸರು ಇರುತ್ತದೆ.ಆ ಮೂಲಕವೇ ಅದನ್ನು ಗುರುತಿಸಲಾಗುತ್ತದೆ.

ಸ್ವಾಭಾವಿಕತೆ ಅಥವಾ ಸಹಜತೆ:ಸಂಘ, ಸಂಸ್ಥೆ ಹಾಗೂ ಉಳಿದ ಸಮೂಹಗಳು ವಿಶಿಷ್ಟ ಹಿತಾಸಕ್ತಿಗಳ ಪೂರೈಕೆಗಾಗಿ ಜನರಿಂದ ರಚಿಸಲ್ಪಟ್ಟ ಕೃತಕ ಘಟಕಗಳೆಂದು ಕರೆದರೆ ಸಮುದಾಯಗಳು ಸಹಜ ಮತ್ತು ಸ್ವಾಭಾವಿಕವಾಗಿ ಬೆಳೆದು ಬಂದ ಮಾನವೀಯ ನೆಲೆಗಳಾಗಿವೆ. ಜನರು ಹುಟ್ಟಿನ ಕಾರಣದಿಂದಲೇ ಸಮುದಾಯದ ಸದಸ್ಯರಾಗುತ್ತಾರೆ. ಆದ್ದರಿಂದ ಅದರ ಸದಸ್ಯತ್ವವು ಅನೈಚ್ಛಿಕವಾದುದು.ಸಮುದಾಯವು ಇದ್ದಕ್ಕಿದ್ದಂತೆ ಅಥವಾ ದಿಢೀರನೆ ಉದಯಿಸುವುದಿಲ್ಲ. ಅದು ಕ್ರಮೇಣವಾಗಿ, ಮಂದಗತಿಯಿಂದ ವಿಕಾಸ ಹೊಂದಿಬರುವುದು.

ಸಾಮಾಜಿಕ ನಿಯಂತ್ರಣ: ಪ್ರತಿಯೊಂದು ಸಮುದಾಯವೂ ಕಾಲಾನುಕ್ರಮದಲ್ಲಿ ತನ್ನದೇ ಆದ ರೂಢಿ-ಸಂಪ್ರದಾಯಗಳು, ಲೋಕಾಚಾರ ಮತ್ತು ನೈತಿಕ ನಿಯಮಗಳು, ಆಚರಣೆ-ನಂಬಿಕೆಗಳನ್ನು ಬೆಳೆಸಿಕೊಂಡು ತನ್ನ ಸದಸ್ಯರುಗಳ ನಡತೆಯನ್ನು ನಿಯಂತ್ರಿಸುತ್ತದೆ.

ಗಾತ್ರ: ಸಮುದಾಯದ ಗಾತ್ರ ಇಷ್ಟೇ ಎಂದು ನಿರ್ಧರಿಸಲು ಸಾಧ್ಯವಿಲ್ಲ. ಅದು ಚಿಕ್ಕದಾಗಿರಬಹುದು ಇಲ್ಲವೇ ದೊಡ್ಡದಾಗಿರಬಹುದು. ಹಳ್ಳಿ, ಪಟ್ಟಣಗಳಂತಹ ಚಿಕ್ಕ ಸಮುದಾಯಗಳು ಇರುವಂತೆ ನಗರ, ರಾಷ್ಟ್ರಗಳಂತಹ ಬೃಹತ್ ಸಮುದಾಯಗಳೂ ಇರಬಹುದು.

ಹಿಂದೆ ಸಮುದಾಯಗಳು ಸ್ವತಂತ್ರ ಮತ್ತು ಸ್ವಯಂ ಪರಿಪೂರ್ಣವಾಗಿದ್ದವು.ಜನರು ಮಿತವಾದ ಬೇಡಿಕೆಗಳನ್ನು ಸಂಕುಚಿತ ಕ್ಷೇತ್ರದಲ್ಲಿಯೇ ಪೂರೈಸಿಕೊಂಡು ಸಂತೃಪ್ತ ಜೀವನವನ್ನು ಸಾಗಿಸುತ್ತಿದ್ದರು. ಆಧುನಿಕ ಸಂಕೀರ್ಣ ಸಮಾಜದಲ್ಲಿ ಬೇಡಿಕೆಗಳು ಅಗಣಿತ ಮತ್ತು ವೈವಿಧ್ಯಮಯವಾಗಿರುತ್ತವೆ. ಅಸಂಖ್ಯಾತ ಬೇಡಿಕೆಗಳನ್ನು ತೃಪ್ತಿ ಪಡಿಸಿಕೊಳ್ಳುವ ಸಲುವಾಗಿ ಒಂದು ಸಮುದಾಯವು ಅನ್ಯ ಸಮುದಾಯಗಳ ಮೇಲೆ ಅವಲಂಬಿತವಾಗಿರುವುದು ಅನಿವಾರ್ಯವಾಗಿದೆ. ಹೀಗೆ ಯಾವುದೇ ಸಮುದಾಯವು ನಿರ್ಮಾಣವಾಗಬೇಕಾದರೆ ನಿರ್ದಿಷ್ಟವಾದ ಪ್ರದೇಶ ಮತ್ತು ಸಾಮುದಾಯಿಕ ಭಾವನೆಗಳು ಅವಶ್ಯಕವಾದ ಲಕ್ಷಣಗಳಾಗಿವೆ.

೧.೩ ಕರ್ನಾಟಕದಲ್ಲಿ ಸಮುದಾಯಗಳು:

ರಾಷ್ಟ್ರದ ಬೇರೆ ರಾಜ್ಯಗಳಂತೆ ಕರ್ನಾಟಕದಲ್ಲಿಯೂ ಹಲವಾರು ಸಮುದಾಯಗಳು ಕಂಡುಬರುತ್ತವೆ. ಮುಖ್ಯವಾಗಿ ಗ್ರಾಮ, ನಗರ, ಆದಿವಾಸಿ ಮತ್ತು ವಿವಿಧ ಜಾತಿ ಸಮುದಾಯಗಳು

ಕಂಡುಬರುತ್ತವೆ. ಇಂದು ಬೇರೆಲ್ಲಾ ಸಮುದಾಯಗಳಿಗಿಂತ ಜಾತಿ ಸಮುದಾಯಗಳು ಹೆಚ್ಚು ಹೆಚ್ಚು ಸಂಘಟಿತವಾಗುತ್ತಿವೆ. ಸರ್ಕಾರ ಅಥವಾ ಇತರ ಸಂಘ ಸಂಸ್ಥೆಗಳಿಂದ ಸಹಾಯ ಪಡೆಯುವ ದೃಷ್ಟಿಯಿಂದ ಮತ್ತು ಈಗಾಗಲೇ ಪಡೆದಿರುವ ಸೌಲಭ್ಯಗಳನ್ನು ಉಳಿಸಿಕೊಳ್ಳುವ ಸಲುವಾಗಿ ತಮ್ಮದೇ ಆದ ಸಂಘಗಳನ್ನು ಕಟ್ಟಿಕೊಂಡು ಹೋರಾಟ ಮಾಡುತ್ತಿವೆ.

ಆಧುನಿಕತೆ, ಶಿಕ್ಷಣ, ವಿಜ್ಞಾನ, ತಂತ್ರಜ್ಞಾನಗಳ ಬೆಳವಣಿಗೆಯಿಂದಾಗಿ ಜಾತಿಯ ಭಾವನೆಯು ಅಳಿದು ಹೋಗುವ ಬದಲು ಮಠ, ಮಂದಿರ, ರಾಜಕೀಯ, ಮೀಸಲಾತಿ, ಹಿಂದುಳಿದ ವರ್ಗ ಮುಂತಾದ ಹೆಸರುಗಳಲ್ಲಿ ಹೆಚ್ಚು ಹೆಚ್ಚು ಸಂಘಟಿತವಾಗುತ್ತಿರುವುದು ಕಂಡುಬರುತ್ತಿದೆ. ಇದರಿಂದ ಅನನುಕೂಲಗಳೇ ಹೆಚ್ಚಾಗಿ ಆಗುತ್ತಿದ್ದರೂ ಕೆಲವೊಮ್ಮೆ ಈ ಸಂಘಟನೆಗಳಿಂದಾಗಿ ಬಡವರಿಗೆ, ನಿರುದ್ಯೋಗಿಗಳಿಗೆ, ಶಿಕ್ಷಣದ ಸೌಲಭ್ಯಗಳಿಂದ ವಂಚಿತರಾಗುತ್ತಿರುವ ವಿದ್ಯಾರ್ಥಿಗಳಿಗೆ ಅನುಕೂಲಗಳೂ ಆಗುತ್ತಿವೆ. ಪ್ರತಿಯೊಂದು ಜಾತಿ ಸಮುದಾಯಗಳು ತಮ್ಮದೇ ಆದ ಮಠ, ಜಾತಿ ಸಂಘಗಳನ್ನು ಕಟ್ಟಿಕೊಂಡು ತನ್ಮೂಲಕ ಶಿಕ್ಷಣ ಸಂಸ್ಥೆಗಳು, ಅನಾಥಾಶ್ರಮಗಳು, ಹಾಸ್ಟೆಲ್‌ಗಳು, ಆಸ್ಪತ್ರೆಗಳು, ವಿವಾಹ ವೇದಿಕೆಗಳನ್ನು ಸ್ಥಾಪನೆ ಮಾಡಿ ತಮ್ಮ ಸಮುದಾಯದ ಬಡವರಿಗೆ ನೆರವಾಗುತ್ತಿರುವುದನ್ನು ಕಾಣಬಹುದು. ಜೊತೆಗೆ ತಮ್ಮ ಸಾಂಪ್ರದಾಯಿಕವಾದ ಸಾಮಾಜಿಕ-ಸಾಂಸ್ಕೃತಿಕ ಆಚರಣೆಗಳನ್ನು ಉಳಿಸಿ ಬೆಳೆಸುವ ಪ್ರಯತ್ನಗಳನ್ನೂ ಇವು ಮಾಡುತ್ತಿವೆ. ಈ ದೃಷ್ಟಿಯಿಂದ ಜಾತಿ ಸಮುದಾಯಗಳಿಂದ ಅದೇ ಜಾತಿಯ ಇತರರಿಗೆ ನೆರವಾಗುತ್ತಿದೆಯಾದರೂ ಜಾತಿಯ ಪೋಷಣೆಯಿಂದಾಗಿ ಅನುಕೂಲಗಳಿಗಿಂತ ಅನನುಕೂಲಗಳೇ ಹೆಚ್ಚಾಗುವ ಸಾಧ್ಯತೆಯಿದೆ.

೧.೪ ದಕ್ಷಿಣ ಕನ್ನಡ ಜಿಲ್ಲೆಯ ಸಮುದಾಯಗಳು:

ಕರ್ನಾಟಕದ ಇತರ ಜಿಲ್ಲೆಗಳಂತೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲೂ ಹಲವಾರು ಸಮುದಾಯಗಳು ಅಸ್ತಿತ್ವದಲ್ಲಿವೆ. ಗ್ರಾಮ, ನಗರ, ಆದಿವಾಸಿ ಸಮುದಾಯಗಳು ಮಾತ್ರವಲ್ಲದೆ, ಅನೇಕ ಜಾತಿ ಸಮುದಾಯಗಳು ಮತ್ತು ಧಾರ್ಮಿಕ ಸಮುದಾಯಗಳೂ ಅಸ್ತಿತ್ವದಲ್ಲಿವೆ. ಇಲ್ಲಿನ ಪ್ರತಿಯೊಂದು ಸಮುದಾಯಗಳೂ ತಮ್ಮದೇ ಆದ ಸಾಂಸ್ಕೃತಿಕ ನಂಬಿಕೆಗಳು, ಸಾಮಾಜಿಕ ಪದ್ಧತಿಗಳು, ಧಾರ್ಮಿಕ ಆಚರಣೆಗಳನ್ನು ಹೊಂದಿದ್ದು, ಪ್ರತಿಯೊಂದನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಅಧ್ಯಯನ ಮಾಡುವ ಅಗತ್ಯತೆ ಇದೆ. ಇಲ್ಲಿನ ಜಾತಿ ಸಮುದಾಯಗಳಲ್ಲಿ ಬಹಳ ಮುಖ್ಯವಾದವುಗಳು ಬಂಟ, ಬಿಲ್ಲವ, ಮೊಗವೀರ,

ಬ್ರಾಹ್ಮಣ, ಗೌಡ, ಅಗಸ, ಭಂಡಾರಿ, ವಿಶ್ವಕರ್ಮ, ದೇವಾಡಿಗ, ಕೊರಗ, ಕುಡುಬಿ, ಮಲೆಕುಡಿಯ ಮುಂತಾದುವುಗಳು.ಇಲ್ಲಿನ ಸಮುದಾಯಗಳಲ್ಲಿ ಬಂಟ, ಬಿಲ್ಲವ ಅಥವಾ ಈಡಿಗ, ಮೊಗವೀರ ಸಮುದಾಯಗಳು ಹೆಚ್ಚು ಪ್ರಬಲವಾಗಿದ್ದು, ಇವರಲ್ಲಿ ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಮೊಗೇರ ಸಮುದಾಯದ ಸಂಕ್ಷಿಪ್ತ ವಿವರಗಳನ್ನು ಇಲ್ಲಿ ಗಮನಿಸಬಹುದಾಗಿದೆ.

೧.೫ ಸಾಮಾಜಿಕ ಬದಲಾವಣೆ

ಬದಲಾವಣೆಯು ನಿಸರ್ಗದ ಒಂದು ನಿಯಮವಾಗಿದ್ದು, ಮಾನವ ಸಮಾಜವೂ ಕೂಡ ಈ ನಿಯಮಕ್ಕೆ ಬದ್ಧವಾಗಿದೆ.ಇತಿಹಾಸದುದ್ದಕ್ಕೂ ಮಾನವ ಸಮಾಜವು ಹಲವಾರು ಬದಲಾವಣೆಗಳಿಗೆ ಒಳಗಾಗಿದೆ. ಇದೊಂದು ನಿರಂತರ ಪ್ರಕ್ರಿಯೆಯಾಗಿದ್ದು, ಬದಲಾವಣೆರಹಿತ ಸಮಾಜದ ಅಸ್ತಿತ್ವವನ್ನು ಊಹಿಸುವುದು ಕಷ್ಟ ಸಾಧ್ಯ.ಬಹಳ ಸಾಂಪ್ರದಾಯಿಕವೆಂದು ಕರೆಯಲ್ಪಡುವ ಸಮಾಜಗಳು ಮತ್ತು ಸಂಸ್ಕೃತಿಗಳು ಕೂಡ ಬದಲಾವಣೆಯ ಪ್ರಕ್ರಿಯೆಗೆ ಒಳಗಾಗಿವೆ. ಈ ರೀತಿಯ ಬದಲಾವಣೆಯು ಸಮಾಜದ ಆಂತರಿಕ ಗುಣ.ನಿರಂತರವಾಗಿ ಈ ತೆರನಾದ ಬದಲಾವಣೆಗಳು ನಡೆಯುತ್ತಾ ಬಂದಿರುವುದರಿಂದ ಮಾನವ ಇಂದು ಅನಾಗರಿಕ ಸ್ಥಿತಿಯಿಂದ ನಾಗರಿಕ ಸ್ಥಿತಿಗೆ ಬರಲು ಸಾಧ್ಯವಾಗಿದೆ.ಪರಿವರ್ತನೆ ಯಾವ ಮಟ್ಟದಲ್ಲಿ, ಎಷ್ಟು ಪ್ರಮಾಣದಲ್ಲಿ ಸಂಭವಿಸುತ್ತದೆ ಎಂಬುದನ್ನು ಹೇಳುವುದು, ಅಳತೆ ಮಾಡುವುದು ಬಹಳ ಕಷ್ಟ.ಆದರೂ ಬದಲಾವಣೆ ನಿರಂತರವಾಗಿ ನಡೆಯುತ್ತಲೇ ಇರುತ್ತದೆ.

ಈ ವಿಷಯವಾಗಿ ಮಾತರ್(೧೯೮೭),ಈ ರೀತಿ ಅಭಿಪ್ರಾಯ ಪಡುತ್ತಾರೆ. 'ಸಮಾಜವು ತನ್ನ ಅಸ್ತಿತ್ವದ ಉಳಿವಿಗಾಗಿ ನಿರಂತರವಾಗಿ ಬದಲಾವಣೆಯ ಪ್ರಕ್ರಿಯೆಗೆ ಒಳಪಡುತ್ತದೆ' ಎಂದಿದ್ದಾರೆ. (*"Social Scientists generally agree that societies change continuously inorder to survive"*).ಇದಕ್ಕೆ ಪೂರಕವಾಗಿ ಕಿಂಗ್ಸ್‌ಲೇ ಡೇವಿಸ್(೧೯೮೧), ಅವರು 'ಜಗತ್ತಿನ ಇತರ ಎಲ್ಲಾ ಅಂಶಗಳಂತೆ ಸಮಾಜವೂ ಕೂಡ ಬದಲಾವಣೆಯ ಪ್ರಕ್ರಿಯೆಗೆ ಒಳಗೊಳ್ಳುವುದನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ' ಎಂದಿದ್ದಾರೆ.*("The fact remains that societies, like all other phenomena, unremittingly and inevitably change")*

ನಮ್ಮ ಹಿರಿಯರ ಜೀವನ ಶೈಲಿ, ಸಂಸ್ಕೃತಿ, ಆಚಾರ-ವಿಚಾರ, ನೀತಿ-ನಿಯಮ, ಸಂಘ-ಸಂಸ್ಥೆ ಮುಂತಾದವುಗಳಲ್ಲಿ ಹಲವಾರು ಸಂಕೀರ್ಣವಾದ ಪರಿವರ್ತನೆಗಳು ಉಂಟಾಗಿವೆ. ಇಂತಹ ಬದಲಾವಣೆಗಳು ಕೆಲವೊಂದು ಉದ್ದೇಶಗಳನ್ನು ಈಡೇರಿಸಿಕೊಳ್ಳಲು ನಡೆಸಿದ ಉದ್ದೇಶಿತ ಪ್ರಕ್ರಿಯೆಯಾಗಿರಬಹುದು ಅಥವಾ ಯಾವುದೇ ನಿರ್ದಿಷ್ಟ ಉದ್ದೇಶವಿರದೆ ತನ್ನಷ್ಟಕ್ಕೆ ತಾನೇ ಸಂಭವಿಸಿದ ಸಹಜ ಪ್ರಕ್ರಿಯೆಯಾಗಿರಬಹುದು. ಸಾಮಾನ್ಯವಾಗಿ ಇಂತಹ ಬದಲಾವಣೆಗೆ ಸಮಾಜವೊಂದರ ಆಂತರಿಕ ಅಥವಾ ಬಾಹ್ಯ ಶಕ್ತಿಗಳು ಕಾರಣವಾಗಿರಬಹುದು.

ಈ ವಿಷಯವಾಗಿ Kornblum (1961) ಹೀಗೆ ಅಭಿಪ್ರಾಯ ಪಡುತ್ತಾರೆ.'ಸಾಮಾನ್ಯವಾಗಿ ಸಾಮಾಜಿಕ ಬದಲಾವಣೆಗೆ ಎರಡು ಪ್ರಮುಖ ಕಾರಣಗಳನ್ನು ಗುರುತಿಸಬಹುದಾಗಿದೆ.ಮೊದಲನೆಯದಾಗಿ ಬೆಳೆಯುತ್ತಿರುವ ಜನಸಂಖ್ಯೆಯ ಬೇಡಿಕೆಯನ್ನು ಪೂರೈಸುವ ದೃಷ್ಟಿಯಿಂದ ಸಾಮಾಜಿಕ ಸಂಘಟನೆ ಮತ್ತು ಸಂಸ್ಕೃತಿಯಲ್ಲುಂಟಾಗುವ ಬದಲಾವಣೆಗಳನ್ನು ಆಂತರಿಕ ಬದಲಾವಣೆ ಎಂದಿದ್ದಾರೆ.ಎರಡನೆಯದಾಗಿ ಸಾಮಾಜಿಕ ಬದಲಾವಣೆಗೆ ಕಾರಣವಾಗಬಹುದಾದ ಸಮಾಜವೊಂದರ ಮೇಲೆ ಪ್ರಭಾವ ಬೀರುವ ಬಾಹ್ಯ ಶಕ್ತಿಗಳು'.

ವಾಸುದೇವ(೧೯೭೬), ಅವರ ಪ್ರಕಾರ 'ಹೊಸ ಬದುಕಿನ ಆಶಯ ಹಾಗೂ ತಿಳುವಳಿಕೆ, ಸಾರಿಗೆ-ಸಂಪರ್ಕ, ವಿಜ್ಞಾನ ಮತ್ತು ತಂತ್ರಜ್ಞಾನ, ಆಧುನಿಕ ಶಿಕ್ಷಣ ಇತರ ಸಮಾಜದೊಂದಿಗಿನ ಭೌತ ಮತ್ತು ಅಭೌತ ಸಂಸ್ಕೃತಿಗಳ ವಿನಿಮಯ ಪರಿಣಾಮಕಾರಿ ಮುಖಂಡತ್ವ ಇತ್ಯಾದಿಗಳು ಸಾಮಾಜಿಕ ಬದಲಾವಣೆಗೆ ಪೂರಕ ಶಕ್ತಿಯಾಗಿ ಕೆಲಸ ಮಾಡುತ್ತವೆ'.*(A new felt need and awareness, effective means of communication, transportation, science and technology, education, confrontation with other culture, cultural exchange of men and material, the appearance of dynamic and effective leadership etc. Are important means of social change.)*

ಸಮಾಜದಲ್ಲಿ ಬದಲಾವಣೆಯು ವಿವಿಧ ಹಂತಗಳಲ್ಲಿ ಸಂಭವಿಸುವುದನ್ನು ಕಾಣಬಹುದು.ವ್ಯಕ್ತಿಯೊಬ್ಬನ ನಡೆ-ನುಡಿ, ಆಚಾರ-ವಿಚಾರ, ರೀತಿ-ನೀತಿ ಮುಂತಾದವುಗಳಲ್ಲಾದ

ಬದಲಾವಣೆಯು ವ್ಯಕ್ತಿಗತ ಬದಲಾವಣೆಯಾದರೆ ಅದು ಸಾಮೂಹಿಕವಾದಾಗ ಅದನ್ನು ಸಮೂಹದ ಬದಲಾವಣೆ ಎನ್ನಬಹುದು.ಹಾಗೆಯೇ ಕೆಲವೊಮ್ಮೆ ಈ ಬದಲಾವಣೆಯು ರಾಜ್ಯ, ರಾಷ್ಟ್ರಮಟ್ಟದಲ್ಲಿಯೂ ಸಂಭವಿಸಬಹುದು.ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗಳು ಸಾರ್ವತ್ರಿಕವಾದುದಾದರು ಅವುಗಳ ಬದಲಾವಣೆಯ ಗತಿ ಅಥವಾ ಪ್ರಮಾಣ ಏಕಪ್ರಕಾರವಾಗಿರದೆ, ಸಮಾಜದಿಂದ ಸಮಾಜಕ್ಕೆ, ಒಂದು ಸಂಸ್ಕೃತಿಯಿಂದ ಇನ್ನೊಂದು ಸಂಸ್ಕೃತಿಗೆ ಭಿನ್ನವಾಗಿರಬಹುದು.ಕೆಲವೊಂದು ಸಮಾಜಗಳು ಪ್ರಕ್ರಿಯೆಗೆ ಬಹಳ ಬೇಗನೆ ಒಳಗಾಗಬಹುದು.ಇನ್ನು ಕೆಲವು ಸಮಾಜಗಳು ಬದಲಾವಣೆಯನ್ನು ಒಪ್ಪಿಕೊಳ್ಳದೆ ಇರಬಹುದು.

ಈ ವಿಷಯಕ್ಕೆ ಪೂರಕವಾಗಿ ವಾಸುದೇವ(೧೯೭೬), ಅವರು ಈ ರೀತಿ ಅಭಿಪ್ರಾಯ ಪಡುತ್ತಾರೆ. ಜಡತ್ವ', ಹೊಸತನದ ಭಯ, ಅಜ್ಞಾನ, ಸಾಂಪ್ರದಾಯಿಕತೆ, ವಿಚಾರ ಹೀನತೆ, ಪಟ್ಟಭದ್ರ ಹಿತಾಸಕ್ತಿ ಮುಂತಾದವುಗಳು ಸಾಮಾಜಿಕ ಬದಲಾವಣೆಯ ಮೇಲೆ ಮಿತಿಯನ್ನು ಹೇರುತ್ತವೆ' ಎಂದಿದ್ದಾರೆ.*("Inertia, fear of the new, ignorance, traditions, ethnocentrism, vested interest etc are prominent factors which resist social change".)* ಆದ್ದರಿಂದ ಬದಲಾವಣೆಯನ್ನು ಯಾವಾಗಲೂ ಎಲ್ಲಾ ಸಮಾಜಗಳೂ ಒಪ್ಪಿಕೊಳ್ಳುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಎಷ್ಟೋ ಅಂಶಗಳು ಬದಲಾವಣೆಯನ್ನು ತಡೆಯುವ ಪ್ರಯತ್ನವನ್ನು ಮಾಡುತ್ತಲೇ ಇರುತ್ತವೆ. ಆದರೂ ಈ ಎಲ್ಲಾ ಅಡೆತಡೆಗಳ ಮಧ್ಯೆಯೂ ಬದಲಾವಣೆಯು ಕೆಲವೊಮ್ಮೆ ವೇಗವಾಗಿ ಕೆಲವೊಮ್ಮೆ ನಿಧಾನಗತಿಯಲ್ಲಿ ನಿರಂತರವಾಗಿ ಸಂಭವಿಸುತ್ತಲೇ ಇರುತ್ತದೆಂದು ಹೇಳಬಹುದು. ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳೆಂದರೆ ಏನು?ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದರೆ ಆ ಬಗ್ಗೆ ಇರುವ ಕೆಲವೊಂದು ವ್ಯಾಖ್ಯೆಗಳನ್ನು ಗಮನಿಸುವುದು ಸೂಕ್ತ. ಅವುಗಳೆಂದರೆ,

Kornblum(1988),'ಸಮೂಹ ಮತ್ತು ಜನಸಂಖ್ಯೆ, ಪಾತ್ರ ಮತ್ತು ಸಾಮಾಜಿಕ ಅಂತರ್‌ಕ್ರಿಯೆಯ ನಮೂನೆ ಸಂಸ್ಥೆಗಳ ರಚನೆ ಮತ್ತು ಕಾರ್ಯ ಹಾಗೂ ಸಮಾಜ ಒಂದರ ಸಂಸ್ಕೃತಿಯಲ್ಲಿ ಕಾಲ ಕಾಲಕ್ಕೆ ಆದಂತಹ ವ್ಯತ್ಯಾಸವನ್ನು ಸಾಮಾಜಿಕ ಬದಲಾವಣೆ' ಎನ್ನಬಹುದು ಎಂದಿದ್ದಾರೆ.*("The term social change refers to variations over time in the*

ecological ordering of populations and communities in patterns of roles and social interactions, in the structure and functioning of institutions and in the culture of societies".Biesanz and Biesanz (1980), ಪ್ರಕಾರ 'ಸಾಮಾಜಿಕ ಬದಲಾವಣೆ ಎಂದರೆ ಸಾಮಾಜಿಕ ರಚನೆ, ಸಾಂಸ್ಕೃತಿಕ ವ್ಯಾಖ್ಯೆ ಹಾಗೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ರಿಯೆಯಿಂದುಂಟಾದ ಭೌತಿಕ ವಿಚಾರಗಳಲ್ಲಿನ ಮಾರ್ಪಾಡು' ಎಂದಿದ್ದಾರೆ. *("Social change as significant alterations in social structure, in cultural definitions and action" in the Material Products and socio-cultural action.)*

Jayaram (೧೯೮೧) ಅವರು 'ಆಧುನಿಕ ಸನ್ನಿವೇಶಕ್ಕೆ ಅನುಗುಣವಾಗಿ ಸಮಾಜವೊಂದರ ಸಂಪ್ರದಾಯ, ನಡೆ-ನುಡಿ, ಪಾತ್ರ, ಸಂಸ್ಥೆ ಮತ್ತು ಮೌಲ್ಯಗಳಲ್ಲಿನ ಮಾರ್ಪಾಟನ್ನು ಸಾಮಾಜಿಕ ಬದಲಾವಣೆ ಎನ್ನಬಹುದು' ಎಂದಿದ್ದಾರೆ. *("Social change involves a process in which established traditional social forms-behaviour patterns, roles, institutions and related values are modified or altered in response to new conditions".)Sharan*(1991),ಅವರ ಪ್ರಕಾರ 'ಸಾಮಾಜಿಕ ಬದಲಾವಣೆಯು ಸಮಾಜದ ರಚನೆ ಮತ್ತು ಸಂಸ್ಕೃತಿಯ ಮೇಲೆ ಆಂತರಿಕ ಮತ್ತು ಬಾಹ್ಯ ಒತ್ತಡಗಳಿಂದಾಗಿ ಉಂಟಾಗುವುದು. ಸಾಮಾಜಿಕ ರಚನೆಯು ಮೂಲಭೂತ ಸೌಕರ್ಯಗಳು ಮತ್ತು ಅದರ ಹಂಚಿಕೆ ಹಾಗೂ ಜನರಿಂದ ಅದರ ಉಪಯೋಗ ಇವುಗಳನ್ನು ಒಳಗೊಂಡರೆ ಸಂಸ್ಕೃತಿಯು ಸಮಾಜ ಒಂದರ ಸಂಪ್ರದಾಯ, ಧರ್ಮ, ಬದುಕಿನ ನಿಯಮ ಮತ್ತು ಪರಸ್ಪರ ವರ್ತನೆ ಇವುಗಳನ್ನು ಒಳಗೊಂಡಿದೆ' ಎಂದಿದ್ದಾರೆ.*("Social change takes place in the structure and culture of society through internal and external sources. The structure of society refers to infrastructural facilities, their distribution among people and also people's access to them. The culture of society consists of traditions, religion and norms of living and behaving with each other".)*

ಸಾಮಾಜಿಕ ಬದಲಾವಣೆಗೆ ಸಂಬಂಧಿಸಿದ ಹಾಗೆ ಹಲವು ಸಿದ್ಧಾಂತಗಳು ಪ್ರತಿಪಾದಿಸಲ್ಪಟ್ಟಿದ್ದು, ಇವುಗಳಲ್ಲಿ ಒಮ್ಮತದ ಅಭಿಪ್ರಾಯಗಳು ಕಂಡುಬರುವುದಿಲ್ಲ. ಈ ನಿಟ್ಟಿನಲ್ಲಿ ಯೋಗೇಂದ್ರ ಸಿಂಗ್ (೧೯೮೦), ಅವರು 'ಸಾಮಾಜಿಕ ಬದಲಾವಣೆಯ ವಿಚಾರಗಳು ಸಾರ್ವತ್ರಿಕವಾಗಿ ಚರ್ಚೆಗೆ ಒಳಗಾಗಿದ್ದರೂ ಒಮ್ಮತವಾದ ಸೈದ್ಧಾಂತಿಕ ವಿಚಾರಗಳನ್ನು ಹೊಂದಲು ಸಾಧ್ಯವಾಗಿಲ್ಲ' ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. *("Social change is a widely discussed subject but its theoretical position in sociology remains controversial. The interest in this area has also fluctuated in sociology because of many vexed theoretical problems, especially those relating to explanation or prediction of the course and content of social change".)*

ಸಾಮಾಜಿಕ ಬದಲಾವಣೆಯ ಸಿದ್ಧಾಂತಕ್ಕೆ ಸಂಬಂಧಿಸಿದ ಹಾಗೆ ಕಿಂಗ್ಸ್ಲೇ ಡೇವಿಸ್ ಅವರು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ. 'ಸಾಮಾನ್ಯವಾಗಿ ಸಾಮಾಜಿಕ ಬದಲಾವಣೆಯ ಸಿದ್ಧಾಂತಗಳು ಬದಲಾವಣೆಯ ದಿಕ್ಕು ಮತ್ತು ರೀತಿಗಳನ್ನು ವಿವರಿಸಲು ಹೆಚ್ಚು ಆಸಕ್ತಿ ಹೊಂದಿದಂತೆ ಕಾಣುತ್ತಿದ್ದು, ಕೆಲವೊಂದು ಸಿದ್ಧಾಂತಗಳಲ್ಲಿ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಚಿಂತನೆಗಳು ಸಾಗುವುದನ್ನು ಕಾಣಬಹುದು'.ಸಾಮಾಜಿಕ ಬದಲಾವಣೆಯ ಸಿದ್ಧಾಂತಗಳಲ್ಲಿ ವಿಕಾಸವಾದಿ ಸಿದ್ಧಾಂತ, ಚಕ್ರೀಯ ಸಿದ್ಧಾಂತ, ಕಾರ್ಯಾತ್ಮಕ ಸಿದ್ಧಾಂತ ಹಾಗೂ ಸಂಘರ್ಷ ಸಿದ್ಧಾಂತಗಳು ಪ್ರಮುಖವಾದವುಗಳಾಗಿವೆ. ವಿಕಾಸವಾದಿ ಸಿದ್ಧಾಂತವು ಡಾರ್ವಿನ್ನನ ಜೈವಿಕ ವಿಕಾಸವಾದ ಸಿದ್ಧಾಂತದಿಂದ ಪ್ರಭಾವಿತರಾದ ಸ್ಪೆನ್ಸರ್, ವೈಟ್, ಲಿಂಟನ್ ಮುಂತಾದವರಿಂದ ಪ್ರತಿಪಾದಿಸಲ್ಪಟ್ಟಿದೆ (*Biesanz and Biesanz*,1980). ಇವರುಗಳ ಪ್ರಕಾರ ಬದಲಾವಣೆಯು ಒಂದು ನಿರಂತರ ಕ್ರಿಯೆಯಾಗಿದ್ದು ನಿರ್ದಿಷ್ಟ ದಿಕ್ಕಿನೆಡೆಗೆ ಸಾಗುತ್ತದೆ ಮತ್ತು ಅದು ಎಂದಿಗೂ ಪುನರಾವರ್ತನೆಗೊಳ್ಳುವುದಿಲ್ಲ. ಹೆಚ್ಚು ಕಡಿಮೆ ವಿಕಾಸವಾದಿ ಸಿದ್ಧಾಂತಕ್ಕೆ ವಿರುದ್ಧವಾಗಿ ಚಕ್ರೀಯ ಸಿದ್ಧಾಂತವು ಪ್ರತಿಪಾದಿಸಲ್ಪಟ್ಟಿದೆ. ಈ ಸಿದ್ಧಾಂತವನ್ನು ಸೊರೋಕಿನ್, ಅರ್ನಾಲ್ಡ್ ಟೈನಬಿ, ಸ್ಪೆಂಗ್ಲರ್ ಮುಂತಾದವರು ಪ್ರತಿಪಾದಿಸಿದ್ದಾರೆ.ಇವರ ಪ್ರಕಾರ ಸಾಮಾಜಿಕ ಬದಲಾವಣೆಗಳ ವಿವಿಧ ಹಂತಗಳು ಸದಾ ಪುನರಾವರ್ತನೆ ಆಗುತ್ತಿರುತ್ತದೆ.ಕಾರ್ಯಾತ್ಮಕ ಸಿದ್ಧಾಂತವನ್ನು ಮರ್ಟನ್, ಪಾರ್ಸನ್ ಮುಂತಾದವರು ಪ್ರತಿಪಾದಿಸಿದ್ದಾರೆ.ಇವರುಗಳು ಸಮಾಜದ ವಿವಿಧ ಭಾಗಗಳು ಪರಸ್ಪರ ಅವಲಂಬಿಯಾಗಿದ್ದು, ಸಮಾಜದ ಆರೋಗ್ಯ ಮತ್ತು ಸಮಷ್ಟಿಯನ್ನು

ಕಾಯ್ದುಕೊಳ್ಳುವ ದಿಸೆಯಲ್ಲಿ ಸಾಮಾಜಿಕ ಬದಲಾವಣೆಗಳು ಅನಿವಾರ್ಯ ಎಂದಿದ್ದಾರೆ.ಇನ್ನೊಂದು ಪ್ರಮುಖ ಸಿದ್ಧಾಂತವಾದ ಸಂಘರ್ಷ ಸಿದ್ಧಾಂತವು ಕಾರ್ಲ್‌ಮಾರ್ಕ್ಸ್, ಜಾರ್ಜ್‌ಸಿಮ್ಮೆಲ್, ರಾಲ್ಫ್‌ಡೆಹರನ್ ಡೋರ್ಸ್ಪ್ ಮುಂತಾದವರಿಂದ ಪ್ರತಿಪಾದಿಸಲ್ಪಟ್ಟಿದ್ದು, ಸಂಘರ್ಷವು ಸಾಮಾಜಿಕ ಬದಲಾವಣೆಯ ಮೂಲ ಶಕ್ತಿಯಾಗಿ ಕೆಲಸ ಮಾಡುವುದಲ್ಲದೆ, ಸಂಘರ್ಷವು ನಿರ್ಣಾಯಕ ಮತ್ತು ರಚನಾತ್ಮಕ ಪರಿಣಾಮವನ್ನು ಬೀರಬಲ್ಲದ್ದಾಗಿದೆ ಎಂದಿದ್ದಾರೆ.

೧.೬ ಭಾರತೀಯ ಸಮಾಜದಲ್ಲಿ ಸಾಮಾಜಿಕ ಬದಲಾವಣೆ

ಭಾರತೀಯ ಸಮಾಜದ ಬದಲಾವಣೆಗೆ ಸಂಬಂಧಿಸಿದಂತೆ ಭಾರತೀಯ ಸಾಮಾಜಿಕ ಚಿಂತಕರಲ್ಲಿ ಅಧ್ಯಯನಕ್ಕೆ ಅಳವಡಿಸಿಕೊಳ್ಳಬಹುದಾದ ಸಾಮಾನ್ಯ ಸಿದ್ಧಾಂತದ ಬಗ್ಗೆ ಏಕ ಅಭಿಪ್ರಾಯ ಕಂಡುಬರುವುದಿಲ್ಲ. ಈ ಬಗ್ಗೆ ಯೋಗೇಂದ್ರ ಸಿಂಗ್ (೧೯೮೩), ಅವರು "*The Problem of Social Change Theory are therefore, not Specific to Indian Sociology but to sociology in general*" ಎಂದು ಅಭಿಪ್ರಾಯಪಟ್ಟಿದ್ದಾರೆ. ಯೋಗೇಂದ್ರ ಸಿಂಗ್‌ರವರು ಭಾರತೀಯ ಸಮಾಜದ ಅಧ್ಯಯನಕ್ಕೆ ಸಂಬಂಧಿಸಿದಂತೆ ತಮ್ಮ ಅಧ್ಯಯನದಲ್ಲಿ ಮೂರು ಬಗೆಯ ದೃಷ್ಟಿಕೋನಗಳು ಪ್ರಮುಖವಾದವುಗಳು ಎಂದಿದ್ದಾರೆ. ಅವುಗಳೆಂದರೆ, ವಿಕಾಸವಾದಿ ದೃಷ್ಟಿಕೋನ, ಸಾಂಸ್ಕೃತಿಕ ದೃಷ್ಟಿಕೋನ ಮತ್ತು ರಚನಾತ್ಮಕ ದೃಷ್ಟಿಕೋನ. ವಿಕಾಸವಾದಿ ದೃಷ್ಟಿಕೋನದ ಪ್ರಮುಖ ಪ್ರತಿಪಾದಕರೆಂದರೆ ಚಾರ್ಲ್ಸ್‌ಮೆಟ್‌ಕಾಲ್ಫ್, ಸರ್ ಹೆನ್ರಿಮೆಯಿನ್, ಬೊಡೆನ್ ಪೊವೆಲ್ ಮುಂತಾದವರು ವಿಕಾಸವಾದಿ ಅಧ್ಯಯನವು ಭಾರತೀಯ ಗ್ರಾಮೀಣ ಸಮಾಜ, ಜಾತಿ ಮತ್ತು ಕುಟುಂಬ ಈ ಮೂರು ಅಂಶಗಳಿಗೆ ಪ್ರಾಧಾನ್ಯತೆ ನೀಡಿದ್ದು ಇವುಗಳ ಹುಟ್ಟು, ಬೆಳವಣಿಗೆ ಮುಂತಾದವುಗಳ ಬಗ್ಗೆ ಗಮನಹರಿಸಿರುವುದು ಕಂಡುಬರುತ್ತದೆ.

ಸಾಂಸ್ಕೃತಿಕ ದೃಷ್ಟಿಕೋನದ ಪ್ರಮುಖ ಪ್ರತಿಪಾದಕರೆಂದರೆ, ಎಂ.ಎನ್. ಶ್ರೀನಿವಾಸ್ ಇವರು ಸಮಾಜದಲ್ಲಿನ ಬದಲಾವಣೆಯು ಆಂತರಿಕ ಬಾಹ್ಯ ಒತ್ತಡಗಳಿಂದ ಉಂಟಾದುದು ಎಂದಿದ್ದಾರೆ.ಅಲ್ಲದೆ, ಸಂಸ್ಕೃತೀಕರಣ ಮತ್ತು ಪಾಶ್ಚಾತ್ಯೀಕರಣ ಸಿದ್ಧಾಂತಗಳಲ್ಲಿ ಇವುಗಳನ್ನು ಪ್ರತಿಪಾದಿಸಿದ್ದಾರೆ. ಬಹುಶಃ ಶ್ರೀನಿವಾಸ್ ಅವರ ಅಧ್ಯಯನವು ಭಾರತೀಯ ಸಮಾಜದ ಬದಲಾವಣೆಗೆ ಸಂಬಂಧಿಸಿದ ಹಾಗೆ ನಡೆದ ಒಂದು ವ್ಯವಸ್ಥಿತ ಅಧ್ಯಯನ ಎನ್ನಬಹುದು. ಇದಕ್ಕೆ ಪೂರಕವಾಗಿ

ಯೋಗೇಂದ್ರ ಸಿಂಗ್ (೧೯೮೩), ಅವರು"*The Concepts of Sanskritization and Westernization as formulated by M.N. Srinivas were the First Systematic attempt to define the Process of Change taking place in the Indian Society"*ಎಂದಿದ್ದಾರೆ.

ಸಂಸ್ಕೃತೀಕರಣಕ್ಕೆ ಸಂಬಂಧಿಸಿದ ಹಾಗೆ ಎಂ.ಎನ್. ಶ್ರೀನಿವಾಸ್ (೧೯೫೨), ಅವರು 'ಕೆಳಸ್ತರದ ಹಿಂದೂ ಜಾತಿ ಅಥವಾ ಆದಿವಾಸಿ ಅಥವಾ ಇತರ ಸಮೂಹವು ತನ್ನ ಪದ್ಧತಿಗಳನ್ನೂ, ಕ್ರಿಯಾ ವಿಧಿ, ತತ್ವಾದರ್ಶ ಮತ್ತು ಜೀವನ ವಿಧಾನಗಳನ್ನು ಮೇಲ್ಜಾತಿಯ ಅದರಲ್ಲೂ ಮುಖ್ಯವಾಗಿ ದ್ವಿಜ ಜಾತಿಯ ರೀತಿ-ನೀತಿಗಳನುಸಾರವಾಗಿ ಮಾರ್ಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಸಂಸ್ಕೃತೀಕರಣ ಎನ್ನಬಹುದು' ಎಂದಿದ್ದಾರೆ. *("Sanskritization is the process by a 'low' Hindu caste, or tribal or other group, changes its customs, ritual, ideology, and way of life in the direction of a high, and frequently, 'twice born' caste. Generally such changes are followed by a claim to a higher position in the caste hierarchy than that traditionally conceded to the claimant caste by the local community".)*

ಯೋಗೇಂದ್ರ ಸಿಂಗ್ (೧೯೮೦) ಹೇಳಿರುವಂತೆ ಎಂ.ಎನ್. ಶ್ರೀನಿವಾಸ್ ಅವರ ಇನ್ನೊಂದು ಪ್ರಮುಖ ಸಿದ್ಧಾಂತ ಪಾಶ್ಚಾತ್ಯೀಕರಣ. ಸುಮಾರು೧೫೦ವರ್ಷಗಳ ದೀರ್ಘ ಕಾಲದ ಬ್ರಿಟಿಷರ ಆಡಳಿತ ಮತ್ತು ಪಾಶ್ಚಾತ್ಯ ಸಮಾಜದೊಡನೆ ಸ್ವಾತಂತ್ರ್ಯ ನಂತರವೂ ಮುಂದುವರೆದ ಸಂಪರ್ಕ ಭಾರತೀಯರನ್ನು ಪಾಶ್ಚಿಮಾತ್ಯರ ಸಂಸ್ಕೃತಿ, ಜೀವನ ಶೈಲಿ ಮುಂತಾದವುಗಳನ್ನು ಅನುಕರಿಸುವಂತೆ ಮಾಡಿದೆ ಎಂದು ಅಭಿಪ್ರಾಯ ಪಡುತ್ತಾರೆ. ಎಂ.ಎನ್. ಶ್ರೀನಿವಾಸ್ ಅವರ ಪ್ರಕಾರ ಪಾಶ್ಚಾತ್ಯೀಕರಣದ ಪ್ರಕ್ರಿಯೆಯು "ಪಶ್ಚಿಮದ ಸಮಾಜವೊಂದರ ಜೊತೆ ಬಹುದೀರ್ಘವಾದ ಸಾಂಸ್ಕೃತಿಕ ಸಂಪರ್ಕವನ್ನು ಹೊಂದಿದ್ದರ ಫಲವಾಗಿ ಪಾಶ್ಚಿಮಾತ್ಯೇತರ ಸಮಾಜದ ತಾಂತ್ರಿಕತೆ, ಸಂಸ್ಥೆಗಳು, ತತ್ವಾದರ್ಶ ಹಾಗೂ ಮೌಲ್ಯಗಳಲ್ಲಿ ಉಂಟಾಗಬಹುದಾದ ಪರಿವರ್ತನೆಗಳನ್ನು ಸಂಕೇತಿಸುತ್ತದೆ.*("The Changes brought about in Indian society and culture as a result of over 150 years of British rule,*

and the term subsumes changes occurring at different levels-technology, institutions, ideology, values".)

ಭಾರತೀಯ ಸಮಾಜದ ಬದಲಾವಣೆಗೆ ಸಂಬಂಧಿಸಿದ ಹಾಗೆ ಇರುವ ಮತ್ತೊಂದು ಪ್ರಮುಖ ದೃಷ್ಟಿಕೋನವೆಂದರೆ, ರಚನಾತ್ಮಕ ದೃಷ್ಟಿಕೋನ. ಆರ್.ಕೆ.ಮುಖರ್ಜಿ, ಐ.ಪಿ.ದೇಸಾಯಿ, ಕೆ.ಎಮ್.ಕಪಾಡಿಯ, ಟಿ.ಎನ್. ಮದನ್, ಎಮ್.ಷಾ, ಪಿ.ಎಮ್.ಕೊಲೆಂಡ ಮುಂತಾದವರು ರಚನಾತ್ಮಕ ದೃಷ್ಟಿಕೋನ ಹೊಂದಿದ ಪ್ರಮುಖರಾಗಿದ್ದಾರೆ. ಇವರ ನಿಲುವುಗಳನ್ನು ಯೋಗೇಂದ್ರ ಸಿಂಗ್ (೧೯೮೩), ಅವರು ಈ ರೀತಿಯಲ್ಲಿ ತಿಳಿಸುತ್ತಾರೆ. "ರಚನಾತ್ಮಕ ಸಿದ್ಧಾಂತವಾದಿಗಳಿಗೆ ಸಾಮಾಜಿಕ ಬದಲಾವಣೆ ಎಂದರೆ ಅವಲಂಬಿತ ಪರಿವರ್ತಕಗಳಲ್ಲಾದ ಮಾರ್ಪಾಡಿನ ಜೊತೆಗೆ ಸ್ವತಂತ್ರ ಪರಿವರ್ತಕಗಳ ಮಧ್ಯೆ ಸಂಬಂಧ ಕಲ್ಪಿಸುವುದೂ ಆಗಿದೆ". *("A structural focus in the study of change does not only imply a variation in the dependent variables through which changes are being identified but also establishing relationship with independent casual variables".)*

ಒಟ್ಟಿನಲ್ಲಿ ಸಾಮಾಜಿಕ ಬದಲಾವಣೆಗೆ ಸಂಬಂಧಿಸಿದ ಹಾಗೆ ಯಾವುದೇ ಒಂದು ಸಿದ್ಧಾಂತವನ್ನು ಪರಿಪೂರ್ಣವಾದ ಸಿದ್ಧಾಂತವೆಂದು ಒಪ್ಪಿ ಅಳವಡಿಸಿಕೊಳ್ಳಲು ಸಾಧ್ಯವಿಲ್ಲವಾದುದರಿಂದ ಸಂದರ್ಭಕ್ಕೆ ಅನುಗುಣವಾಗಿ ಈ ಅಧ್ಯಯನದಲ್ಲಿ ಬೇರೆ ಬೇರೆ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಲಾಗಿದೆ.ಕ್ಷೇತ್ರಕಾರ್ಯದ ಜೊತೆಗೆ ಹಲವಾರು ಚಿಂತಕರು, ಬಂಟ ಸಮಾಜದ ಹಿರಿಯರೊಂದಿಗೆ ಚರ್ಚೆ, ಬಂಟರ ಬಗ್ಗೆ ಇರುವ ಸಾಹಿತ್ಯಗಳ ಅಧ್ಯಯನ ಮಾಡುವುದರ ಮೂಲಕ ಬಂಟರ ನೈಜವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳನ್ನು ಗುರುತಿಸಿ ಅಧ್ಯಯನದಲ್ಲಿ ಪ್ರಸ್ತುತ ಪಡಿಸುವ ಪ್ರಯತ್ನ ಮಾಡಲಾಗಿದೆ.

ಯೋಗೇಂದ್ರ ಸಿಂಗ್ (೨೦೦೦) ಅವರು ತಮ್ಮ ಗ್ರಂಥ*Culture Change in India*ದಲ್ಲಿ ಸಾಂಸ್ಕೃತಿಕ ಮೌಲ್ಯಗಳು, ಸಂಸ್ಥೆಗಳು ಹಾಗೂ ಸಿದ್ಧಾಂತಗಳ ಕುರಿತು ವಿಮರ್ಶಾತ್ಮಕವಾದ ಮೌಲ್ಯಮಾಪನ ಮಾಡಿದ್ದಾರೆ.ಭಾರತವು ಜಾಗತೀಕರಣದ ಈ ಸಂದರ್ಭದಲ್ಲಿ ಆಧುನಿಕ ಸವಾಲುಗಳಾದ ಸಾಂಸ್ಕೃತಿಕ ಮತ್ತು ಆರ್ಥಿಕ ವಿಚಾರಗಳಿಗೆ ಯಾವ ರೀತಿಯಲ್ಲಿ ಪ್ರತಿಕ್ರಿಯಿಸಿದೆ

ಎಂಬುದರ ಕುರಿತು ಅಧ್ಯಯನ ಮಾಡಿದ್ದಾರೆ.ಈ ಗ್ರಂಥದಲ್ಲಿ ಜಾಗತೀಕರಣದ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಶೈಲಿ ಯಾವ ರೀತಿಯಲ್ಲಿ ಪ್ರಭಾವಿತವಾಗಿದೆ ಎಂಬುದರ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ.ಡಾ. ಸಿಂಗ್ ಅವರು ಈ ಅಧ್ಯಯನದಲ್ಲಿ ವಿದ್ಯುನ್ಮಾನ ಮಾಧ್ಯಮ *(Electronic Media)*, ವಲಸೆ, ಅಂತರ್ ಸಾಂಸ್ಕೃತಿಕ ಪ್ರಕ್ರಿಯೆ, ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ ಮಟ್ಟದ ಸಂಸ್ಕೃತಿಯ ಮೇಲೆ ಜಾಗತಿಕ ಸಂಸ್ಕೃತಿ ಯಾವ ರೀತಿ ಪ್ರಭಾವ ಬೀರಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಯೋಗೇಂದ್ರ ಸಿಂಗ್(೧೯೭೩) ಅವರು ತಮ್ಮ ಪ್ರಮುಖ ಗ್ರಂಥವಾದ *Modernization of Indian Tradition* zÀ°è ಭಾರತದಲ್ಲಿ ಸಾಮಾಜಿಕ ಬದಲಾವಣಾ ಪರಿಕಲ್ಪನೆಯ ಉಗಮ, ಸಿದ್ಧಾಂತ, ವಿಧಾನಗಳನ್ನು ಕುರಿತು ಚರ್ಚಿಸಿದ್ದಾರೆ.ಅವುಗಳೆಂದರೆಸಂಸ್ಕೃತೀಕರಣ, ಪಾಶ್ಚಾತ್ಯೀಕರಣ, *little and Grate traditions, Multiple traditions,*ರಚನಾತ್ಮಕ ಬದಲಾವಣೆಯ ಸಿದ್ಧಾಂತ, ವಿಧಾನಗಳನ್ನು ಕುರಿತು ಚರ್ಚಿಸಿದ್ದಾರೆ.ಭಾರತದಲ್ಲಿ ಬದಲಾವಣೆಯುಂಟಾಗಲು ಕಾರಣೀಯ ಅಂಶಗಳಾದ ಶಿಕ್ಷಣ, ನಗರೀಕರಣ, ಕೈಗಾರಿಕೀಕರಣ ಮುಂತಾದವುಗಳನ್ನು ಕುರಿತು ವಿಚಾರ ಮಂಡಿಸಿದ್ದಾರೆ.ಇಸ್ಲಾಂ ಧರ್ಮವು ಭಾರತದ ಆಧುನೀಕರಣ ಪ್ರಕ್ರಿಯೆಯ ಮೇಲೆ ಯಾವ ರೀತಿ ಪರಿಣಾಮ ಬೀರಿದೆ ಹಾಗೂ ಭಾರತದಲ್ಲಿ ಯಾವ ರೀತಿ ಇಸ್ಲಾಮೀಕರಣವಾಗಿದೆ ಎಂಬುದನ್ನು ಈ ಗ್ರಂಥದಲ್ಲಿ ವಿವರಿಸಿದ್ದಾರೆ.ಇದೊಂದು ಸಾಮಾಜಿಕ ಬದಲಾವಣೆ ಕುರಿತ ಉತ್ತಮ ಕೃತಿ ಎಂಬುದಾಗಿ ಪರಿಗಣಿಸಬಹುದು. ಯೋಗೇಂದ್ರ ಸಿಂಗ್ (೧೯೮೦) ಅವರು ತಮ್ಮ ಗ್ರಂಥ '*Social Stratification and Change in India*' ದಲ್ಲಿ ಸಾಮಾಜಿಕ ಪರಿಕಲ್ಪನೆ, ಸಾಮಾಜಿಕ ಬದಲಾವಣೆ ಮತ್ತು ಸಿದ್ಧಾಂತಗಳ ಕುರಿತು ಬರೆದಿದ್ದಾರೆ.

ಗಿರಿರಾಜ್ ಗುಪ್ತ (೧೯೭೬) ಇವರು ತಮ್ಮ ಗ್ರಂಥ '*Family and Social change in Modern India*' ದಲ್ಲಿ ಕುಟುಂಬ ಮತ್ತು ಕೌಟುಂಬಿಕ ಸಂಬಂಧದಲ್ಲಿ ಆಗುತ್ತಿರುವ ಬದಲಾವಣೆಗಳ ಕುರಿತು ವಿವಿಧ ಲೇಖನ ಸಂಗ್ರಹಣೆ ಮಾಡಿದ್ದಾರೆ.ಈ ಗ್ರಂಥದಲ್ಲಿ ಸಮಾಜಶಾಸ್ತ್ರಜ್ಞರುಗಳಾದ ಜಾರ್ಜ್‌ಕುರಿಯನ್, ಪ್ರಮೀಳಾ ಕಪೂರ್, ಐಲಿನ್‌ರಾಸ್ ಮುಂತಾದವರು ತಮ್ಮ ವಿಚಾರಗಳನ್ನು ಪ್ರಸ್ತುತ ಪಡಿಸಿದ್ದಾರೆ.

ಎಂ.ಎನ್. ಶ್ರೀನಿವಾಸ್ (೧೯೭೭) ಅವರು ಸಂಪಾದನೆ ಮಾಡಿದ *Dimensions of Social Change in India* ಎಂಬ ಗ್ರಂಥದಲ್ಲಿ ಸಾಮಾಜಿಕ ಬದಲಾವಣೆ ಕುರಿತಂತೆ ಹಲವಾರು ದೃಷ್ಟಿಕೋನದಲ್ಲಿ ಅಧ್ಯಯನ ಮಾಡಿದ್ದಾರೆ.ಈ ಗ್ರಂಥದಲ್ಲಿ ಶ್ರೀನಿವಾಸ್ ಅವರು ಸಾಮಾಜಿಕ ಪರಿಕಲ್ಪನೆ, ಸಾಮಾಜಿಕ ಬದಲಾವಣೆಯ ಅಧ್ಯಯನ ವಿಧಾನ, ಧರ್ಮ ಹಾಗೂ ಬದಲಾವಣೆ, ಬುಡಕಟ್ಟು ಮತ್ತು ಬದಲಾವಣೆ, ಮಾಧ್ಯಮ ಮತ್ತು ಬದಲಾವಣೆ, ಗ್ರಾಮೀಣ ಸಾಮಾಜಿಕ ಬದಲಾವಣೆ ಕುರಿತು ಚರ್ಚೆ ಮಾಡಿದ್ದಾರೆ. ವಿಲ್ಬರ್ಟ್ ಮೂರೆ(೧೯೭೪)ತಮ್ಮ ಗ್ರಂಥ *Social Change*ನಲ್ಲಿ ಸಾಮಾಜಿಕ ಬದಲಾವಣೆಯ ವಿವಿಧ ಪರಿಕಲ್ಪನೆ, ಆಧುನೀಕರಣ, ಕೈಗಾರೀಕರಣ, ಸಾಮಾಜಿಕ ಬದಲಾವಣೆಯ ಕಾರಣ ಕುರಿತು ಸವಿಸ್ತಾರವಾದ ವಿವರಣೆ ನೀಡಿದ್ದಾರೆ.

ವಿಲಾಸ್ ಎ. ಸಂಗವೆ (೧೯೬೨) ಅವರು *Changing Patterns of Caste Organisation in Kolhapur City* ಎಂಬ ಅಧ್ಯಯನದಲ್ಲಿ ವಿವಿಧ ಜಾತಿಗಳನ್ನು ಅಧ್ಯಯನ ಮಾಡಿದ್ದಾರೆ.ಮುಖ್ಯವಾಗಿ ದೈವಜ್ಞ ಬ್ರಾಹ್ಮಣರು, ಪಂಚಾಲ ಬ್ರಾಹ್ಮಣರು, ಆರ್ಯ ಕ್ಷತ್ರಿಯರು, ನಾಮದೇವ ಸಿಂಪಿ, ಕುಂಬಾರ, ನಬಿಕರು, ವಡ್ಡರು, ಚಮ್ಮಾರರು, ದೋರ್ ಹಾಗೂ ಮತಂಗ್ ಮುಂತಾದ ಜಾತಿಗಳನ್ನು ಅಧ್ಯಯನ ಮಾಡಿದ್ದಾರೆ.ಸಂಗವೆ ಆವರು ಜಾತಿ ಸಂಘಟನೆಗಳೇ ಜಾತೀಯತೆಯ ಭಾವನೆ ತೀವ್ರವಾಗಲು ಕಾರಣವಾಗಿವೆ ಎಂಬುದನ್ನು ತಮ್ಮ ಅಧ್ಯಯನದಲ್ಲಿ ಕಂಡುಕೊಂಡಿದ್ದಾರೆ.ಕೆ.ಎಂ.ಕಂಪಾಡಿಯ (೧೯೬೨) ವರು ಜಾತಿ ಕುರಿತಂತೆ ಭಾರತ ಸರ್ಕಾರದ ನಿಲುವು ಹಾಗೂ ಜಾತಿಯ ನವೀನ ಪಾತ್ರಗಳ ಕುರಿತು ವಿವರವಾಗಿ ಚರ್ಚಿಸಿದ್ದಾರೆ.

ವಿಕ್ಟರ್ ಎಸ್.ಡಿ. ಸೋಜಾ (೧೯೯೪) ಅವರು ಭಾರತೀಯ ಸಂಸ್ಕೃತಿಯ ನೀತಿಯಲ್ಲಿ ಆಗುತ್ತಿರುವ ಬದಲಾವಣೆ ಕುರಿತು ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ.ಸಾಂಸ್ಕೃತಿಕ ನೀತಿಯನ್ನು ನಿರೂಪಿಸುವಲ್ಲಿ ಜಾತಿಗಳು ಯಾವ ರೀತಿಯಲ್ಲಿ ಪಾತ್ರ ನಿರ್ವಹಿಸುತ್ತವೆ ಎಂಬುದನ್ನು ವಿಮರ್ಶಾತ್ಮಕವಾಗಿ ವಿವರಿಸಿದ್ದಾರೆ.ಜಾನ್‌ಕಾಡ್‌ವೆಲ್ ಮತ್ತು ಇತರರು (೧೯೯೬) ಕರ್ನಾಟಕದ ೯ ಹಳ್ಳಿಗಳಲ್ಲಿ ಕೌಟುಂಬಿಕ ರಚನೆ, ವಿವಾಹದಲ್ಲಿನ ನಮೂನೆ, ಕುಟುಂಬದ ಭವಿಷ್ಯ ಕುರಿತು ಅಧ್ಯಯನ ಕೈಗೊಂಡಿದ್ದರು. ಈ ಅಧ್ಯಯನದಲ್ಲಿ ಇವರು ಜನಸಂಖ್ಯಾ ಬೆಳವಣಿಗೆ, ಸಾಮಾಜಿಕ ಮತ್ತು ಆರ್ಥಿಕ

ಒತ್ತಡಗಳಿಂದಾಗಿ ಕುಟುಂಬ ಮತ್ತು ವಿವಾಹಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ ಎಂಬುದನ್ನು ಕಂಡುಕೊಂಡಿದ್ದಾರೆ.

ಕಮ್ರಾ(೧೯೯೧) ಅವರು ತಮ್ಮ ಪಂಜಾಬಿನ ನಗರ ಸಮುದಾಯದ ಅಧ್ಯಯನದಲ್ಲಿ ಸಾಮಾಜಿಕ ಬದಲಾವಣೆಯಲ್ಲಿ ನಗರೀಕರಣದ ಪಾತ್ರವನ್ನು ಕುರಿತು ಚರ್ಚಿಸಿದ್ದಾರೆ.ಈ ಅಧ್ಯಯನದಲ್ಲಿ ಅವರು ಸಾಮಾಜಿಕ ಬದಲಾವಣೆಗೆ ನಗರೀಕರಣವೇ ಮೂಲ ಕಾರಣವಾಗಿದೆ ಎಂಬುದನ್ನು ಕಂಡುಕೊಂಡಿದ್ದಾರೆ.ಅರಬಿಂದ ದತ್ತ ಗುಪ್ತಾ(೧೯೭೩)ಅವರು ಜಾತಿಪದ್ಧತಿಯ ವೃತ್ತಿಯಲ್ಲಿ ಆಗುತ್ತಿರುವ ಚಲನೆಯ ಬಗ್ಗೆ ಕಲ್ಕತ್ತಾದಲ್ಲಿ ಅಧ್ಯಯನ ಕೈಗೊಂಡಿರುತ್ತಾರೆ.ಇವರು ತಮ್ಮ ಅಧ್ಯಯನದಲ್ಲಿ ವಿವಿಧ ಜಾತಿಗಳ ಪಟ್ಟಿ ಮಾಡಿ ಜಾತಿಯ ಚಲನೆಯ ಕುರಿತು ಸವಿಸ್ತಾರವಾದ ವಿವರಣೆ ನೀಡಿದ್ದಾರೆ.

ಎಸ್.ಸಿ.ದುಬೆ(೧೯೯೪)ಅವರು ತಮ್ಮ ಗ್ರಂಥ *Tradition and Development* ನಲ್ಲಿ ಸಂಪ್ರದಾಯ ಮತ್ತು ಅಭಿವೃದ್ಧಿಗಿರುವ ಸಂಬಂಧವನ್ನು ಕುರಿತು ವಿವರವಾಗಿ ಚರ್ಚಿಸಿದ್ದಾರೆ.ಸಾಮಾಜಿಕ, ಸಾಂಸ್ಕೃತಿಕ ಅಂಶಗಳ ಅಭಿವೃದ್ಧಿ ಹಾಗೂ ಬದಲಾವಣೆಯ ಮೇಲೆ ಯಾವ ರೀತಿ ಪ್ರಭಾವ ಬೀರುತ್ತವೆ ಎಂಬುದನ್ನು ಅಧ್ಯಯನ ಮಾಡಿದ್ದಾರೆ.ಹಿಂದೂ ಅವಿಭಕ್ತ ಕುಟುಂಬಗಳಲ್ಲಿ ಆಗುತ್ತಿರುವ ಬದಲಾವಣೆ, ಸಮೂಹ-ಸಂಪರ್ಕ ಮಾಧ್ಯಮ, ಸಾಮಾಜಿಕ ಅಭಿವೃದ್ಧಿ ಮುಂತಾದವುಗಳ ಕುರಿತು ದೀರ್ಘವಾದ ಚರ್ಚೆ ಮಾಡಿದ್ದಾರೆ.ಸಾಮಾಜಿಕ ಸಂರಚನೆಯಲ್ಲಿನ ಬದಲಾವಣೆ ಹಾಗೂ ಸಾಂಸ್ಕೃತಿಕ ಮೌಲ್ಯಗಳಲ್ಲಿನ ವಿಕಾಸವು ಅಭಿವೃದ್ಧಿಗೆ ಪೂರಕವಾದ ಅಂಶ ಎಂದಿದ್ದಾರೆ.

ಭಾರತೀಯ ಸಮಾಜದಲ್ಲಿ ಆಗುತ್ತಿರುವ ಸಾಮಾಜಿಕ ಬದಲಾವಣೆ ಕುರಿತು ರಘುವೀರ್ ಸಿನ್ಹಾ (೧೯೭೫) ಅವರು ಗ್ರಂಥ ರಚಿಸಿದ್ದು, ಇದರಲ್ಲಿ ಬದಲಾವಣೆಯ ಅಂಶಗಳನ್ನು ಕುರಿತು ಚರ್ಚಿಸಿದ್ದಾರೆ.ಅವಿಭಕ್ತ ಕುಟುಂಬದಲ್ಲಿ ಆಗಿರುವ ಬದಲಾವಣೆ ಹಾಗೂ ಒಟ್ಟಾರೆ ಕುಟುಂಬದಲ್ಲಿನ ಬದಲಾವಣೆ ಕುರಿತು ಈ ಗ್ರಂಥದಲ್ಲಿ ಉಲ್ಲೇಖವಿದೆ.ಧೀರೇಂದ್ರ ವಾಜಪೇಯಿ (೧೯೭೯)ಅವರು ಭಾರತದಲ್ಲಿ ಆಗುತ್ತಿರುವ ಆಧುನೀಕರಣ ಮತ್ತು ಸಾಮಾಜಿಕ ಬದಲಾವಣೆ ಕುರಿತು ಅಧ್ಯಯನ ಮಾಡಿದ್ದಾರೆ.ತಮ್ಮ ಈ ಅಧ್ಯಯನದಲ್ಲಿ ಉತ್ತರ ಪ್ರದೇಶವನ್ನು ಪ್ರಮುಖವಾಗಿ ಗಮನದಲ್ಲಿಟ್ಟುಕೊಂಡಿದ್ದರು. ವಾಜಪೇಯಿ ಅವರು ಈ ಅಧ್ಯಯನದಲ್ಲಿ ರಾಜಕೀಯ ಸಹಭಾಗಿತ್ವದಲ್ಲಿ

ಉಂಟಾದ ಬದಲಾವಣೆ, ಸಮೂಹ ಮಾಧ್ಯಮದ ಪರಿಣಾಮ, ಉತ್ತರ ಪ್ರದೇಶದ ನಾಗರೀಕರ ಸಾಮಾಜಿಕ ಬದಲಾವಣೆಯ ಬಗೆಗಿನ ನಕಾರಾತ್ಮಕ ಮನೋಭಾವನೆ ಕುರಿತು ಸುಮಾರು ಹತ್ತು ವರ್ಷಗಳ ಕಾಲ ಅಧ್ಯಯನ ಮಾಡಿದ್ದಾರೆ.

ಪೌಲ್‌ಮಡೋಸ್ (೧೯೭೧) ಅವರು ತಮ್ಮ ಗ್ರಂಥ *The Many Faces of Change* ನಲ್ಲಿ ಸಾಮಾಜಿಕ ಬದಲಾವಣೆಯ ವಿವಿಧ ಸಿದ್ಧಾಂತಗಳನ್ನು ಕುರಿತು ಸವಿಸ್ತಾರವಾಗಿ ಚರ್ಚಿಸಿದ್ದಾರೆ. ಅವರ ಪ್ರಕಾರ *Studies of Social change have at least three optional perspectives 1.Empirical, to note patterns and directions of change, 2. Analytical, to consider emphases and patters of change,3. Evaluative, to propose and discuss types and implications of philosophies of change*ಎಂದಿದ್ದಾರೆ.

ಮಿಲ್ಟನ್ ಸಿಂಗರ್ ಮತ್ತು ಬಿ.ಎಸ್.ಕೋಹ್ನ್(೨೦೦೧) ಅವರು ಸಂಪಾದನೆ ಮಾಡಿದ *Structure and change in Indian Society* ಎಂಬ ಗ್ರಂಥದಲ್ಲಿ ಜಾತಿ, ಸಾಮಾಜಿಕ ಸಂರಚನೆ ಹಾಗೂ ಅಂತರ್‌ಜಾತಿ ಸಂಬಂಧ ಕುರಿತ ವಿವಿಧ ಲೇಖನಗಳನ್ನು ಕಲೆಹಾಕಿದ್ದಾರೆ. ಈ ಗ್ರಂಥದಲ್ಲಿ ಜಾತಿವ್ಯವಸ್ಥೆಯು ಬದಲಾಗುತ್ತಿದೆಯೇ? ಎಂಬ ಪ್ರಶ್ನೆಯ ಕುರಿತು ಎಂ.ಎನ್.ಶ್ರೀನಿವಾಸ್, ರೋವಿ, ಲೈಂಕ್ ಅವರ ಲೇಖನಗಳ ಮೂಲಕ ಚರ್ಚಿಸಲಾಗಿದೆ. ಜಾತಿಯು ಯಾವ ರೀತಿಯಲ್ಲಿ ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ವಿಲೀನಗೊಂಡಿದೆ ಎಂದು ಚರ್ಚಿಸಲಾಗಿದೆ. ಜಾತಿ, ಜಾತಿವ್ಯವಸ್ಥೆ ಹಾಗೂ ಭಾರತೀಯ ಸಮಾಜದಲ್ಲಿನ ಬದಲಾವಣೆ ಕುರಿತಂತೆ ಇರುವ ಗ್ರಂಥಗಳಲ್ಲಿ ಇದೊಂದು ಮುಖ್ಯವಾದ ಗ್ರಂಥವೆಂದರೆ ತಪ್ಪಾಗಲಾರದು.

ಬಿಮೆಲ್ ಗೋಪ್ (೧೯೯೯)ಅವರು ಸಾಮಾಜಿಕ ಬದಲಾವಣೆಯಲ್ಲಿ ತಂತ್ರಜ್ಞಾನದ ಪಾತ್ರ, ಸಾಮಾಜಿಕ ಬದಲಾವಣೆಯಲ್ಲಿನ ಅಸಮಾನತೆ, ಸಾಮಾಜಿಕ ಬದಲಾವಣೆಯಲ್ಲಿ ಶಿಕ್ಷಣದ ಪಾತ್ರ, ಶ್ರೀಮಂತ ಹಾಗೂ ಬಡ ರಾಷ್ಟ್ರಗಳಲ್ಲ್ಲ ಅಸಮಾನತೆ ಕುರಿತು ಅಧ್ಯಯನ ಮಾಡಿದ್ದಾರೆ.ಏಷ್ಯಾ ಖಂಡದಲ್ಲಿ ಸಾಮಾಜಿಕ ಬದಲಾವಣೆಗೆ ಉಂಟಾಗುವ ಮುಖ್ಯವಾದ ಅಡ್ಡಿಗಳ ಕುರಿತು ಚರ್ಚಿಸಿದ್ದಾರೆ.

ಅವರ ಪ್ರಕಾರ *Without social change and social justice not only does development lose much of its meaning, but is hardly sustainable in the long run* ಎಂದಿದ್ದಾರೆ.

ಪೌಲಿನ್ ಕೆ.ಗರ್ಗ್ ಮತ್ತು ಇಂದಿರಾ ಜೆ.ಪಾರಿಕ್ (೧೯೯೫) ಅವರು ತಮ್ಮ ಗ್ರಂಥದಲ್ಲಿ ಕೃಷಿಯಲ್ಲಿ ಆಗುತ್ತಿರುವ ಬದಲಾವಣೆಯ ಸ್ವರೂಪ, ಗುಣಲಕ್ಷಣಗಳ ಕುರಿತು ಚರ್ಚಿಸಿದ್ದು, ಇದರಲ್ಲಿ ಕೈಗಾರಿಕೀರಣದ ಪಾತ್ರದ ಬಗ್ಗೆ ಕೂಡ ಬೆಳಕು ಚೆಲ್ಲಿದ್ದಾರೆ. ಭಾರತೀಯ ಸಮಾಜವು ಯಾವ ರೀತಿಯಲ್ಲಿ ಪಾಶ್ಚಿಮಾತ್ಯ ಮೌಲ್ಯಗಳನ್ನು ಎದುರಿಸಬೇಕಾಗಿದೆ ಎಂಬ ಬಗ್ಗೆ ಚರ್ಚಿಸಿದ್ದಾರೆ.ಕಿರ್ಕ್ ಜಾನ್ಸನ್ (೨೦೦೫) ಅವರು ತಮ್ಮ ಸಂಶೋಧನಾ ಲೇಖನದಲ್ಲಿ ಗ್ರಾಮೀಣ ಭಾರತದಲ್ಲಿ ಜಾಗತೀಕರಣದ ಪ್ರಭಾವ ಹಾಗೂ ಅದರಿಂದ ಉಂಟಾದ ರಚನಾತ್ಮಕ ಮತ್ತು ಸಾಂಸ್ಕೃತಿಕ ಬದಲಾವಣೆ ಕುರಿತು ಅಧ್ಯಯನ ಮಾಡಿದ್ದಾರೆ.ಸಾರಿಗೆ, ಕೃಷಿ ಹಾಗೂ ಶಿಕ್ಷಣದಲ್ಲಾದ ಬೆಳವಣಿಗೆ ಮತ್ತು ಬದಲಾವಣೆಗಳು ಗ್ರಾಮೀಣ ಭಾರತೀಯ ವ್ಯವಸ್ಥೆಯನ್ನು ಏರು-ಪೇರು ಮಾಡಿದೆ.ಕೊಳ್ಳುಬಾಕ ಸಂಸ್ಕೃತಿ ಗ್ರಾಮೀಣ ಭಾರತದಲ್ಲೂ ಉತ್ತುಂಗಕ್ಕೇರಿದೆ.ಮಾಹಿತಿ ತಂತ್ರಜ್ಞಾನವು ಹಳ್ಳಿಗರನ್ನು ಸಹ ವಿಶ್ವದೊಡನೆ ಸಂಪರ್ಕ ಹೊಂದುವಂತೆ ಮಾಡುವಲ್ಲಿ ಸಫಲವಾಗಿದೆ.ಜಾಗತೀಕರಣದಿಂದಾಗಿ ಗ್ರಾಮಸ್ಥರು ಸಂಪ್ರದಾಯ ಹಾಗೂ ಆಧುನಿಕತೆಯ ಜೊತೆಗೆ ತಮ್ಮ ಜೀವನವನ್ನು ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ತಮ್ಮ ಅಧ್ಯಯನದಲ್ಲಿ ಕಂಡುಕೊಂಡಿದ್ದಾರೆ.

ಈ ಮೇಲೆ ಪರಾಮರ್ಶೆ ಮಾಡಲಾದ ಗ್ರಂಥಗಳು, ಲೇಖನಗಳು, ಸಂಶೋಧನಾ ಗ್ರಂಥಗಳೆಲ್ಲವೂ ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿದ್ದು, ಅಧ್ಯಯನವು ಯಾವ ನಿಟ್ಟಿನಲ್ಲಿ ಸಾಗಬೇಕು, ಯಾವ ಯಾವ ಅಂಶಗಳಿಗೆ ಒತ್ತುಕೊಡಬೇಕು, ಬದಲಾವಣೆಗೆ ಪೂರಕವಾದ ಮತ್ತು ಅದಕ್ಕೆ ತಡೆ ಒಡ್ಡುವ ಅಂಶಗಳು, ಕುಟುಂಬ ಪದ್ಧತಿ, ಅಳಿಯ ಸಂತಾನುಕಟ್ಟು, ಸಾಂಪ್ರದಾಯಿಕವಾದ ಮನೆಗಳು, ಆರಾಧನೆಗಳು, ಸಂಸ್ಕಾರಗಳು, ಕ್ರೀಡೆಗಳು, ಮಹಿಳೆಯರ ಸ್ಥಾನಮಾನ, ವಸತಿ ವ್ಯವಸ್ಥೆ, ಕಸುಬುಗಳು, ಮುಂತಾದ ಎಲ್ಲಾ ಅಂಶಗಳನ್ನೂ ಈ ಗ್ರಂಥಗಳು, ಲೇಖನಗಳು ಒಳಗೊಂಡಿವೆ. ಜೊತೆಗೆ, ಬಂಟರ ಮೂಲದ ಬಗ್ಗೆಯೂ ಉತ್ತಮವಾದ ಆಕರಗಳನ್ನು ಒದಗಿಸುತ್ತವೆ. ಅವರ ಮೂಲವನ್ನು ಆರ್ಯ, ದ್ರಾವಿಡ ಜನಾಂಗಗಳಲ್ಲಿ ಮಾತ್ರವಲ್ಲದೆ, ಬೇರೆ ಬೇರೆ ಧರ್ಮಗಳಲ್ಲಿಯೂ ಹುಡುಕುವ ಪ್ರಯತ್ನಗಳು

ಸಾಗಿವೆ. ಬಂಟರಿಗೆ ಮಠಗಳಿಲ್ಲ. ಗುರು ಪರಂಪರೆಯೂ ಇಲ್ಲ. ಅವರ ಶುಭಶೋಭನಾದಿಗಳಿಗೆ ಪುರೋಹಿತರ ಅವಶ್ಯಕತೆಯೂ ಇಲ್ಲ. ಅಲ್ಲದೆ, ಅವರದು ಅಲಿಖಿತ ಪರಂಪರೆ ಎಂಬುದನ್ನು ಈ ಅಧ್ಯಯನಗಳು ಸ್ಪಷ್ಟಪಡಿಸುತ್ತವೆ.

ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳ ಮೇಲೆ ಜಾಗತೀಕರಣದ ಪ್ರಭಾವ, ಭಾರತದಲ್ಲಿ ಸಾಮಾಜಿಕ ಬದಲಾವಣೆಗೆ ಕಾರಣೀಯ ಅಂಶಗಳಾದ ಶಿಕ್ಷಣ, ನಗರೀಕರಣ, ಕೈಗಾರಿಕೀರಣ ಮುಂತಾದ ಅಂಶಗಳ ಬಗ್ಗೆ, ಕುಟುಂಬ ಮತ್ತು ಕೌಟುಂಬಿಕ ಸಂಬಂಧಗಳಲ್ಲಿ ಆಗುತ್ತಿರುವ ಬದಲಾವಣೆ, ಧರ್ಮ ಹಾಗೂ ಬದಲಾವಣೆ, ಬುಡಕಟ್ಟು ಮತ್ತು ಬದಲಾವಣೆ, ಮಾಧ್ಯಮಗಳು ಹಾಗೂ ಬದಲಾವಣೆ, ಆಧುನೀಕರಣ, ಕೈಗಾರಿಕೀರಣ ಮುಂತಾದವುಗಳ ಕುರಿತು ವಿವಿಧ ಅಧ್ಯಯನಗಳು ಮತ್ತುಪರಾಮರ್ಶನ ಗ್ರಂಥಗಳು ಬೆಳಕು ಚೆಲ್ಲಿವೆ.

೧.೭ಸಾಹಿತ್ಯ ಅಧ್ಯಯನ ಮತ್ತು ವಿಮರ್ಶೆ

ಪಿ. ಕಮಲಾಕ್ಷ (೧೯೬೮) ಅವರ "ದಕ್ಷಿಣ ಕನ್ನಡ ಜಿಲ್ಲೆಯ ಪರಿಜನ ಗಿರಿಜನರ ಸಾಮಾಜಿಕ ಇತಿಹಾಸ" ಎಂಬ ಕೃತಿಯಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಪರಿಶಿಷ್ಟರ ಒಳಪಂಗಡಗಳನ್ನು ಪರಿಚಯಿಸಲಾಗಿದೆ. ಈ ಕೃತಿಯಲ್ಲಿ ಮುಗೇರರ ಸಾಂಸ್ಕೃತಿಕ ಬದುಕಿನ ಸ್ವಲ್ಪ ಪರಿಚಯವನ್ನು ಮಾಡಲಾಗಿದೆ. ಈ ಕೃತಿ ಸಂಶೋಧನಾತ್ಮಕ ಕೃತಿ ಅಲ್ಲದ ಕಾರಣ ಸಮಗ್ರ ಮಾಹಿತಿಯನ್ನು ಪಡೆಯಲು ಸಾಧ್ಯವಿಲ್ಲ. ಈ ಬಗ್ಗೆ ಮುನ್ನುಡಿಯಲ್ಲಿ ಎಚ್.ಎಲ್. ನಾಗೇಗೌಡರು "ಕಮಲಾಕ್ಷರು ಈ ಕೆಲಸವನ್ನು ತಕ್ಕಮಟ್ಟಿಗೆ ಮಾಡಿ ಕೃತಾರ್ಥರಾಗಿದ್ದಾರೆ. ಇನ್ನೂ ಆಳವಾದ ಅಭ್ಯಾಸ ಅವರು ಮಾಡಬಹುದಿತ್ತೋ ಏನೋ ಎಂದಿರುವುದು ಉಲ್ಲೇಖನೀಯ.

ಕೊಯಿರಾ ಬಾಳೆಪುಣಿ ಇವರ 'ತುಳುನಾಡಿನ ಮೊಗೇರರು-ಒಂದು ಜನಾಂಗೀಯ ಅಧ್ಯಯನ' (ಜಾನಪದ ಗಂಗೋತ್ರಿ ಸಂಚಿಕೆ, ಜುಲಾಯಿ ೧೯೮೨) ಮುಗೇರರ ಐತಿಹಾಸಿಕ, ಚಾರಿತ್ರಿಕ ದಾಖಲೆಗಳನ್ನು ಹುಡುಕುವ ಪ್ರಯತ್ನ ಮಾಡಲಾಗಿದೆ. ಜನಾಂಗದ ಶಿಷ್ಟಾಚಾರ, ಆರಾಧನೆ, ಆಚರಣೆ, ಹೆಣ್ಣು ಋತುಮತಿಯಾಗುವುದು, ಮದುವೆ, ಸೀಮಂತ, ಹೆರಿಗೆ, ಮರಣ, ಬಳಿಪದ್ಧತಿ, ದುಡಿ, ದುಡಿಕುಣಿತ ಇತ್ಯಾದಿಗಳ ಸೂಕ್ಷ್ಮ ಪರಿಚಯ ಮಾಡಿಕೊಡಲಾಗಿದೆ. ಮುಗೇರ ಸಂಸ್ಕೃತಿಯ

ಅಧ್ಯಯನಗಾರರಿಗೆ ಇದು ಪ್ರಾಥಮಿಕ ಮಾಹಿತಿಯನ್ನು ನೀಡುವ ಮಾರ್ಗದರ್ಶಿ ಲೇಖನವಾಗಿದೆ.ಸಿ.ಎಚ್. ಶ್ಯಾಮರವರು ಪುತ್ತೂರಿನಲ್ಲಿ ಜರಗಿದ ದಕ್ಷಿಣಕನ್ನಡ ಹಾಗೂ ಕಾಸರಗೋಡು ಜಿಲ್ಲಾ ಪ್ರಥಮ ಮುಗೇರ ಸಮ್ಮೇಳನದ ಸ್ಮರಣ ಸಂಚಿಕೆ 'ಮೊಗೇರವಾಣಿ' (೧೯೮೫)ರಲ್ಲಿ 'ಮುಗೇರ ಸಮುದಾಯ-ಒಂದು ಕಿರುಪರಿಚಯ' ಲೇಖನದಲ್ಲಿ ಮುಗೇರರ ಸಾಮುದಾಯಿಕ, ಸಾಂಸ್ಕೃತಿಕ ಬದುಕಿನ ಕಿರುಪರಿಚಯವನ್ನು ನೀಡಿದ್ದಾರೆ.

ಮೆಡ್ರಾಸ್ ಡಿಸ್ಟ್ರಿಕ್ಟ್ ಮೇನುವಲೆ ಸೌತ್ ಕೆನರಾ-೧೮೯೪ರಲ್ಲಿ ಸ್ಟರಕ್ ಐ.ಸಿ.ಎಸ್.ರವರು ಈ ರೀತಿ ಹೇಳಿದ್ದಾರೆ. ""*The Holeya's are divided into many sub-divisions, but the most important are Mari Holeya, Mera Holeya and Mundala or Bakuda Holeya. The Mera Holeya's are the most numerous and they follow the ordinary law of inheritance through males for as that can be said to be possible with a class of people who have absolutely nothing to inherit*" ಜಿಲ್ಲೆಯ ಪರಿಶಿಷ್ಟರಲ್ಲಿ ಮೇರ ಅಥವಾ ಮುಗೇರರ ಜನಸಂಖ್ಯೆ ಬಹಳಷ್ಟು ಜಾಸ್ತಿ ಇರುವುದನ್ನು ಉಲ್ಲೇಖಿಸಿದ್ದಾರೆ.

ಎಡ್ಗರ್ ಥರ್‌ಸ್ಟನ್‌ರವರ ಕಾಸ್ಟ್ ಎಂಡ್ ಟ್ರೈಬ್ಸ್ ಆಫ್ ಸೌದರ್ನ್ ಇಂಡಿಯಾ ೧೯೭೫ರಲ್ಲಿ "*Mera-A sub-division of Holeya*"ಎಂಬುದಾಗಿ ಹೇಳುತ್ತಾರೆ. ಮುಂದುವರಿಯುತಾÛ "*The Mera or Mugayar Holeyas, like the Bakudas, abstain from eating beef, and refuse to touch leather in any form*" ಎಂದಿದ್ದಾರೆ. ಇಲ್ಲಿ ಮುಗೇರ ಎಂಬುದನ್ನು ಮುಗಯರ್ ಎಂದು ಹೇಳಿರುವುದು ಸ್ಪಷ್ಟ ಆಗುತ್ತದೆ.ತುಳು ಮಾತೃಭಾಷಯ ಈ ಸಮುದಾಯದ ಸಾಂಸ್ಕೃತಿಕ ಬದುಕಿನ ಕಿರು ಪರಿಚಯವನ್ನು ಮಾಡಿದ್ದಾರೆ.

ಕೆ.ಅಭಯಕುಮಾರ್‌ರವರು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಪಿ.ಎಚ್‌ಡಿ ಪದವಿಗಾಗಿ ಸಲ್ಲಿಸಿದ 'ಮುಗೇರರು ಜನಾಂಗ-ಜಾನಪದ ಅಧ್ಯಯನ' (೧೯೯೭) ಮಹಾಪ್ರಬಂಧದಲ್ಲಿ ಸಮಗ್ರ ಸ್ವಜಾತಿ ಮುಗೇರ ಸಮುದಾಯವನ್ನು ತುಳುನಾಡಿನಾದ್ಯಂತ ಗಮನದಲ್ಲಿರಿಸಿಕೊಂಡು, ವ್ಯವಸ್ಥೆಯ ಚೌಕಟ್ಟಿನೊಳಗೆ ನಿರ್ದಿಷ್ಟ ಜಾತಿಯ ಆಚರಣೆಗಳು, ಕುಣಿತಗಳು, ಹಬ್ಬಗಳು, ಆಚಾರ-ವಿಚಾರಗಳು ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಗುರುತಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ.

ಮುಗೇರರ ದುಡಿಕುಣಿತಗಳ ಪ್ರಾಕಾರಗಳಲ್ಲಿ ಆಚರಣಾತ್ಮಕ ಕುಣಿತಗಳಾದ ೧.ಕರ್ ಂಗೋಲು ೨.ಚೆನ್ನುಕುಣಿತ ೩.ಪಿಲಿಪಂಜಿ ಕುಣಿತ ಹಾಗೂ ಮನರಂಜನಾ ಕುಣಿತಗಳಾದ ೧.ಮಾಯಿಲ ದಿಕ್ಕ ೨.ದರನೆ ೩. ತಾಲಿ ೪. ಬೈರಿ ೫.ಮಾನಿನಾಗೆರ್ ಪಾಡ್ದನ ಮತ್ತು ಕುಣಿತಗಳನ್ನು ವಿಸ್ತೃತವಾಗಿ ಚರ್ಚಿಸಿದ್ದಾರೆ.ಮುಗೇರರ ಕುಣಿತಗಳೊಂದಿಗೆ ತುಳುನಾಡಿನ ಇತರ ಪರಿಶಿಷ್ಟರಾದ ಮನ್ಸರ ಕುಣಿತ, ಮುಂಡಾಲ, ಗೊಡ್ಡ ಹಾಗೂ ನಲಿಕೆಯವರ ಕುಣಿತಗಳೊಂದಿಗೆ ತುಳುನಾಡಿನ ಇತರ ಪರಿಶಿಷ್ಟರಾದ ಮನ್ಸರ ಕುಣಿತ, ಮುಂಡಾಲ, ಗೊಡ್ಡ ಹಾಗೂ ನಲಿಕೆಯವರ ಕುಣಿತಗಳೊಂದಿಗೆ ತೌಲನಿಕ ವಿಶ್ಲೇಷಣೆಯನ್ನು ನೀಡಿದ್ದಾರೆ.ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಇತರ ಎಲ್ಲಾ ಕೃತಿಗಳಿಗಿಂತ ಈ ಕೃತಿ ಹೆಚ್ಚು ಮೌಲಿಕವಾದುದು ಎಂಬುದಾಗಿ ಹೇಳಬಹುದು.

೧.೮ ಮುಗೇರರ ಸಾಂಸ್ಕೃತಿಕ ಮತ್ತು ಸಾಮಾಜಿಕ ವಿವರಗಳು

೧.೯ ಮುಗೇರ ಪದ ನಿಷ್ಪತ್ತಿ:

ಇಂದಿನ ದಕ್ಷಿಣ ಕನ್ನಡ ಜಿಲ್ಲೆಯ ಐತಿಹಾಸಿಕವಾಗಿ ತುಳು ಭಾಷಿಗರಿಂದ ಕೂಡಿದುದರಿಂದ ತುಳುನಾಡೆಂದು ಕರೆಯಲ್ಪಟ್ಟಿದೆ(ಉಪೇಂದ್ರ,೧೯೯೬).ತುಳುನಾಡಿನಲ್ಲಿ ಮುಗೇರ, ಮನ್ಸ, ಮುಂಡಾಲ, ಮಾಯಿಲ, ಬಾಕುಡ, ಗೊಡ್ಡ, ನಲಿಕೆ ಅಥವಾ ಪಾಣಾರ, ಪರವ, ಪಂಬದ, ಸೆಕ್ಕೆರೆ, ಬೈರ ಅಥವಾ ರಾಣೆಯಾರ್ ಎನ್ನುವ ಪರಿಶಿಷ್ಟ ಜಾತಿಗಳಿವೆ. ಇವುಗಳಲ್ಲಿ ಮುಗೇರರು ಜನಸಂಖ್ಯೆಯಲ್ಲಿ ಅಧಿಕವಾಗಿದ್ದು, ತುಳುನಾಡಿನಾದ್ಯಂತ ಕಂಡುಬರುತ್ತಾರೆ. ತುಳುನಾಡಿನಲ್ಲಿ ಇವರನ್ನು ಮುಗೇರ, ಮೊಗೇರ, ಮುಗ್ಗೇರ, ಮೇರ ಇತ್ಯಾದಿ ಹೆಸರಿನಿಂದಲೂ ಕರೆಯುತ್ತಾರೆ.'ಮುಗೇರ' ಎಂಬ ಈ ಜಾತಿ ಸೂಚಕ ಪದ ಇತ್ತೀಚೆಗೆ ಹೆಚ್ಚು ಬಳಕೆಯಲ್ಲಿ ಬಂದಿದೆಯಾದರೂ ಅದಕ್ಕೆ ಪರ್ಯಾಯ ಪದವಾದ 'ಮೇರ' ಎಂಬುದೇ ಸಾರ್ವತ್ರಿಕ ಬಳಕೆ ಪದವಾಗಿದೆ (ಅಭಯಕುಮಾರ್, ೧೯೯೭).

ತುಳುನಾಡಿನ ಕರಾವಳಿ ಪ್ರದೇಶದಲ್ಲಿ ಈ ಸಮುದಾಯವನ್ನು ಮುಗೇರರೆಂದು ಕರೆಯುತ್ತಾರೆ.ಉಳಿದ ಹೆಚ್ಚಿನ ಭಾಗದಲ್ಲಿ ಮೇರರೆಂದೇ ಕರೆಯುತ್ತಾರೆ.ಸರಕಾರದ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಮುಗೇರ ಪದವೇ ಮೊಗೇರ್ ಎಂಬುದಾಗಿ ಬಳಕೆಯಾಗಿದೆ.ಮುಗೇರ ಎಂಬ ಪದ

ಸಾರ್ವತ್ರಿಕವಾಗಿ ಬಳಕೆಯಲ್ಲಿರುವುದರಿಂದ ಮುಂದಕ್ಕೆ 'ಮುಗೇರ' ಎಂಬುದಾಗಿಯೇ ಬಳಸಿಕೊಳ್ಳಲಾಗಿದೆ.ಜಾತಿಸೂಚಕ ಪದದ ನಿಷ್ಪತ್ತಿ ಕೂಡಾ 'ಮೇರ' ಎಂಬ ಪದವನ್ನೇ ಆಧರಿಸಿಕೊಂಡಿದೆ.'ಮೊಲ'ಕ್ಕೆ ತುಳುವಿನಲ್ಲಿ ಮೇರ್, ಮುಯ್ಯೆರ್, ಮುಗೇರ್ ಇತ್ಯಾದಿ ಸಂವಾದಿ ಪದವಾಗಿದೆ. "ಚಾಣಾಕ್ಷ ಓಟಕ್ಕೆ ಪ್ರಸಿದ್ಧಿಯಾದ ಮೊಲವನ್ನು ಅಟ್ಟಿಸಿ ಬೇಟೆಯಾಡುವುದರಲ್ಲಿ ಪ್ರಸಿದ್ಧರಾದುದರಿಂದ 'ಮುಗೇರರು''ಮೇರರು' ಹೆಸರು ಬಂದಿರಬೇಕು" (ಅಭಯಕುಮಾರ್, ೧೯೯೭).ಮುಗೇರರು ಮೂಲತಃ ಕೃಷಿ ಕಾರ್ಮಿಕರಾಗಿದ್ದು ಆಹಾರಕ್ಕಾಗಿ ಬೇಟೆಯಾಡುವುದು ಇವರ ಹವ್ಯಾಸಗಳಲ್ಲಿ ಒಂದು.ನೀರಿನಲ್ಲಿ ಮಾಡುವ ಬೇಟೆ ನೀರ ಬೇಟೆ (ಮೀನು ಹಿಡಿಯುವುದು) ಕಾಡಿನಲ್ಲಿ ಮಾಡುವ ಬೇಟೆ ಕಾಡ ಬೇಟೆ ಮೃಗಬೇಟೆ (ತುಳುವಿನಲ್ಲಿ ನೀರ ಬೋಂಟೆ, ಕಾಡ ಬೋಂಟೆ ಎನ್ನುತ್ತಾರೆ).ಇವರ ಸಾಂಸ್ಕೃತಿಕ ಹಿನ್ನೆಲೆಯನ್ನು ನೋಡಿದಾಗಲೂ ಬಿಲ್ಲು ಬಾಣ ಹಾಗೂ 'ದುಡಿ' ಸಾಂಸ್ಕೃತಿಕ ಲಾಂಛನವಾಗಿ ಗುರುತಿಸಲ್ಪಡುತ್ತದೆ.ಹಿಂದಿನ ಕಾಲದಲ್ಲಿ ಬಿಲ್ಲುಬಾಣ ಇವರ ಗುಡಿಸಲಿನ ಛಾವಣಿಯಲ್ಲಿಯೂ 'ದುಡಿ' ಕಂಬದಲ್ಲಿಯೂ ನೇತಾಡಿಕೊಂಡಿರುತ್ತಿತ್ತು.ಬಿಲ್ಲುಬಾಣ (ಬಿರು-ಪಗರಿ) ಮತ್ತು ದುಡಿ ಇಲ್ಲದ ಮನೆಯಲ್ಲಿ ಮುಗೇರ ಜಾತಿಯವರು ನೀರನ್ನೂ ಮುಟ್ಟುತ್ತಿರಲಿಲ್ಲವಂತೆ.ಮುಗೇರ ದೈವಗಳ ಪಾಡ್ದನಗಳಲ್ಲಿ ಬಿರು ಪತ್ತಿನಾಯ ಬೋಂಟೆ ಮುಗೇರೆ' (ಬಿಲ್ಲು ಹಿಡಿದಾತ ಬೇಟೆಯ ಮುಗೇರ) ಎಂಬುದಾಗಿ ಕರೆದಿರುತ್ತಾರೆ (ಅಭಯಕುಮಾರ್, ೧೯೯೭).ಸಮುದಾಯದ ಸಾಂಸ್ಕೃತಿಕ ವೀರರಾದ ಮುದ್ದ-ಕಳಲ ಅಥವಾ ಎಣ್ಮೂರದೈಯ್ಯು-ಕೇಲತ್ತ ಪೆರ್ನೆ ಇವರುಗಳು ಬೇಟೆ ಮತ್ತು ಯುದ್ಧದಲ್ಲಿ ನಿಪುಣರೆಂದು ಬಿಂಬಿತವಾಗಿದೆ.ಇವೆಲ್ಲ ಕಾರಣಗಳಿಂದ ಈ ಜಾತಿ ಸೂಚಕ ಪದವಾದ 'ಮೇರ''ಮುಗೇರ' ಇತ್ಯಾದಿಗಳು ಬೇಟೆಯ ನೈಪುಣ್ಯತೆಯ ಹಿನ್ನೆಲೆಯಿಂದಲೇ ಬಂದಿದೆ' (ಅಭಯಕುಮಾರ್, ೧೯೯೭).

ಪ್ರಾಕೃತಿಕವಾಗಿ 'ಮುಗೇರ' ಪದವನ್ನು ಗಮನಿಸಿದಾಗ ಅಮೃತ ಸೋಮೇಶ್ವರರು 'ಪೊಲಿ' ಕೆನರಾ-೨೦೦ ಎಂಬ ಸಂಚಿಕೆಯ 'ಸಾಂಸ್ಕೃತಿಕ ಚಹರೆ-ಕೆಲವು ಟಿಪ್ಪಣಿಗಳು' ಎಂಬ ಲೇಖನದಲ್ಲಿ "ಭೂ ಪ್ರದೇಶ ಲಕ್ಷಣಗಳಿಂದಾಗಿ ಹಲವಾರು ಸ್ಥಳನಾಮಗಳು ರೂಪುಗೊಳ್ಳುತ್ತವೆ. ತುಳುನಾಡಿನಲ್ಲಿ ಇಂತಹ ವಿಶಿಷ್ಟ ಸ್ಥಳನಾಮಗಳು ವಿಪುಲವಾಗಿವೆ" ಎಂದಿದ್ದಾರೆ.ಕನ್ನಡದ ಮೊಗ್ರು ಎಂಬುದು ತುಳುವಿನ ಮುಗೇರ್ ಪದಕ್ಕೆ ಸಂವಾದಿ ಪದವಾಗಿದೆ.ಜಪ್ಪಿನಮುಗೇರ್ (ಮಂಗಳೂರು), ಬೂಡುಮುಗೇರು (ಬೆಳ್ತಂಗಡಿ),

ಮುಗೇರಡ್ಕ (ಬೆಳ್ತಂಗಡಿ).ಪಡ್ತಮುಗೇರ್ ಮೋಗರಾಲ (ಕಾಸರಗೋಡು), ಮೊಗೆಯರ್ (ಕಣ್ಣೂರು ಜಿಲ್ಲೆ), ಮಿತ್ತಮುಗೆರಾಯ (ದೈವ) ತಲೆಮುಗೇರ್, ಪೆರ್ನಮುಗೇರ್, ಪೇರಮುಗೇರ್, ಮುಗೆರೋಡಿ, ಅಜಿಲಮುಗೇರ್, ಅಂಗಡಿಮುಗೇರ್, ಬೊಳಂತಿಮುಗೇರ್, ಮುಗೇರಗುತ್ತು (ಬಂಟ್ವಾಳ) ಸುಳ್ಯೇರಿಮೊಗ್ರು (ಬೆಳ್ತಂಗಡಿ), ನೈಮುಗೇರ್ (ಪುತ್ತೂರು), ಕಾರಮುಗೇರ್ (ಮಂಗಳೂರು), ಕುಡ್ತಮುಗೇರು, ಕುಲ್ಲಮುಗೇರು, ಕುತ್ತಿಮುಗೇರ್, ಮುಗೇರಬೈಲು ಮೊದಲಾದ ಸ್ಥಳನಾಮಗಳನ್ನು ಗಮನಿಸಬಹುದು.ಒಟ್ಟಾರೆಯಾಗಿ ಮುಗೇರ್ ಎಂಬುದನ್ನು ಎತ್ತರವಾದ ಪ್ರದೇಶ ಎಂಬುದಾಗಿ ಅರ್ಥೈಸಬಹುದು.ಇದು ಮೇರ ಜನಾಂಗ ವಾಸಿಸುತ್ತಿದ್ದ ಪ್ರದೇಶವನ್ನು ಗುರುತಿಸುತ್ತದೆ. ಇದರಿಂದ ಮುಗೇರ'ಜನಾಂಗಕ್ಕೆ ಭೂಪ್ರದೇಶದ ಲಕ್ಷಣಗಳಿಂದ ಈ ಹೆಸರು ಬಂದಿಲ್ಲವೆಂದು ಸ್ಪಷ್ಟವಾಗಿ ಹೇಳಬಹುದು.

೧.೧೦ ಮುಗೇರರ ಸಾಂಸ್ಕೃತಿಕ ಚಾರಿತ್ರಿಕ ಹಿನ್ನೆಲೆ

ಜನಾಂಗದ ಐತಿಹಾಸಿಕ, ಚಾರಿತ್ರಿಕ ಹಿನ್ನೆಲೆ ಬಗ್ಗೆ ದಾಖಲೆಗಳು ವಿಶೇಷವಾಗಿ ಲಭ್ಯವಿಲ್ಲದಿದ್ದರೂ ಒಂದೆರಡು ವಿಚಾರಗಳನ್ನು ಉಲ್ಲೇಖಿಸುವುದು ಪ್ರಸ್ತುತವೆನಿಸುತ್ತದೆ. ಒಂದನೆಯ ಶತಮಾನದ ಗ್ರೀಕ್ ಪ್ರಹಸನವೊಂದರಲ್ಲಿ ಲಭ್ಯವಿರುವ ಮಾಹಿತಿಯಂತೆ ೨೦೦೦ ವರ್ಷಗಳ ಹಿಂದಿನ 'ಬಾರ್ಬೆರಿಕ' ಎಂಬ ಹೆಸರಿನ ಜನಾಂಗವೊಂದು ಕುಡಿತ, ಕುಣಿತಗಳಲ್ಲಿ ತೊಡಗಿದ್ದ ಪ್ರಸಂಗವನ್ನು ಚಿತ್ರಿಸಲಾಗಿದೆ.ಅವರ ಹಾಡು ತುಳು ಭಾಷೆಯದಾಗಿತ್ತು ಎಂಬುದು ಕುತೂಹಲದ ಸಂಗತಿ.ಈ ಜನಾಂಗವೇ ತುಳುನಾಡಿನ ಮುಗೇರ (ಮೇರ) ಜನಾಂಗವಾಗಿರುವ ಸಾಧ್ಯತೆ ಇದೆ ಎಂಬುದು ವಿದ್ವಾಂಸರ ಅಭಿಪ್ರಾಯ.ಈ ವಿಷಯ ಹಾಗೂ ಈ ಲೇಖನದಲ್ಲಿ ಬರುವ ಇತರ ಒಂದೆರಡು ಅಭಿಪ್ರಾಯಗಳನ್ನು ಸಾಹಿತಿ ಕುದ್ಕಾಡಿ ವಿಶ್ವನಾಥ ರೈಗಳು ೧೯೮೫ರಲ್ಲಿ ಪ್ರಕಟಗೊಂಡ ದಕ್ಷಿಣಕನ್ನಡ ಹಾಗೂ ಕಾಸರಗೋಡು ಜಿಲ್ಲಾ ಪ್ರಥಮ ಮೊಗೇರ ಸಮ್ಮೇಳನದ ಸ್ಮರಣ ಸಂಚಿಕೆ "ಮೊಗೇರವಾಣಿ" ಯಲ್ಲಿ ಪುಷ್ಠೀಕರಿಸಿರುವುದು ಉಲ್ಲೇಖನೀಯ.ಉಪ್ಪಂಗಳ ರಾಮಭಟ್‌ರವರು ದಿನಾಂಕ ೩-೪-೧೯೮೭ರ ಉದಯವಾಣಿ ದೈನಿಕದಲ್ಲಿ 'ವೇಲಾಪುರ ಮಹಾತ್ಮೆ' ಪರಿಚಯ ಲೇಖನದಲ್ಲಿ ಮಂಜುಳಪುರಿಗೆ (ಮಂಜೇಶ್ವರ) ಚಂಡಾಲ ಅರಸ ನಾಯಕನಾಗಿದ್ದ.ಅಲ್ಲಲ್ಲಿ ಕೋಟೆ ಕಟ್ಟಿ ತನ್ನವರನ್ನು ಸ್ಥಾಪಿಸಿದ.'ಮುಗರ'ನೆಂಬವನು ಮೂವತ್ತೆರಡು ಗ್ರಾಮಗಳನ್ನು ತಾನೇ ಆಳಿದನು.ಮುಗರ-ಮೊಗವೀರ ಬೆಸ್ತ ವರ್ಗವಿರಬಹುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಮುಂದುವರಿದು ಈ ನಾಡಿಗೆ ಹೊರಗಿನಿಂದ ರಾಜನು ಬಂದದ್ದು

ಇಲ್ಲಿನ ಮೂಲ ನಿವಾಸಿಗಳನ್ನು ಗೆದ್ದದ್ದು ರಾಜ್ಯ ಸ್ಥಾಪನೆ ಮಾಡಿದ್ದು, ಬ್ರಾಹ್ಮಣರನ್ನು ಕರೆತಂದು ನೆಲೆಗೊಳಿಸಿದ್ದು ಇತ್ಯಾದಿ ಐತಿಹಾಸಿಕ ಸತ್ಯವೆಂದೂ, ಇಲ್ಲಿನ ಮೂಲ ನಿವಾಸಿ ವರ್ಗದ ಜನ ಅಲ್ಲಲ್ಲಿ ಕೋಟೆ ಕಟ್ಟಿ ಆಳುತ್ತಿದ್ದರೆಂಬುದಕ್ಕೆ ಅಲ್ಲಲ್ಲಿ ಈಗಲೂ ಕಾಣುವ (ಮಾಯಿಲಾ ಕೋಟೆ)ಗಳೇ ಸಾಕ್ಷಿ ಎಂಬುದಾಗಿ ವಿವರಿಸಿದ್ದಾರೆ. ಮೇಲೆ ಹೇಳಿದ ಕೋಟೆಗಳ ಅವಶೇಷಗಳನ್ನು ಈಗಿನ ಕೇರಳ ರಾಜ್ಯದ ಮಧೂರು, ಕಾಟುಕುಕ್ಕೆಗಳಲ್ಲಿ ಈಗಲೂ ಕಾಣಬಹುದು.

ಮೇಲಿನ ಪರಿಚಯ ಲೇಖನಕ್ಕೆ ಪ್ರತಿಕ್ರಿಯೆಯಾಗಿ ದಿನಾಂಕ ೨೧-೪-೧೯೮೬ರ ಉದಯವಾಣಿ ದಿನಪತ್ರಿಕೆಯಲ್ಲಿ ವೇಲಾಪುರ ಮಹಾತ್ಮ್ಯದ ಮುಗರ ಯಾರು?ಎಂಬ ತಲೆ ಬರಹದಡಿಯಲ್ಲಿ 'ಮಾನವ' ಉಪ್ಪಳ ಎಂಬವರು ಅಭಿಪ್ರಾಯ ಮಂಡಿಸಿರುವುದನ್ನು ಇಲ್ಲಿ ಉಲ್ಲೇಖಿಸುವುದು ಅಗತ್ಯವಾಗಿದೆ.ಸದ್ರಿಯವರು "ಮುಗರ, ಮೊಗವೀರ ಬೆಸ್ತ ವರ್ಗವಿರಬಹುದು" ಎಂಬ ಊಹೆಯನ್ನು ಅಲ್ಲಗಳೆಯುತ್ತಾ 'ಮುಗೇರ' ಎಂಬ ಜನವರ್ಗವೊಂದು ಇದೆಯಾದರೂ ಅವರು ಬೆಸ್ತ ವರ್ಗದವರಲ್ಲ, ಅವರಿಗೂ ಮೊಗವೀರರಿಗೂ ಸಂಬಂಧವಿಲ್ಲ ಎಂಬುದಾಗಿ ಖಂಡತುಂಡವಾಗಿ ಹೇಳುತ್ತಾರೆ. ಮುಂದುವರಿದು ಸ್ಥಳೀಯ ಐತಿಹ್ಯಗಳಲ್ಲಿ ಮುಗರ ಅಥವಾ ಮುಗರಾಜ್ಯದ ಹೆಸರು ಬರುತ್ತದೆ. ಪಟ್ಟದಮೊಗರು ಎಂಬುದು ಈ ಆದಿ ದ್ರಾವಿಡ ಅರಸನ ನೆಲೆಯಾಗಿತ್ತೆಂದೂ ಮೊಗರಾಲದಿಂದ ಉತ್ತರಕ್ಕೆ ಪಟ್ಟದಮೊಗರು ಎಂಬಲ್ಲಿಯ ತನಕ ಹದಿನೆಂಟು ಗ್ರಾಮಗಳ ಅರಸೊತ್ತಿಗೆ ಮಾಡುತ್ತಿದ್ದರೆಂದು ಪ್ರತೀತಿ ಇದೆಯೆಂತಲೂ, ಬಡಜ, ಹುಬಾಬಕ ಮೊದಲಾದ ಆದಿದ್ರಾವಿಡ ನಾಯಕರ ಉಲ್ಲೇಖವೂ ಪ್ರಾಚೀನ ಐತಿಹ್ಯಗಳಲ್ಲಿ ದೊರೆಯುತ್ತದೆ. ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. (ಎನ್.ಕೊಯಿರಾ, 'ಜಾನಪದ ಗಂಗೋತ್ರಿ,೧೯೯೨).

ಕೆ.ವಿ. ರಮೇಶ್ (೧೯೬೯)ಇವರು 'ತುಳುನಾಡು ಇತಿಹಾಸ' ಎಂಬ ಕೃತಿಯಲ್ಲಿ 'ಕೋಶರ್' ಜನಾಂಗ ತುಳುನಾಡಿನವರು. ತಮಿಳುನಾಡಿನಲ್ಲೂ ಈ ಜನಾಂಗ ಇತ್ತು. ಪ್ರಾಮಾಣಿಕತೆಗೂ, ಶೌರ್ಯ ಪರಾಕ್ರಮಗಳಿಗೂ ಹೆಸರುವಾಸಿಯಾಗಿದ್ದರೆಂದೂ ಅಲ್ಲಿಯ ಸೇನೆಗಳಲ್ಲಿ ಸೇರಿ ಸಿಪಾಯಿಗಳಾಗಿ ಸೇವೆ ಸಲ್ಲಿಸುತ್ತಿದ್ದರೆಂದೂ ತಿಳಿದುಬರುತ್ತದೆ.ಕ್ರಿಸ್ತಶಕದ ಪ್ರಾರಂಭದ ಶತಮಾನಗಳಲ್ಲಿ ತುಳುನಾಡಿನಲ್ಲಿ ಕೋಶರ್ ಜನಾಂಗದವರು ಪ್ರಬಲರಾಗಿದ್ದರು (೧೯೬೯) ಎಂಬುದಾಗಿ ಬರೆದಿದ್ದಾರೆ.ಮುಂದುವರಿದು ಕೋಶರ್ ಜನಾಂಗದವರು ಸೈನಿಕ ವೃತ್ತಿಯವರಾಗಿದ್ದರು, ಅವರು ಶ್ರೇಷ್ಠ ಬಿಲ್ಲಾಳುಗಳಾಗಿದ್ದರು

ಎಂಬುದಾಗಿ 'ಮಾಮೂಲನಾರ' ಪದ್ಯದಿಂದ ತಿಳಿದುಬರುತ್ತದೆ ಎಂದು ಬರೆದಿದ್ದಾರೆ (೧೯೬೯).ಮೇಲಿನ ಉಲ್ಲೇಖದ ಆಧಾರದಲ್ಲಿ 'ಕೋಶರ್' ಜನಾಂಗವೇ ಕಾಲಾನುಕ್ರಮದಲ್ಲಿ ಮೇರ ಅಥವಾ ಮುಗೇರ ಜನಾಂಗ ಯಾಕಾಗಿರಬಾರದು? ಮುಗೇರರು ಬಿಲ್ವಿದ್ಯೆಯಲ್ಲಿ ಪ್ರವೀಣರು.ಇದರಿಂದಾಗಿ ಸೈನ್ಯಗಳಲ್ಲೂ ಸ್ಥಾನ ದೊರಕಿರಬಹುದು.ಮುಗೇರ್ಲೆ ಪಾಡ್ದನದ ಆಧಾರದಲ್ಲಿ ಮತ್ತು ಆರಾಧನೆಯಿಂದ 'ಮುಗೇರ್ಲು' ಯುದ್ಧ ಮಾಡಿ ಎಲ್ಲರನ್ನೂ ಜಯಿಸಿ ಆದ ನಂತರ ಮೋಸದಿಂದ ಕೊಲ್ಲಲ್ಪಟ್ಟವರು ಎಂದು ತಿಳಿದುಬರುತ್ತದೆ.'ಮುಗೇರ್ಲು' ಎಂದು ಈಗಲೂ ಆರಾಧನೆ ಮಾಡುತ್ತಿರುವುದು ಬಿಲ್ಲು ಬಾಣ ಮತ್ತು ಕತ್ತಿಗಳನ್ನೇ ಹೊರತು, ಯಾವುದೇ ಪ್ರತಿಮೆ, ಮೂರ್ತಿಗಳನ್ನು ಆರಾಧಿಸುತ್ತಿಲ್ಲ. ಆ ಆರಾಧನೆಯನ್ನು ಗಮನಿಸಿದಾಗ ಮುಗೇರರು ಮೂಲತಃ ಯೋಧರು ಎಂದು ಸ್ಪಷ್ಟಗೊಳ್ಳುತ್ತದೆ.ಅಲ್ಲದೆ ಪಶ್ಚಿಮ ಕಡೆಯಿಂದ ಮುಗೇರರಿಗೆ 'ಸರಿ ಜಾತಿದ ಜಾತಿಮೇರ ದಂಡ್' (ಸರಿ ಜಾತಿಯ ಮೇರ ಜಾತಿಯ ದಂಡು) ಎದುರಾಗಿ ಬಂತೆಂದು ಉಲ್ಲೇಖವಿದೆ (ಅಭಯಕುಮಾರ್, ೧೯೯೭).

ಮುಗೇರರ ಸಾಂಸ್ಕೃತಿಕ ವೀರರಾದ 'ಮುದ್ದ-ಕಳಲ'ರ ಭಾವ ನಾರಾಂಬೋಡಿ ಕಳಲ ಬೇಕಲಕೋಟೆಯಲ್ಲಿ ಯುದ್ಧ ಮಾಡಿದ ಉಲ್ಲೇಖ ಪಾಡ್ದನದಲ್ಲಿ ಇದೆ.ತೆನ್ಕಾಯಿ ಕೊಪ್ಪಂದರಸು ಗ್'ಲಾ-ಬಡಕಾಯಿ ಬಾಲೆ ಬಂಗರಸುಗ್'ಲಾ (ತೆಂಕು ಭಾಗದ ಕೊಪ್ಪಂದರಸು ಅಂದರೆ ನಾಯರ್ ದಂಡು ಎಂದು ಭಾವಿಸಬಹುದು. ಬಡಕಾಯಿ ಬಾಲೆ ಬಂಗರಸು-ಅಂದರೆ ಬಂಗಾಡಿಯ ಜೈನರಸರ ದಂಡು ಆಗಿರಬಹುದು).ಅಲ್ಲದೆ ಮೂಡಾಯಿಡ್ಡ್ ಸೂರ್ಯದಂಡ್, ಪಡ್ಡೆಯಿಡ್ಡ್ ಚಂದ್ರದಡ್ (ಪೂರ್ವದಿಂದ ಸೂರ್ಯ ದಂಡು ಪಶ್ಚಿಮದಿಂದ ಚಂದ್ರ ದಂಡು) ಬರುತ್ತದೆ.ಒಂದು ಕಡೆಯಿಂದ ತುಂಡರಸ ಮದನಪ್ಪ ದೆಕ್ಕುಲೆ. ಮೂಲದವ 'ನಾರಾಂಬೋಡಿ ಕಳಲನಿಗೆ' ಬಂಗಾಡಿಯ ಬಂಗರಸದಿಂದ ದಂಡಿಗೆ ಕರೆ ಬರುತ್ತದೆ. ತನ್ನ ಒಡೆಯನ ಅಪ್ಪಣೆಯಂತೆ ಎಲ್ಲಾ ರೀತಿಯ ಯುದ್ಧ ಪರಿಣತಿಯನ್ನು ಪಡೆದಿದ್ದ ನಾರಾಂಬೋಡಿ ಕಳಲ ಬೇಕಲಕೋಟೆಯಲ್ಲಿ ವೀರಾವೇಶದಿಂದ ಯುದ್ಧ ಮಾಡುತ್ತಾನೆ. ತನ್ನ ವೈರಿ ಸೈನ್ಯವನ್ನು ಏಕಾಂಗಿಯಾಗಿ ಬಗ್ಗು ಬಡಿಯುತ್ತಾನೆ. ಇವನ ಸಾಹಸ, ಶಕ್ತಿಯನ್ನು ಸಹಿಸದ ಮದನಪ್ಪ ದೆಕ್ಕುಲು ಅವಿತು ಕುಳಿತು ನಾರಂಬೋಡಿ ಕಳಲನಿಗೆ ಬಾಣ ಪ್ರಯೋಗ ಮಾಡುತ್ತಾನೆ (ಮತ್ಸರ ಅಥವಾ ಹೆದರಿಕೆಯಿಂದಾಗಿರಬಹುದು). ಅನಿರೀಕ್ಷಿತವಾಗಿ ತನಗಾಗುತ್ತಿರುವ ದಾಳಿಯನ್ನು ಅರಿತ ನಾರಂಬೋಡಿ ಕಳಲ ಒಂದು ಬಾಣವನ್ನು ಕುಳಿತುಕೊಂಡು, ಒಂದನ್ನು

ಮಲಗಿಕೊಂಡು ಇನ್ನೊಂದನ್ನು ಓಡಿ ತಪ್ಪಿಸಿಕೊಳ್ಳುತ್ತಾನೆ, ನಾಲ್ಕನೆಯದ್ದು ಬಂದು ಇವನ ಕುತ್ತಿಗೆಯನ್ನು ಛೇದಿಸುತ್ತದೆ. ಹಾಗೆ ಕತ್ತರಿಸಲ್ಪಟ್ಟ ರುಂಡ ಈಶ್ವರಮಂಗಲ ಶಿವದೇವಾಲಯದಲ್ಲಿ ಹೋಗಿ ಬೀಳುತ್ತದೆ. ಆ ರುಂಡ ಈಗಲೂ ಕಲ್ಲಾಗಿ ಅಲ್ಲಿ ಇದೆ ಎಂಬ ನಂಬಿಕೆ ಇದೆ.

ಇನ್ನೊಂದು ಉಲ್ಲೇಖದಂತೆ ಒಂದು ಬಾರಿ 'ಅಳದಂಗಡಿ' ರಾಜ್ಯಕ್ಕೆ ಬೇರೆ ರಾಜ್ಯದ ಸೈನ್ಯ ದಂಡೆತ್ತಿ ಬರುತ್ತದೆ.ರಾತ್ರಿ ಆದ ಕಾರಣ ಹೊಳೆಯ ಆಚೆ ದಡದಲ್ಲಿ ರಾತ್ರಿ ಬೀಡು ಬಿಟ್ಟಿರುತ್ತದೆ. ಆನೆ, ಕುದುರೆ ಇತ್ಯಾದಿ ಎಲ್ಲಾ ಬಗೆಯ ಸೈನ್ಯ ಅವರಲ್ಲಿತ್ತು.ಅಳದಂಗಡಿಯ ಸೇನೆಯೂ ಒಟ್ಟಾಗಿ ಹೊಳೆಯ ಇನ್ನೊಂದು ದಂಡೆಯಲ್ಲಿ ರಾತ್ರಿಯೇ ಬಂದು ಸೇರುತ್ತದೆ.ಅಳದಂಗಡಿಯ ಸೇನೆಯಲ್ಲಿ ಮೇರರ (ಮುಗೇರರ) ಒಂದು ತುಕಡಿಯೂ ಇತ್ತು.ಇವರು ಬಿಲ್ಲುಬಾಣಗಳ ಸಮೇತ ರಾತ್ರಿ ಚಳಿ ಕಾಯಿಸುವುದಕ್ಕೋಸ್ಕರ ಒಣಗಿದ ಮಾವಿನ ಗೊರಟನ್ನು ಕೆಲವು ಗೋಣಿಗಳಲ್ಲಿ ಕಟ್ಟಿಕೊಂಡು ಮಾವಿನ ಗೊರಟಿನ ಕೆಂಡಗಳನ್ನು ಬಾಣದ ತುದಿಗೆ ಸಿಕ್ಕಿಸಿ ನದಿಯ ಇನ್ನೊಂದು ದಡದಲ್ಲಿ ಬೀಡು ಬಿಟ್ಟಿದ್ದ ಆನೆಗಳಿಗೆ ಪ್ರಯೋಗ ಮಾಡುತ್ತಾರೆ.ಬೆಂಕಿಯ ಮಳೆಗರೆಯುವುದನ್ನು ಕಂಡ ಆನೆಗಳು ಸಿಕ್ಕಸಿಕ್ಕ ಕಡೆ ಘೀಳಿಡುತ್ತಾ ಓಡುತ್ತವೆ. ಈ ಗೊಂದಲದಲ್ಲಿ ಸೈನಿಕರು ಆನೆಗಳ ಕಾಲಡಿಗೆ ಸಿಕ್ಕಿ ಚಲ್ಲಾಪಿಲ್ಲಿಯಾಗಿ ಓಡುತ್ತಾರೆ.ಆ ಅನಿರೀಕ್ಷಿತ ದಾಳಿಯಿಂದ ತತ್ತರಿಸಿದ ವಿರೋಧಿ ಸೈನ್ಯ ಸಂಪೂರ್ಣ ಪಲಾಯನ ಮಾಡಿತು.ಅಳದಂಗಡಿ ಸೇನೆ ವಿಜಯದ ಕೇಕೆ ಹಾಕಿತು. ಅಳದಂಗಡಿ ಮೇಲೆ ಹೇಳಿದ ಎರಡೂ ಉಲ್ಲೇಖಗಳು ಕೆ.ವಿ. ರಮೇಶ್‌ರವರ ಅಭಿಪ್ರಾಯಗಳಿಗೆ ಹತ್ತಿರವಾಗಿದೆ. (ಅಳದಂಗಡಿಯಲ್ಲಿ ಈಗಲೂ ಅರಸರ ಒಕ್ಕಲುಗಳಾಗಿದ್ದ ಮುಗೇರರ ಹಲವಾರು ಮನೆಗಳಿವೆ. ಅರಸರೇ ಕಟ್ಟಿಸಿದ ಮುಗೇರ ದೈವಗಳ ಕೊಟ್ಯ ಕೂಡಾ ಅರಮನೆಗೆ ಸಮೀಪ ಇದೆ.)

ಮಾಯಿಪ್ಪಾಡಿ ಅರಮನೆಯ ಉದಯ ವರ್ಮ ರಾಜರವರ ಕೃತಿ ತುಳುನಾಡಿನ ಗತವೈಭವ (೧೯೬೮)ದಲ್ಲಿ ತುಳುನಾಡಿನ ಮುಗೇರ ತುಂಡರಸರ ಉಲ್ಲೇಖವಿದೆ. ಅಲೂಪರ ಆಡಳಿತ ಕಳೆಗುಂದಿದಾಗ ತೌಳವಕ್ಕೆ ಹಂಗಳದ ಅರಸರು (ಕದಂಬರು) ಬರುವರೆಂದು ವದಂತಿಯು ಹಬ್ಬಿದಾಗ ತುಳುನಾಡಿನಲ್ಲಿ ಸಾಮಾಜಿಕ ಮತ್ತು ರಾಜಕೀಯ ಕ್ರಾಂತಿಯು ನಡೆಯಿತು.ಬ್ರಾಹ್ಮಣ, ಜೈನ, ಬೌದ್ಧ ಮುಗೇರರು, ಬಂಟ ಮುಂತಾದ ಜಾತಿಗಳು ಸಾಮಾಜಿಕ ಅಧಿಪತ್ಯಕ್ಕಾಗಿ ಪ್ರಯತ್ನಿಸಿದವು.ಮುಗರ, ಹುಬ್ಬಾಸಿಗ ಮುಂತಾದ ಧುರೀಣರು, ಬುದ್ಧ, ಪಾಂಡ್ಯನೆಂಬ ಬಂಟ ಧುರೀಣನೂ ಅಲ್ಲಲ್ಲಿ

ದಂಗೆಗಳನ್ನೆಬ್ಬಿಸುತ್ತಿದ್ದರು (೧೯೯೮).ಕುಂಬಳೆ ರಾಜ್ಯದ ಇಮ್ಮಡಿ ಜಯಸಿಂಹ (೧೨೦೩-೧೨೫೦) ಮೂಲ ಕಾವೇರಿಗೆ (ಸುಬ್ರಹ್ಮಣ್ಯ ಪ್ರಾಂತ) ತಪಸ್ಸಿಗೆ ತೆರಳಿದ್ದ ಸಂದರ್ಭದಲ್ಲಿ, ಮಂಜುಳಾಪುರದ ಚಂಡಾಲನು ಸಹಸ್ರ ಕಿರಾತ ಪ್ರಜೆಗಳುಳ್ಳವನೂ ಮಹಾಕ್ರೂರಿಯೂ ಆದ ಮುಗರನು ಪ್ರಬಲಿಸಿ ಕುಂಬಳೆ ಸೀಮೆಯನ್ನಾಕ್ರಮಿಸಿಕೊಂಡನು.ಮುಗರನ ಪಟ್ಟಕ್ಕೆ ಪಟ್ಟದಮೊಗರು ಎಂಬ ಹೆಸರಿತ್ತು.ಈ ಮುಗರನ ಭಾವನೆಂಟನಾದ 'ಬಡಜ'ನು ಮುಗರನೊಂದಿಗೆ ಸೇರಿಕೊಂಡು ಅವನು ಎಬ್ಬಿಸಬೇಕೆಂದಿದ್ದ ದಂಗೆಗೆ ಪ್ರೋತ್ಸಾಹವಿತ್ತನು.ಈ ಬಡಜನಿಂದಾಗಿ ಆ ಊರಿಗೆ ಬಡಾಜೆ ಎಂಬ ಹೆಸರು ಬಂತೆಂದೂ ಹೇಳಿಕೆಯಿದೆ (೧೯೯೮).ಬಡಜ, ಮುಗರರು ಇಮ್ಮಡಿ ಜಯಸಿಂಹನ ಸಮಕಾಲೀನರೆಂದು ಲೇಖಕರು ಬರೆಯುತ್ತಾರೆ.

ದಿನಾಂಕ ೧೪-೧೦-೧೯೮೪ರ ಉದಯವಾಣಿ ದೈನಿಕದಲ್ಲಿ ಜೀರ್ಣೋದ್ಧಾರವಾಗುತ್ತಿರುವ ಮಂಜೇಶ್ವರದ ಶ್ರೀ ಕೀರ್ತೇಶ್ವರ ದೇವಸ್ಥಾನ ಎಂಬ ತಲೆ ಬರಹದಡಿ ಡಾ.ರಮಾನಂದ ಬನಾರಿಯವರು ಬರೆಯುತ್ತಾ "ಜಯಸಿಂಹನು ಮೂಲ ಕಾವೇರಿಗೆ ತಪಸ್ಸಿಗೆ ತೆರಳಿದ್ದ ಸಂದರ್ಭದಲ್ಲಿ ಮಂಜುಳಾಪುರದ ಚಂಡಾಲಕ ರಾಜನು ತನ್ನ ಪ್ರಬಲವಾದ ಕಿರಾತ ಪಡೆಯೊಂದಿಗೆ ಬಂಡಾಯವೆದ್ದು ಉಪ್ಪಳ ಹಾಗೂ ಬಂಗ್ರ ಮಂಜೇಶ್ವರ ನದಿಗಳ ನಡುವಣ ಪ್ರದೇಶಗಳನ್ನು ಗೆದ್ದುಕೊಂಡು ಈಗಿನ 'ಪಡ್ತಮೊಗರು' ಎಂಬಲ್ಲಿ ಅರಮನೆ ಕಟ್ಟಿಸಿ ಸ್ವತಂತ್ರ ರಾಜನೆನಿಸಿಕೊಂಡನು. ಅವನು ತನ್ನ ಕಿರಾತ ಪಡೆಗಳನ್ನು ಸೇರಿಸಿಕೊಂಡು ಸುತ್ತುಮುತ್ತಣ ಪ್ರದೇಶಗಳನ್ನು ಕೊಳ್ಳೆ ಹೊಡೆದು ಅಪಾರ ಸಂಪತ್ತನ್ನು ದೋಚಿಕೊಂಡನು.ಇವರ ದಾಳಿಯಿಂದಾಗಿ ಕೀರ್ತೇಶ್ವರ, ಬಡಾಜೆ, ಮುಳಿಂಜ ಮೊದಲಾದ ದೇವಾಲಯಗಳು ನಾಶಗೊಂಡವು" ಎಂದಿದ್ದಾರೆ.

ಕೀರ್ತೇಶ್ವರ ದೇವಸ್ಥಾನದ ಆರಾಧ್ಯದೇವನಾದ ಪರಮೇಶ್ವರನು ಕೀರ್ತೇಶ್ವರನೆಂದೇ ಹೆಸರಾಗುವುದಕ್ಕೆ ಕಾರಣವಾದ ಹಿನ್ನೆಲೆಯನ್ನು ಪ್ರತೀತಿಯಲ್ಲಿರುವ ಸ್ಥಳಪುರಾಣವೊಂದನ್ನು ಉಲ್ಲೇಖಿಸುತ್ತಾ "ಬಡಾಜೆ ಬೂಡಿನ (ಮಂಜೇಶ್ವರಕ್ಕೆ ಸಮೀಪ) ಮೂಲಪುರುಷನಾದ ಕೇಶವ ಬ್ರಾಹ್ಮಣನು ದಕ್ಷಿಣದಿಂದ ಕಾಶೀ ಯಾತ್ರಾರ್ಥಿಯಾಗಿ ಉತ್ತರಕ್ಕೆ ಬರುತ್ತಿದ್ದಾಗ ಅವನನ್ನು ತೌಳವ ದೇಶದ ಅರಸನು ಕಣ್ವಪುರದ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಸಂಧಿಸಿ ತನ್ನ ವಿರೋಧಿಗಳಾದ ಬಡಜ, ಮೊಗರರ ಸಂಹಾರಕ್ಕೆ ಸಹಕಾರವನ್ನು ಯಾಚಿಸಿದನು. ಇದಕ್ಕನುಸಾರವಾಗಿ ಕೇಶವ ಬ್ರಾಹ್ಮಣನು ಮಾಡಿದ ಮಾರಣಹೋಮದಿಂದ ಕೃತ್ತಿಕಾ ದೇವಿಯು ದುಂಬಿ ರೂಪದಿಂದ ಬಡಜ, ಮುಗರರ

ಸೈನ್ಯವನ್ನು ನಾಶಪಡಿಸಿ ತೌಳವ ರಾಜನಿಗೆ ವಿಜಯವನ್ನು ತಂದಿತ್ತಳು.ತೌಳವ ರಾಜನು ಕೇಶವ ಬ್ರಾಹ್ಮಣನೊಂದಿಗೆ ಸೇರಿ ಐಲದ ಅಂಬಾವನದಲ್ಲಿ ದುಂಬಿ ರೂಪದ ಕೃತಿಕಾ ದೇವಿಯನ್ನು ಮಹಿಷಮರ್ದಿನಿ ರೂಪದಲ್ಲಿ ಪ್ರತಿಷ್ಠಾಪಿಸಿ ಕಾರ್ಯಗಳನ್ನು ಕೇಶವ ಬ್ರಾಹ್ಮಣನಿಗೆ ಒಪ್ಪಿಸಿ ಬಡಾಜೆ ಗ್ರಾಮವನ್ನು ದತ್ತವಾಗಿ ಕೊಟ್ಟನು.

ಕನ್ನಡ ಸಾಹಿತ್ಯ ಪರಿಷತ್ ಪ್ರಕಟಿಸಿದ ಎಂ.ಎಂ. ಅಣ್ಣಿಗೇರಿ ಮತ್ತು ಆರ್.ಶೇಷಶಾಸ್ತ್ರಿಗಳು ಸಂಪಾದಿಸಿದ 'ಜಯಸಿಂಹನ ತಳಂಗರೆಯ ಶಾಸನ' ಎಂಬ ಕೃತಿಯಲ್ಲಿ ಕೇರಳ ರಾಜ್ಯದ ಕಾಸರಗೋಡು ಬಳಿಯ ತಳಂಗೆರೆಯ ಕ್ರಿ.ಶ.ಸುಮಾರು ೧೦ನೇ ಶತಮಾನಕ್ಕೆ ಸಂಬಂಧಪಟ್ಟ ರಾಜ ಜಯಸಿಂಹ ಬರೆಸಿದ (ಸ್ಥಳ: ಮಸೀದಿಯ ಮುಂದಿರುವ ಶಿಲಾಫಲಕ) ಶಾಸನದಲ್ಲಿ ಪುತ್ತೂರ ಪೊಲೆಯರ (ಹೊಲೆಯ) ಉಲ್ಲೇಖ ಇದೆ. "ದಾನಂ॥ ಅಕ್ಕುಮೆಂದು॥ ಉತ್ಸಾಹಂ॥ ಊರ ಕಡೆಯ ತೊಱೆಯ ತಡಿಯ ಕರಿಯ ಕಲಮೋೞದಿಂ ಪುತ್ತೂರ ಪೊಲೆಯರಿಪ್ಪ ಕೇರಿ ಯೊವೞ ನೀರ ಭೂಮಿಯ ಸಾರ ಭೂರುಹಂಗಳೋಳಿಯೊಳಗೆ ನೆಱೆದ ಕೆಱೆಯನಂ ಭೋರು ಹಾಕ್ಸಿ, ತನ ಧನದಿನೊಪ್ಪೆ ಮಾಡಿಸಿಱ್ದುದಂ ॥ ವಚನ॥"

ಈ ಶಾಸನದಲ್ಲಿ ಬರುವ ಪುತ್ತೂರು ಕುಂಬಳೆ ಸಮೀಪದ ಮೊಗ್ರಾಲ್ ಪುತ್ತೂರು ಆಗಿರಬೇಕು.ಇಲ್ಲಿ ಪೊಲೆಯ ಎಂಬುದು ಹೊಲೆಯ ಎಂಬುದಕ್ಕೆ ಸಂವಾದಿಯಾಗಿ ಬಳಕೆಯಾಗಿದೆ.ಇದು ಮಲೆಯಾಳ ಭಾಷೆಯ ಪ್ರಭಾವವಿರಬಹುದು.ಶಾಸನಗಳಲ್ಲಿ ಹೇಳಲಾದ ಪೊಲೆಯರ ಕೇರಿ ಬಹುತೇಕ ಮುಗೇರರ ಕೇರಿಯೇ ಆಗಿರಬಹುದು.ಕಾರಣ ಕಾಸರಗೋಡಿನ ಆಸುಪಾಸಿನಲ್ಲಿ ಶಾಸನ ಬರೆಯುವ ಪೂರ್ವಾಪರದಲ್ಲಿ ಮುಗೇರರ ಆಡಳಿತದ ಪ್ರದೇಶಗಳಿದ್ದವು.ಮತ್ತು ಮುಗೇರರು ಹೆಚ್ಚಾಗಿ ಗುಂಪುಗುಂಪಾಗಿಯೇ ವಾಸಿಸುತ್ತಾರೆ.ಹೀಗೆ ಮುಗೇರರು ತುಳುನಾಡಿನ ಮೂಲನಿವಾಸಿಗಳಾಗಿದ್ದು, ಬಂಟ, ಜೈನ, ಮುಂತಾದ ಜಾತಿಗಳ ಮೂಲದವರಾಗಿ ಗುತ್ತು, ಮಾಗಣೆಯ ರಕ್ಷಕರಾಗಿಯೂ ಇದ್ದರು.ಈ ಮೇಲಿನ ಎಲ್ಲಾ ಉಲ್ಲೇಖಗಳಿಂದ ಮುಗೇರರು ಬಿಲ್ ವಿದ್ಯೆಯಲ್ಲಿ ನಿಪುಣರಾಗಿದ್ದರು, ಯೋಧರಾಗಿದ್ದರು, ಮುಗೇರರಲ್ಲಿ ಸ್ವತಂತ್ರ ಆಳ್ವಿಕೆಯ ಅರಸರು ಇದ್ದರು ಮತ್ತು ಮುಗೇರರದ್ದೇ ಪ್ರತ್ಯೇಕ ಸೈನ್ಯ ಮತ್ತು ಎಂಬುದನ್ನು ದೃಢಪಡಿಸುತ್ತದೆ.

೧.೧೧ ಮುಗೇರರ ಪ್ರಸರಣ ಪ್ರಾದೇಶಿಕ ವ್ಯಾಪ್ತಿ ಮತ್ತು ಜನಸಂಖ್ಯೆ

ಪಶ್ಚಿಮ ಕರಾವಳಿಯ ದಕ್ಷಿಣದಲ್ಲಿರುವ ಮೂಷಿಕ ದೇಶವೆಂಬ ಮಳೆಯಾಳಕ್ಕೂ ಉತ್ತರದಲ್ಲಿ ಪಶುದೇಶವೆಂಬ ಉತ್ತರಕನ್ನಡ ಜಿಲ್ಲೆಗೂ ನಡುವೆ ಇರುವ ಪ್ರದೇಶವೇ 'ಆಲುವ' ಎಂಬ ಹೆಸರಿನಿಂದ ಕರೆಯಲ್ಪಡುವ ತುಳುನಾಡು.'ಪ್ತೋಲೆಮಿಯಾ' (ಟಾಲೆಮಿ) ತನ್ನ ಗ್ರಂಥದಲ್ಲಿ ಆಲುವ ಎಂಬ ತುಳುನಾಡನ್ನು 'ಒಲೊಕೊರ' ಎಂದು ಕರೆದಿದ್ದಾನೆ. ತುಳುನಾಡು ಉತ್ತರದಲ್ಲಿ ಗೋಕರ್ಣದಿಂದ ದಕ್ಷಿಣದಲ್ಲಿ ಚಂದ್ರಗಿರಿ ಅಥವಾ ಪಯಸ್ವಿನಿ ಹೊಳೆಯವರೆಗೂ ಪೂರ್ವದಲ್ಲಿ ಸಹ್ಯಾದ್ರಿ ಪರ್ವತಗಳಿಂದ (ಪಶ್ಚಿಮಘಟ್ಟಗಳು) ಪಶ್ಚಿಮದ ಅರಬೀ ಸಮುದ್ರದವರೆಗೂ ವಿಸ್ತರಿಸಿತ್ತು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. (ಉದಯವರ್ವ ರಾಜ,೧೯೯೮) ರಾಷ್ಟ್ರಕೂಟರ ಶಿಲಾಶಾಸನಗಳಲ್ಲಿ (ಕ್ರಿ.ಶ. ೭೩೧-೮೧೪) ತುಳುನಾಡನ್ನು ಅಂದರೆ ಆಲುವವನ್ನು ಆಲುವ ಖೇಡವೆಂದೂ, ಹೊಯ್ಸಳರ ಶಾಸನಗಳು ಈ ಪ್ರದೇಶವನ್ನು ಅಳುವ ಖೇಡವೆಂದೂ ಕರೆದಿವೆ. ಆದರೆ ಇಲ್ಲಿ ತುಳು ಪಾಡ್ದನಗಳಲ್ಲಿ ಉಲ್ಲೇಖಿಸಲ್ಪಟ್ಟ ತುಳುನಾಡನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. (ತುಳುವಿನಲ್ಲಿ ತೆನ್ಕಾಯಿ ನೀಲೇಶ್ವರೊಡ್ಡು ಬಡಕಾಯಿ ಬಾರ್ಕೂರು ಮುಟ್ಟ, ಮೂಡಾಯಿ ಗಟ್ಟದ ಬರಿಡ್ಕ್ ಪಡ್ಡೆಯಿ ಕಡಲ ಬರಿಮುಟ್ಟ) ಅಂದರೆ ತೆಂಕು ನೀಲೇಶ್ವರದಿಂದ ಬಡಗು ಬಾರ್ಕೂರು ತನಕ ಪೂರ್ವ ಗಟ್ಟದ ಬದಿಯಿಂದ ಪಶ್ಚಿಮ ಸಮುದ್ರತೀರದವರೆಗೆ ಹಬ್ಬಿರುವ ಪ್ರದೇಶದ ಮೂಲನಿವಾಸಿಗಳು ಮುಗೇರರು.ಕನ್ನಡಪ್ರದೇಶವಾದ ಉಡುಪಿಯ ಉತ್ತರಭಾಗ ಮತ್ತು ಕುಂದಾಪುರ ತಾಲೂಕುಗಳಲ್ಲಿ ಇವರು ಮೇರರೆಂದೇ ಗುರುತಿಸಿಕೊಳ್ಳುತ್ತಾರೆ.ಇವರಲ್ಲಿ ದುಡಿಯ ಬಳಕೆ ಇಲ್ಲ. ದುಡಿಯ ಸಾಹಿತ್ಯವೂ ಇಲ್ಲ. ಇಲ್ಲಿ ತುಳು ಮಾತೃಭಾಷೆಯ ಮುಗೇರರನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿದೆ. ಬಡತನದ ಕಾರಣದಿಂದ ತುಳುನಾಡಿನಿಂದ ಕೆಲಸವನ್ನು ಅರಸುತ್ತಾ ಚಾ, ಕಾಫಿ, ತೋಟಗಳಲ್ಲಿ ದುಡಿಯಲು ಮತ್ತು ಇತರ ಕೆಲಸಗಳನ್ನು ಮಾಡಲು ಮೂಡಿಗೆರೆ ಸಕಲೇಶಪುರ, ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಗಳಿಗೆ ವಲಸೆ ಹೋದ ಸಾವಿರಾರು ಕುಟುಂಬಗಳು ನೆಲಸಿವೆ. ವಲಸೆ ಹೋದರೂ ತಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಮರೆತಿಲ್ಲ. ಮೂಡಿಗೆರೆಯಲ್ಲಿ ಇವರು ಹಸುಳರೆಂದು ಗುರುತಿಸಿಕೊಂಡಿದ್ದಾರೆ. ಕರ್ನಾಟಕ ಸಾಹಿತ್ಯ ಪರಿಷತ್ ಬೆಂಗಳೂರು ಇವರು ಪ್ರಕಟಿಸಿದ ಜಿ.ಎಸ್. ಭಟ್ಟರ ಕೃತಿ 'ಹಸಲರ ಸಂಸ್ಕೃತಿ'ಯಲ್ಲಿ ಆರ್.ಇ.ಎಂಥೋವನ್ (*The Tribes and Castes of Bombay*-೧೯೨೨) ಹಸಲರಲ್ಲಿ ನಾಮಧಾರಿ ಹಸಲ, ಗೊಡ್ಡ ಹಸಲ, ಮುಗೇರ ಹಸಲ, ಉಪ್ಪಾರ ಹಸಲ, ಕರಿ ಮುಗೇರ

ಹಸಲ, ಬೆಳ್ಳಿ ಹಸಲ, ಅಂತರ್ಗಾಲ ಹಸಲ ಮೊದಲಾದ ಗುಂಪುಗಳಿವೆ ಎಂದು ಉಲ್ಲೇಖಿಸಿದ್ದಾರೆ (೧೯೯೩-೧೭).

ನಿಜವಾಗಿ ಇವರಾರೂ ಮೂಲ ಹಸಲರಲ್ಲ ಮತ್ತು ಹಸಲರ ಸಂಸ್ಕೃತಿಯನ್ನೂ ಅವಲಂಬಿಸಿದವರಲ್ಲ ಮತ್ತು ವೈವಾಹಿಕ ಸಂಬಂಧವನ್ನೂ ಇರಿಸಿಕೊಂಡವರಲ್ಲ. ಗೊಡ್ಡರು ಪರಿಶಿಷ್ಟ ಜಾತಿಗೆ ಸೇರಿದವರು, ಮುಗೇರ, ಕರಿಮುಗೇರ, ಒಂದೇ ಪಂಗಡವಾಗಿದ್ದು ಪರಿಶಿಷ್ಟ ಜಾತಿಯವರು, ಬೆಳ್ಳಿ ಹಸಳರೆಂದು ಕರೆಯಲ್ಪಡುವ ಕುಂದಾಪುರ ಮೂಲದ 'ಬೆಳಾರಿ'ಗಳು ಇವರು ಕೂಡಾ ಪರಿಶಿಷ್ಟ ಜಾತಿಗೆ ಸೇರಿದವರು. ಉಪ್ಪಾರರು ಉಡುಪಿ ಕುಂದಾಪುರ ಪ್ರದೇಶದ ಕನ್ನಡ ಪ್ರದೇಶದ 'ಕೂಸಾಳ' ಎಂದು ಕರೆಯಲ್ಪಡುವ ಪರಿಶಿಷ್ಟರು.ಇವರೆಲ್ಲಾ ಅವಿಭಜಿತ ದಕ್ಷಿಣ ಕನ್ನಡದಿಂದ ವಲಸೆ ಹೋಗಿ ನೆಲಸಿದವರು.ಇವರೆಲ್ಲ ಸರಕಾರದ ಸೌಲಭ್ಯಗಳಿಗಾಗಿ ಪರಿಶಿಷ್ಟ ಪಂಗಡದ ಜಾತಿ ದೃಢಪತ್ರ ತೆಗೆದುಕೊಳ್ಳುವವರಾದರೂ, ಇವರ ಸಂಸ್ಕೃತಿಯನ್ನು ಅಧ್ಯಯನ ಮಾಡದ ಕಾರಣ ಎಡವಟ್ಟಾಗಿದೆ.

ಮುಗೇರರ ಮಾತೃಭಾಷೆ ತುಳು. ಮೈ ಬಣ್ಣ ಸಾಮಾನ್ಯ ಕಪ್ಪು.ಸಾಮಾಜಿಕವಾಗಿ ಏಣಿ ಶ್ರೇಣಿ ವ್ಯವಸ್ಥೆಯ ಕಟ್ಟಕಡೆಯ ಮೆಟ್ಟಲು ಮತ್ತು ಅಸ್ಪೃಶ್ಯರು.ಇವರು ಒಟ್ಟು ಜನಸಂಖ್ಯೆ ಸುಮಾರು ಎರಡು ಲಕ್ಷ ಹೆಚ್ಚಾಗಿ ಊರಿನ ಹೊರಗೆ ಗುಂಪು ಗುಂಪಾಗಿ ವಾಸಿಸುತ್ತಾರೆ. ಹೆಚ್ಚಾಗಿ ಹಳ್ಳಿಗಳಲ್ಲಿ ವಾಸವಾಗಿದ್ದು ಕಾಡಿನ ಗುಡ್ಡಪ್ರದೇಶಗಳಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡಿರುತ್ತಾರೆ. ಇವರ ಮನೆಗೆ ಪಟ್ಟ ಎಂದು ಕರೆಯುತ್ತಾರೆ. ಕೆಲವು ಪ್ರದೇಶಗಳಲ್ಲಿ 'ದಟಿಕೆ' (ತಟಿಕೆ) ಎಂದೂ ಕರೆಯುವುದುಂಟು. ಇತ್ತೀಚಿನ ವರ್ಷಗಳಲ್ಲಿ ಸರಕಾರ ನೀಡಿದ ದರಕಾಸ್ತು ಜಮೀನಿನಲ್ಲಿ ಮತ್ತು ಮನೆ ನಿವೇಶನಗಳಲ್ಲಿ ವಾಸವಾಗಿದ್ದಾರೆ.ಇತರ ಕೆಳ ಜಾತಿಯವರು ಇವರನ್ನು ಬೇರೆ ಬೇರೆ ಹೆಸರುಗಳಿಂದ ಸಂಬೋಧಿಸುತ್ತಾರೆ.ಕೊರಗರು 'ಕಳಲೆರ್', ಮನ್ಸ ಜನಾಂಗದವರು 'ಕೈಪುಡೆರ್', ನಲಿಕೆ ಜನಾಂಗದವರು 'ಪೂಜಾರಿ', ಮಲೆಯಾಳಿ ಪ್ರದೇಶದಲ್ಲಿ ಮಯ್ಯ' (ಮಯ್ಯಮ್ಮಾರ್) ಎಂದೂ ಕರೆಯುತ್ತಾರೆ.

1.12 ಮುಗೇರ ವೃತ್ತಿ ಮತ್ತು ಉಪವೃತ್ತಿ

ತುಳುನಾಡಿನಾದ್ಯಂತ ಮುಗೇರರು ಕೃಷಿ ಕೂಲಿಕಾರ್ಮಿಕರು. ಜೈನ,ಬಂಟರ ಮೂಲದವರಾಗಿದ್ದುಕೊಂಡು ಗುತ್ತುವಿನ ರಕ್ಷಣೆಯೊಂದಿಗೆ ಕೃಷಿಯ ರಕ್ಷಣೆಯನ್ನು ಮಾಡಿ ಕೊಂಡು ಬಂದವರು. ಕೆಲವೊಂದು ಆಚರಣೆಗಳಿಂದಈ ಸಮುದಾಯಕ್ಕೆ ಕೃಷಿಜನ, ಜಾನುವಾರುಗಳ ಮೇಲೆ ಇದ್ದ ಪ್ರೀತಿ ಮತ್ತು ಭಾ ತುಳುನಾಡಿನಾದ್ಯಂತ ಮುಗೇರರು ಕೃಷಿ ಕೂಲಿಕಾರ್ಮಿಕರು. ಜೈನ, ಬಂಟರ ಮೂಲದವರಾಗಿದ್ದು ಕೊಂಡು ಗುತ್ತುವಿನ ರಕ್ಷಣೆಯೊಂದಿಗೆ ಕೃಷಿಯ ರಕ್ಷಣೆಯನ್ನು ಮಾಡಿ ಕೊಂಡು ಬಂದವರು.ಕೆಲವೊಂದು ಆಚರಣೆಗಳಿಂದ ಈ ಸಮುದಾಯಕ್ಕೆ ಕೃಷಿಜನ, ಜಾನುವಾರುಗಳ ಮೇಲೆ ಇದ್ದ ಪ್ರೀತಿಮತ್ತು ಭಾವನಾತ್ಮಕ ಸಂಬಂಧಗಳು ಬಹಳ ವಿಶಿಷ್ಟವಾದುದು ಎಂದು ತಿಳಿಯುತ್ತದೆ. ಮುಗೇರರ ಆಚರಣೇಗಳಾದ ಆಟಿಕಳಂಜ, ಪಿಲಿಪಂಜಿಕುಣಿತಗಳು ಕೃಷಿ ಸಂಬಂಧಿತ ಚಟುವಟಿಕೆಗಳಾಗಿದ್ದು, ಸಮೃದ್ಧಿ ಮತ್ತು ಸಾಮೂಹಿಕ ರಕ್ಷಣೆಯನ್ನು ನೀಡುವ ಆಶಯವನ್ನು ಹೊಂದಿದೆಯೆನ್ನಬಹುದು(ಕೊಯಿರಾಬಾಳೆಪುಣಿ). ತುಳುನಾಡಿನ ಸಾಮಾಜಿಕಸ್ತರ ವ್ಯವಸ್ಥೆಯ ಉನ್ನತ ಘಟಕವಾದ ಗುತ್ತಿನ ಮನೆಯ ಕಂಬಳದ ಗದ್ದೆಗೆ ಬೀಜವನ್ನು"ಮೂಲದ ಮುಗೇರನೇ ಬಿತ್ತಬೇಕು"ಎಂಬ ಅಲಿಖಿತ ಸಂಪ್ರದಾಯವಿತ್ತು ಎಂಬುದನ್ನುಜಾನಪದ ಪಾಡ್ದನದಲ್ಲಿ ಕಾಣಬಹುದಾಗಿದೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ದೈವದ ಮತ್ತು ಪ್ರಮುಖ ಬಾಕಿಮಾರು ಗದ್ದೆಗೆ ಪೂಕರೆಅಥವಾ ಬಾಳೆ ಹಾಕುವಲ್ಲಿಯು ಮೂಲದ ಮುಗೇರರಿಗೆ ಅಗ್ರಸ್ಥಾನವಿತ್ತು(ಗಣನಾಥಎಕ್ಕಾರು).ಗುತ್ತಿನ ಮನೆಯಲ್ಲಿ ತುಲಾ ಸಂಕ್ರಾಮಣದಂದು ಕರೆಯುವ ಪೋಲಿಯು ಕೂಡ ಮುಗೇರರಿಂದ ಆಚರಿಸಲ್ಪಡುತಿತ್ತುವೆಂಬುದನ್ನು ಗಮನಿಸಬಹುದಾಗಿದೆ. ಒಂದು ದೃಷ್ಟಿಯಲ್ಲಿ ಇವು ಉಳಿಗ-ವ್ಯವಸ್ಥೆಯಂತೆ ಕಂಡರೂ ಸಾಂಧರ್ಭಿಕ ಅಗ್ರತೆಯನ್ನು ಮುಗೇರರು ಅನುಭವಿಸಿದ್ದರು ಎಂಬುದನ್ನು ಇಲ್ಲಿ ಗಮನಿಸ ಬಹುದಾಗಿದೆ.

ಈ ಮೇಲಿನ ಆಚರಣೇಗಳನ್ನು ಗಮನಿಸಿದಾಗ ಮುಗೇರರು ನಿಜವಾಗಿಯು ಈ ಭೂಮಿಯ ಒಡೆಯರಾಗಿದ್ದರೆಮ್ಬುದು ತುಳಿದುಬರುತ್ತದೆ. ಒಂದೊ ಕಾಲದಲ್ಲಿ ಭೂಮಿಯ ಒಡೆಯಾರಗಿದ್ದು ತದನಂತರ ಭೂಮಿಯ ಹಕ್ಕನ್ನುಕ ಳೆದುಕೊಂಡರು ಭೂಮಿಯ ಜೊತೆಗಿನ ಅವಿನಭಾವ ಸಂಬಂಧವನ್ನು ಕಸಿದುಕೊಳ್ಳಲು ಇತರೆ ಜಾತಿಗಳಿಗೆ ಸಾಧ್ಯವಾಗಿಲ್ಲವೆನ್ನುವುದು ಇದರಿಂದ ವೇದ್ಯವಾಗುತ್ತದೆ. ಮುಗೇರರ ಗಂಡಸರು ಮತ್ತು ಹೆಂಗಸರು ದುದಿಮೆಯಲ್ಲಿ ಸಮಭಾಗಿಗಳು. ಇಬ್ಬರ ಗಳಿಕೆಯೂ ಕುಟುಂಬ ಪೋಷಣೆಗೆ ಆಧಾರಸ್ತಂಭ. ಇವರ ಉಪವೃತ್ತಿಯಾಗಿ ಅಡಿಕೆ ತೋಟ, ಚಹಾ, ಕಾಫಿ, ಏಲಕ್ಕಿ ತೋಟಗಳಲ್ಲೂ ದುಡಿಯುವುದನ್ನು ಕರಗತ ಮಾಡಿಕೊಂಡಿದ್ದಾರೆ.ಗಂಡಸರು ಕೃಷಿ ಚಟುವಟಿಕೆ ಇಲ್ಲದ ಸಂದರ್ಭದಲ್ಲಿ ಮನೆಗಳಿಗೆ ಗೋಡೆ ಕಟ್ಟುವುದು,ಕಲ್ಲು ಕಟ್ಟುವ ಕೆಲಸ,ಕಲ್ಲು ಕಡಿಯುವ ಕೆಲಸದಲ್ಲೂ ನಿಪುಣರು.ತುಳುನಾಡಿನಲ್ಲಿ ಮೂರ್ತೆದಾರರು ಬಿಲ್ಲವರು.ಬಿಲ್ಲವರ ನಂತರ ಶೇಂದಿ ಇಳಿಸುವ ಅಧಿಕಾರವಿದ್ದದು ಮುಗೇರರಿಗೆ ಮಾತ್ರ(ಕೊಯಿರಾಬಾಳೆಪುಣಿ,೨೦೦೯). ಮುಗೇರರ ದೈವಗಳಾದ"ಎಣ್ಮೂರ-ದೆಯ್ಯುವಿನ ವಾರ್ಷಿಕ ಆಚರಣೆಯಲ್ಲೂ ಶೇಂದಿಯನ್ನು ನೈವೇದ್ಯೆಯಾಗಿ ಸಮರ್ಪಿಸಲಾಗುತ್ತದೆ. ಮುಗೇರರ ಹೆಂಗಸರು ಬಿಡುವಿನ ಸಂದರ್ಭದಲ್ಲಿ"ಮುಂಡೆಯಿ"ಎಂಬ ಗಿಡಗಳ ಗರಿಯಿಂದ ಚಾಪೆ ಹೆಣೆಯುತ್ತಿದ್ದರು. ಅಲ್ಲದೆ ತಾಳೆ ಗರಿಯಿಂದ ಬೇರೆ ಬೇರೆ ಗಾತ್ರದ ಅಂದವಾದ ಕುಕ್ಕೆಗಳನ್ನೂ ಹೆಣೆಯುತ್ತಿದ್ದರು. ಇಂದಿಗೂ ಗ್ರಾಮೀಣ ಪ್ರದೇಶದ ಮುಗೇರರು ಮಳೆಗಾಲದಲ್ಲಿ ಕೃಷಿಮಾಡುವ ಸಂದರ್ಭದಲ್ಲಿ ಧರಿಸುವ ಗೊರಬು ತಯಾರಿಸುವುದನ್ನುಮತ್ತು ಕೆಲವು ಪ್ರದೇಶದಲ್ಲಿ ಬುಟ್ಟಿ ಹೆಣೆಯುವ ವೃತ್ತಿಯನ್ನು ಮಾಡಿ ಸಂಪಾದಿಸುವವರ ಸಂಖ್ಯೆ ಗಣನೀಯವಾಗಿದೆ.

೧.೧೩ ಮುಗೇರರ ಆಹಾರ ಪದ್ಧತಿ:

ಮುಗೇರರು ಆಹಾರಕ್ಕಾಗಿ ಅಕ್ಕಿಯನ್ನು ಅವಲಂಬಿಸಿದ್ದರು.ಇವರು ಮಾಂಸಾಹಾರಿಗಳಾದರೂ ಗೋಮಾಂಸ ನಿಷಿದ್ಧ. ಇಂದಿಗೂ ಹಿರಿ ತಲೆಮಾರಿನ ಮುಗೇರರು ಚರ್ಮದ ಪಾದರಕ್ಷೆಯನು ಧರಿಸುವುದಿಲ್ಲ. ಮುಗೇರದೈವಗಳ ಪೂಜಾರಿಗಳು(ಪಾತ್ರಿಗಳು,ಪರಿಚಾರಕರು) ಹಿಂದುಳಿದ ಜಾತಿಗಳ ಮನೆಯಲ್ಲಿ ಆಹಾರ ಸೇವಿಸುವುದಿಲ್ಲ. ಈ ಮೊದಲೇ ತಿಳಿಸಿದಂತೆ ಮುಗೇರ ಎಂಬ ಪದವು ಪ್ರಾಣಿಜನ್ಯದಿಂದ ಉತ್ಪತ್ತಿಯಾಗಿರುವುದು ಮತ್ತು ಇವರು ಪ್ರಾಣಿ ಮತ್ತು ಮೀನಿನ ಬೇಟೆಯಲ್ಲಿ ಬಲು ನಿಪುಣರು. ಬಿಲ್ಲು ಬಾಣ ಮತ್ತು ಕಲ್ಲ ಬಿರುವನ್ನು ಬಹು ವ್ಯವಸ್ಥಿತವಾಗಿ ಉಪಯೋಗಿಸುವುದರಲ್ಲಿ ಇವರು ಚಾಕಚಕ್ಯತೆಯನ್ನು ಹೊಂದಿದರು. ಇವುಗಳನ್ನು ಇಂದಿಗೂ ನಾವು ಮುಗೇರರ ಸಾಮುದಾಯಿಕ ಆಚರಣೆಯಲ್ಲಿ ಗಮನಿಸಬಹುದಾಗಿದೆ. ಕಾಡಿನಲ್ಲಿ ದೊರೆಯುವ ನರೆ ಮತ್ತು ಗಡ್ಡೆ-ಗೆಣಸುಗಳು,ಅನೇಕ ಬಗೆಯ ತರದ ಬಿಜಗಳು, ಸೊಪ್ಪು, ಸಿಹಿಗೆಣಸು, ಮರಗೆಣಾಸಗಳನ್ನು ಧಾರಾಳವಾಗಿ ಆಹಾರವನ್ನಾಗಿ ಬಳಸುತ್ತಿದ್ದರು. ಮಳೆಗಾಲದಲ್ಲಿ ಕೆಲಸವಿಲ್ಲದೆ ಬಡತನ ಸಂದರ್ಭದಲ್ಲಿ ಶೇಖರಿಸಿಟ್ಟ ರಾಗಿ,ಉದ್ದುವಿನ ಗಂಜಿಯನ್ನು ಕುಡಿಯುತ್ತಿದ್ದರು(ಚಿನ್ನಪ್ಪಗೌಡ).ಆದರೆ ಇತ್ತೀಚ್ಚಿನ ದಿನಗಳಲ್ಲಿ ಕೃಷಿ-ಕಡಿಮೆಯಾದುದರ ಪರಿಣಾಮವಾಗಿ ಯುವ-ಮುಗೇರ ಜನತೆ ನಗರಗಳಿಗೆ ಗಣನೀಯವಾಗಿ ವಲಸೆ ಹೋಗುತ್ತಿದ್ದಾರೆ. ಅಧುನಿಕತೆಯ ಪರಿಣಾಮವಾಗಿ ಪ್ರಸ್ತುತ ಹೆಚ್ಚು ಹೆಚ್ಚಾಗಿ ವಿಧ್ಯಾಭ್ಯಾಸದಕದೆಗೆ ಒಲವನ್ನು ತೋರಿಸುತ್ತಿದ್ದಾರೆ ಪರಿಣಾಮವಾಗಿ ಕೆಲ ಜನರು ಸರ್ಕಾರಿ ನೌಕರಿಯಲ್ಲಿ ಉನ್ನತ ಸ್ಥಾನವನ್ನು ಗಳಿಸಿದ್ದಾರೆ. ಆದರೂ ತಾಂತ್ರಿಕ,ವೈದ್ಯಕೀಯ ಮತ್ತು ಕಾನೂನು ವಲಯದಲ್ಲಿ ಮತ್ತು ಖಾಸಗಿ ಸಂಸ್ಥೆಯ ಉನ್ನತ ಸ್ಥಾನದಲ್ಲಿರುವವರ ಸಂಖ್ಯೆ ತುಂಬಾ ಕಡಿಮೆಯೆಂದು ಹೇಳಬಹುದು. ಬಹುತೇಕ ಮುಗೇರರು ಬಡತನರೇಖೆಯಿಂದ ಕೆಳಗಿರುವ ಜನವರ್ಗವಾಗಿದ್ದು ಇತ್ತೀಚ್ಚಿನ ಸರಕಾರೇತರ ಸಂಸ್ಥೆಗಳ ಕಲ್ಯಾಣ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನದಿಂದ ತಕ್ಕ ಮಟ್ಟಿನ ಉನ್ನತಿ

ಕಾಣಬಹುದಾಗಿದೆ,ಅಲ್ಲದೆಯೂ ಕೆಲವು ಸಾಹಸಿ ಯುವಕರು ಸ್ವ-ಉದ್ಯೋಗದಂತಹ ಚಟುವಟಿಕೆಯಲ್ಲಿ ಕಾರ್ಯಮಗ್ನರಾಗಿದ್ದಾರೆ. ಆದರೂ ಈ ಸಮುದಾಯದಲ್ಲಿ ಅಮೂಲಾಗ್ರ ಬದಲಾವಣೇಯನ್ನು ತರುವ ದ್ರಷ್ಟಿಯಲ್ಲಿ ಸರಕಾರ,ಸಂಸ್ಥೆ ಮತ್ತು ಸರಕಾರಿ ಸ್ವಾಮ್ಯದ ಬ್ಯಾಂಕ್ಗಳು ಇನ್ನು ಹೆಚ್ಚಿನ ರೀತಿಯಲ್ಲಿ ಕೆಲಸಮಾಡುವ ಅಗತ್ಯವಿದೆ.

1.14 , ಸಂಶೋಧನಾ ಅಧ್ಯಯನ ವಿಧಾನ/ ತಂತ್ರಗಳು/ ಆಕರಗಳು

ಸಂಶೋಧನಾ ಅಧ್ಯಯನ ವಿಧಾನ ಒಂದು ಪ್ರಾಮುಖ್ಯವಾದ ಸ್ತರವಾಗಿದ್ದು,ಇದು ಅಧ್ಯಾಯನದ ವಿವಿಧ ಪ್ರಕ್ರಿಯೆಯನ್ನು ವಿವರಿಸುವುದರ ಜೊತೆಗೆ ಸಂಶೋಧಕನು ಯಾವುದನ್ನು ತನ್ನ ಸಂಸೋಧನಗೆ ಅಳವಡಿಸಲಾಗಿದೆ ಎಂಬುದನ್ನು ವಿವರಿಸಲಾಗಿದೆ.

1.14.1 ಅಧ್ಯಯನವ್ಯಾಪ್ತಿ

ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಬಂಟ್ವಾಳ ತಾಲೂಕುಗಳಿಗೆ ಸೀಮಿತ ಗೊಳಿಸಲಾಗಿದೆ. ಈ ವ್ಯಾಪ್ತಿಯಲ್ಲಿ ಬರುವ ಮುಗೇರ ಸಮುದಾಯದ ಸ್ಥಿತಿಯನ್ನು ಅರಿಯಲು,ಅವರ ಕೌಟುಂಬಿಕ ವಿಷಯಗಳ ತಿಳಿಯಲು ಮತ್ತು ಪ್ರಸ್ತುತ ಕಾಲಮಾನದಲ್ಲಿ ಆಗಿರುವ ಬದಲಾವಣೆಯನ್ನು ಗುರುತಿಸಲು ಹಾಗೂ ಸರಕಾರಪ್ರ◌ಾ ಯೋಜಿತ ಸೌಲಭ್ಯಗಳಿಂದ ಉಂಟಾಗಿರುವ ಸಾಮಾಜಿಕ ಚಲನಶೀಲತೆಯನ್ನು ಕಂಡುಕೊಳ್ಳಲು ಈ ಅಧ್ಯಯನವನ್ನು ನಡೆಸಲಾಗಿದೆ.

1.14.2 ಅಧ್ಯಯನದ ಉದ್ದೇಶಗಳು

೧.ಅಧ್ಯಯನಕ್ಕೆ ಆಯ್ಕೆಯಾದ ಸೂಚನದಾರರ ವೈಯಕ್ತಿಕ ಮಾಹಿತಿಯನ್ನು ತಿಳಿದು ಕೊಳ್ಳುವುದು.

೨.ಅಧ್ಯಯನ ಕ್ಷೇತ್ರದ ಮೊಗೇರ ಸಮುದಾಯದಲ್ಲಿ ಆಗಿರುವ ಸಾಮಾಜಿಕ-ಆರ್ಥಿಕ ಬದಲಾವಣೇಯನ್ನು ಗುರುತಿಸುವುದು.

೩.ಸಾಮಾಜಿಕ ಸಂಸ್ಥೆಗಳಲ್ಲಿ ಬದಲಾವಣೆ ಮತ್ತು ಮೊಗೇರ ಸಮುದಾಯದ ಮೇಲೆ ಅವುಗಳ ಪರಿಣಾಮವನ್ನು ತಿಳಿದಿಕೊಳ್ಳುವುದು.

೪.ಭೂಸುಧಾರಣೆ ಮತ್ತು ಅದರಿಂದ ಮೊಗೇರ ಸಮುದಾಯದಲ್ಲಿ ಆಗಿರುವ ಬದಲಾವಣೆಯನ್ನು ತಿಳೀಯುವುದು.

೫. ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿರುವ ಮೊಗೇರ ಸಮುದಾಯದ ಸಾಮಾಜಿಕ ಬದಲಾವಣೇ ಮತ್ತು ಅದಕ್ಕೆ ಕಾರಣವಾಗಿರುವ ಅಂಶಗಳ ಬಗ್ಗೆ ಅಧ್ಯಯನ ಮಾಡುವುದು.

1.14.3 ಅಧ್ಯಯನ ಜನಸಂಖ್ಯೆ ಮತ್ತು ಮಾದರಿ

ಬದಲಾಗುತ್ತಿರುವ ಮೊಗೇರರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳು,ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಮತ್ತು ಮಂಗಳೂರು ತಾಲೂಕುಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಈ ಎರಡು ತಾಲೂಕಿನಲ್ಲಿರುವ ಮುಗೇರರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಮುಖ್ಯವಾಗಿ ಮುಗೇರರರು ದಕ್ಷಿಣ ಕನ್ನಡ,ಉಡುಪಿ ಮತ್ತು ಕಾಸರಗೋಡು ಜಿಲ್ಲೆಯಲ್ಲಿ ಕಂಡು ಬರುವ ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದಾರೆ.

ಯಾದೃಚ್ಛಿಕ ನಮೂನೆಯ ಆಯ್ಕೆಯಲ್ಲಿ ಮೂಲ ಗುಂಪಿನಲ್ಲಿರುವ ಪ್ರತಿ ಬಿಡಿಭಾಗಕ್ಕೂ ನಮೂನೆಯಲ್ಲಿ ಆಯ್ಕೆಯಾಗುವ ಸಾಧ್ಯತೆಯ ಕ್ರಮವನ್ನು ಕೈಗೊಳ್ಳಲಾಗಿದೆ.ಸಂಶೋಧನೆಗಾಗಿ ಈ ಎರಡು ತಾಲುಕಿನ ಸಂವಾದಿಗಳನ್ನು ಸರಳ ಯಾದೃಚ್ಛಿಕ ನಮೂನೆ ವಿಧಾನವನ್ನು ಬಳಸಲಾಗಿದೆ. ಸರಳ ಯಾದೃಚ್ಛಿಕ ನಮೂನೆ ವಿಧಾನ ಕ್ರಮಗಳನ್ನುಈ ಉದ್ದೇಶಕ್ಕಾಗಿ ಬಳಕೆ ಮಾಡಲಾಗಿದೆ. ಸಂಶೋಧಕನು ಇದಕ್ಕಾಗಿ ಮುಗೇರ ಜಾತಿಯ ಪುರುಷ ಮತ್ತು ಮಹಿಳೆಯರನ್ನು ಸಂದರ್ಶಿಸಲಾಗಿದೆ.

1.14.4 ಸಂಶೋಧನಾ ತಂತ್ರಗಳು

ಸಂಶೋಧನಾ ವ್ಯಾಪ್ತಿಯ ಎರಡು ತಾಲೂಕುಗಳಾದ ಮಂಗಳೂರು ಮತ್ತು ಬಂಟ್ವಾಳದಲ್ಲಿ ಕ್ರಮವಾಗಿ ೨೭ ಮತ್ತು ೨೬ ಸೂಚನದಾರರಂತೆ ಒಟ್ಟು ೫೩ ಸೂಚನದಾರರನ್ನು ಸರಳ ಯಾದೃಚ್ಛಿಕ ಮಾದರಿ ವಿಧಾನದ ಮೂಲಕ ಆಯ್ಕೆ ಮಾಡಿ ಕೊಂಡು ಸಂದರ್ಶನ ಅನುಸೂಚಿಯ ಸಹಾಯದಿಂದ ವೈಯಕ್ತಿಕ ಸಂದರ್ಶನ ಮತ್ತು ಅವಲೋಕನದಂತಹ ತಂತ್ರ ಸಾಧನಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

1.14.5 ಪ್ರಾಥಮಿಕ ಆಕರಗಳು

ಸಂದರ್ಶನ ಅನುಸೂಚಿಯನ್ನು ಸಿದ್ಧಪಡಿಸಿ ಅದನ್ನು ಪೂರ್ವಪರೀಕ್ಷೆಗೆ ಒಳಪಡಿಸಿದ ನಂತರ ಕಂಡುಬಂದ ದೋಷಗಳನ್ನು ಸರಿಪಡಿಸಿ ಕೊಂಡು ೫೩ಮುಗೇರ ಪುರುಷ ಮತ್ತು ಮಹಿಳಾ ಸಂವದಿಗಳನ್ನು ಆಯ್ಕೆ ಮಾಡಿ ಅವರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.ಮಾಹಿತಿ ಸಂಗ್ರಹಣೆಗಾಗಿ ಸಂದರ್ಶನದ ಜೊತೆಗೆ ಅನೌಪಚಾರಿಕ ಅವಲೋಕನದಂತಹ ವಿಧಾನವನ್ನು ಬಳಸಲಾಯಿತು.

1.14.6 ಅನುಷಂಗಿಕ ಆಕರಗಳು

ಅಧ್ಯಯನಕ್ಕೆ ಬೇಕಾದ ಅನುಷಂಗಿಕ ಮಾಹಿತಿಗಳನ್ನು ಸರ್ಕಾರಿ ಇಲಾಖಾ ದಾಖಲಾತಿಗಳನ್ನು , ಜನಗಣತಿ ದಾಖಲಾತಿಗಳು, ಪತ್ರಿಕೆಗಳು, ನಿಯತ ಕಾಲಿಕೆಗಳು, ಮುಗೇರ ಸಂಘಗಳು ಪ್ರಕಟಿಸಿರುವಂತಹ ಸಂಚಿಕೆಗಳು, ಸಮೀಕ್ಷಾ ಗ್ರಂಥಗಳು,ಲೇಖನಗಳಿಂದ ಸಂಗ್ರಹಿಸಲಾಗಿದೆ.

1.15 ಸಂಶೋಧನಾ ಸಮಸ್ಯೆಯ ಹೇಳಿಕೆ

ಪ್ರಸ್ತುತ ಅಧ್ಯಯನವು ಬದಲಾಗುತ್ತಿರುವ ಮೊಗೇರರ ಅರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳು, ದಕ್ಷಿಣಕನ್ನಡ ಜಿಲ್ಲೆಯ ಬಂಟ್ವಾಳ ಮತ್ತು ಮಂಗಳೂರು ತಾಲೂಕುಗಳ ಅಧ್ಯಯನವಾಗಿದೆ.

1.16 ಅಧ್ಯಯನದ ಪ್ರಾಮುಖ್ಯತೆ

ಮುಗೇರರು ದಕ್ಷಿಣ ಕನ್ನಡ,ಉಡುಪಿ ಮತ್ತು ಕಾಸರಗೋಡು ಜಿಲ್ಲೆಯಲ್ಲಿ ವ್ಯಾಪಕವಾಗಿ ವಾಸಿಸುವ ಪರಿಶಿಷ್ಟ ಜಾತಿಗೆ ಸೇರಿದ ಜನವರ್ಗವಗಿದೆ. ಸಾಂಸ್ಕೃತಿಕವಾಗಿ ಇದು ಒಂದು ಶ್ರೀಮಂತ ಜಾತಿ ಆದರೆ ಸಾಮಾಜಿಕವಾಗಿ ಇಂದಿಗೂ ಜಾತಿ ವ್ಯವಸ್ಥೆಯಲ್ಲಿ ಕೆಳಮಟ್ಟದಲ್ಲಿ ಗುರಿತಿಸಲ್ಪಡುವ ವರ್ಗವಾಗಿದೆ.ಸಮಾಜವು ನಿಂತ ನೀರಲ್ಲ,ಕಾಲಕಾಲಕ್ಕೆ ತನ್ನ ಆಂತರಿಕ ಚಲನಶೀಲತೆಯ ಮೂಲಕ ಸಾಮಾಜಿಕ ಬದಲಾವಣೇಯನ್ನು ತರುತ್ತದೆ. ಕಾಲಾನುಕ್ರಮದಲ್ಲಿ ಮುಗೇರರಲ್ಲಿ ಉಂಟಾಗಿರುವ ಬದಲಾವಣೇ ಮತ್ತು ಪ್ರಸ್ತುತ ಸ್ಥಿತಿಗತಿಗಳನ್ನು ಅಧ್ಯಯನ ನಡೆಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.ಮುಗೇರ ಸಮುದಾಯದ ಕುರಿತಾದ ಬೆರಳೆಣಿಕೆಯ ಸಂಶೋಧನೆ,ಲೇಖನಗಳು ವಿರಳವಾಗಿ ನಡೆದಿದ್ದರೂ,ಅವರ ನೈಜ ಸ್ಥಿತಿಗತಿಗಳು ಮತ್ತು ಅದರ ಬದಲಾವಣೆಯನ್ನು ಗುರುತಿಸುವ ಕಾರ್ಯ ಇದುವರೆಗೆ ನಡೆದಿಲ್ಲವೆನ್ನಬಹುದು. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಅಧ್ಯಯನವನ್ನು ಮಾಡಲಾಗಿದೆ.

ಭೂ-ಮಸೂದೆ,ಮೀಸಲಾತಿ ಮತ್ತು ಸ್ವಾತಂತ್ರೋತ್ತರ ಸರಕಾರಗಳ ಅಭಿವೃದ್ಧಿ ಕಾರ್ಯಕ್ರಮಗಳಿಂದ ದಲಿತರ ಏಳಿಗೆ ಆಗಿದೆಯೆಂಬ ಮಾತು ಒಂದು ಕಡೆಯಾದರೆ,ಆರ್ಹ ದಲಿತರಿಗೆ ಅಥವಾ ಮುಗೇರರಿಗೆ ಈ ಎಲ್ಲಾ ಸವಲತ್ತು ಸಮರ್ಪಕವಾಗಿ ಮುಟ್ಟಿಲ್ಲವಿಂಬುದು ದಿಟ. ಇಂದಿಗೂ ಮುಗೇರರಲ್ಲಿ ವಸತಿ,ನಿವೇಶನ ಮತ್ತು ಮೂಲಭೂತ ಸೌಲಭ್ಯಗಳಿಂದ ವಂಚಿತರಾದ ಕುಟುಂಬಗಳಿರುವುದು ಸಂಶೋಧಕನ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ

ತಿಳಿದು ಬಂದಿದೆ.ಈ ನಿಟ್ಟಿ ನಲ್ಲಿ ಈ ಅಧ್ಯಯನವು ಸರಕಾರ ಪ್ರಾಯೋಜಿತ ಕಾರ್ಯಕ್ರಮಗಳ ಅನುಷ್ಠಾನ,ಪರಿಣಾಮ ಮತ್ತು ಭೂ-ಮಸೂದೆಯ ಅನುಷ್ಠಾನದಿಂದ ಆಗಿರುವ ಅನುಕೂಲದ ಬಗ್ಗೆ ತಿಳಿಯಲು ಉಪಯುಕ್ತವಾಗಿದೆ. ಒಟ್ಟಾರೆಯಾಗಿ ಬ್ಬೇರೆ ಬೇರೆ ಸಂಸ್ಕೃತಿಗಳ ಪ್ರಭಾವ,ಶಿಕ್ಷಣ,ವೈಚಾರಿಕತೆ,ಸರ್ಕಾರಿ ಕಾರ್ಯಕ್ರಮಗಳ ಅನುಷ್ಠಾನ, ಸಾರಿಗೆ-ಸಂವಹನಗಳಿಂದ ಸಾಮಾಜಿಕ ಬದಲಾವಣೆ ಉಂಟಾಗಿದೆಯೆಂಬ ನಂಬಿಕೆಯೊಂದಿಗೆ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ಅತೀ ಮಹತ್ವದ್ದಾಗಿದೆ ಎನ್ನಬಹುದು.

1.17 ಅಧ್ಯಯನದ ಇತಿಮಿತಿಗಳು

ಈ ಸಂಶೋಧನೆಯು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಬಂಟ್ವಾಳ ತಾಲೂಕಿಗೆ ಮಾತ್ರ ಸೀಮಿತವಾಗಿದೆ ಮತ್ತು ಕಂಡು ಕೊಂದಿರುವ ಫಲಿತಾಂಶಗಳು ಕೇವಲ ಈ ಭೌಗೋಳಿಕ ಪ್ರದೇಶಕ್ಕೆ ಮಾತ್ರ ಅನ್ವಯಿಸುತ್ತದೆ.

1.18 ಮಾಹಿತಿವಿಶ್ಲೇಷಣೆ

ಈಗಾಗಲೇ ತಿಳಿಸಿರುವ ಸಂಶೋಧನಾ ವಿಧಾನಗಳ ಹಲವಾರು ಮೂಲಗಳಿಂದ ಸಂಗ್ರಹಿಸಿದ ಸಂಶೋಧನಾ ಮಾಹಿತಿಯನ್ನು ಪಟ್ಟಿಮಾಡುವಿಕೆ, ಸೂಚೀಕರಣ ಮತ್ತು ಅಗತ್ಯವೆನಿಸುವಷ್ಟು ಸಂಖ್ಯಾಶಾಸ್ತ್ರೀಯ ವಿಧಾನದ ಬಳಕೆಯ ಮೂಲಕ ಸಂಶೋಧನಾ ಮಾಹಿತಿಯನ್ನು ಸಮಾಜವಿಜ್ಞಾನದ ಸೈದ್ಧಾಂತಿಕ ಚೌಕಟ್ಟಿನಲ್ಲಿ ವಿಶ್ಲೇಷಿಸಿ ವರದಿ ತಯಾರಿಸಲಾಗಿದೆ.

ಅಧ್ಯಾಯ-ಎರಡು

ಮಾಹಿತಿ ವಿಶ್ಲೇಷಣೆ

ಕೋಷ್ಟಕ-2.1: ಸೂಚನದಾರರ ವಯಸ್ಸು ಮತ್ತು ವಾಸಸ್ಥಳದ ಹಂಚಿಕೆಯ ವಿವರ

ವಯಸ್ಸು / ವಾಸ ಸ್ಥಳ	ನಗರ	ಗ್ರಾಮೀಣ	ಒಟ್ಟು
೩೦-೩೯	೧೧(೨೦.೭೫)	೮ (೧೫.೦೯)	೧೯ (೩೫.೮೪)
೪೦-೪೯	೦	೬ (೧೧.೩೨)	೬ (೧೧.೩೨)
೫೦-೫೯	೭ (೧೩.೨೦)	೨ (೩.೭೭)	೯ (೧೬.೯೮)
೬೦-೬೯	೫ (೯.೪೩)	೭ (೧೩.೨೦)	೧೨ (೨೨.೬೩)
೬೯+	೪ (೭.೫೪)	೩ (೫.೬೬)	೭ (೧೩.೨೦)
ಒಟ್ಟು	೨೭(೫೦.೯೪)	೨೬(೪೯.೦೬)	೫೩(೧೦೦)

ಈ ಮೇಲಿನ ಕೋಷ್ಟಕದಲ್ಲಿ ೨೭(ಶೇ.೫೦.೯೪) ಸೂಚನದಾರರು ನಗರ ಪ್ರದೇಶದವರಾಗಿದ್ದು ಉಳಿದ ೨೬(ಶೇ.೪೯.೦೬) ಸೂಚನದಾರರು ಗ್ರಾಮೀಣ ಪ್ರದೇಶದವರಾಗಿದ್ದಾರೆ. ೩೦-೩೯ ರ ವಯೋ ಗುಂಪಿನಲ್ಲಿಒಟ್ಟು ೧೯(ಶೇ.೩೫.೮೪) ಸೂಚನದಾರರಿದ್ದು,ಅವರಲ್ಲಿ ೧೧(ಶೇ. ೨೦.೭೫) ಸೂಚನದಾರರು ನಗರ ಪ್ರದೇಶದವರು ಹಾಗೂ ೮(ಶೇ .೧೫.೦೯) ಸೂಚನದಾರರು ಗ್ರಾಮೀಣ ಪ್ರದೇಶದವರಾಗಿದ್ದಾರೆ. ೪೦-೪೯ ವಯೋಮಾನದ ಸೂಚನದಾರರಲ್ಲಿ ಸುಮಾರು ೬(ಶೇ.೧೧.೩೨) ಸೂಚನದಾರರು ಗ್ರಾಮೀಣ ಪ್ರದೇಶದವರಾಗಿದ್ದಾರೆ. ೫೦-೫೯ ವಯೋಮಾನದಲ್ಲಿ ಒಟ್ಟು ೯ ಸೂಚನದಾರರಿದ್ದು ಅವರಲ್ಲಿ ೭(ಶೇ.೧೩.೨೦) ಮಂದಿ ನಗರ ಪ್ರದೇಶದವರಾಗಿದ್ದು, ೨(ಶೇ.೩.೭೭) ಸೂಚನದಾರರು ಗ್ರಾಮೀಣ ಪ್ರದೇಶದ ವರಾಗಿದ್ದಾರೆ. ೬೦-೬೯ ವಯೋವರ್ಗದಲ್ಲಿ ಒಟ್ಟು ೧೨(ಶೇ.೨೨.೬೩)

ಮಂದಿ ಸೂಚನದಾರರಿದ್ದು, ಹೆಚ್ಚಿನ ಸೂಚನದಾರರು ಅಂದರೆ ೭(ಶೇ.೧೩.೨೦) ಮಂದಿ ಗ್ರಾಮೀಣ ಪ್ರದೇಶಕ್ಕೆ ಸೇರಿದವರಾಗಿದ್ದು ಉಳಿದ ೫(ಶೇ.೯.೪೩) ಮಂದಿ ನಗರ ಪ್ರದೇಶಕ್ಕೆ ಸೇರಿದವರಾಗಿದ್ದಾರೆ. ಕೊನೆಯ ವಯೋಮಾನ ಅಂದರೆ ೬೦ ಮತ್ತು ಅದಕ್ಕಿಂತ ಮೇಲ್ಪಟ್ಟ ಸೂಚನದಾರರಲ್ಲಿ ೪(ಶೇ. ೭.೫೪) ಮಂದಿ ನಗರ ಪ್ರದೇಶದವರಾಗಿದ್ದು ಉಳಿದ ೩(ಶೇ.೫.೬೬) ಸೂಚನದಾರರು ಗ್ರಾಮೀಣ ಪ್ರದೇಶಕ್ಕೆ ಸೇರಿದವರಾಗಿದ್ದಾರೆ. ಒಟ್ಟಿನಲ್ಲಿ ಈ ಅಧ್ಯಯನದಲ್ಲಿ ನಗರ ಪ್ರದೇಶದ ಸೂಚನದಾರರು ಹೆಚ್ಚಿನ ಅಂದರೆ ೨೭(ಶೇ.೫೦.೯೪) ಸಂಖ್ಯೆಯಲ್ಲಿದ್ದು ಗ್ರಾಮೀಣ ಪ್ರದೇಶದ ಸೂಚನದಾರರು ಕಡಿಮೆ ಅಂದರೆ ೨೬(ಶೇ.೪೯.೦೬) ಸಂಖ್ಯೆಯಲ್ಲಿದ್ದಾರೆಂದು ಹೇಳಬಹುದು.

ಕೋಷ್ಟಕ-2.2: ಸೂಚನದಾರರ ವಾಸಸ್ಥಳ ಮತ್ತು ಲಿಂಗವಾರು ಹಂಚಿಕೆಯ ವಿವರ

ವಾಸ ಸ್ಥಳ/ಲಿಂಗ	ಮಹಿಳೆಯರು	ಪುರುಷರು	ಒಟ್ಟು
ನಗರ	೧೧(೩೭.೯೩)	೧೬(೬೬.೬೭)	೨೭(೫೦.೯೪)
ಗ್ರಾಮೀಣ	೧೮(೬೨.೦೭)	೮(೩೩.೩೩)	೨೬(೪೯.೦೬)
ಒಟ್ಟು	೨೯(೫೪.೭೨)	೨೪(೪೫.೨೮)	೫೩(೧೦೦)



ಈ ಮೇಲಿನ ಕೋಷ್ಟಕದಲ್ಲಿ ಸೂಚನದಾರರ ವಾಸಸ್ಥಳ ಮತ್ತು ಲಿಂಗವಾರು ಹಂಚಿಕೆಯ ಬಗ್ಗೆ ಚರ್ಚಿಸಲಾಗಿದೆ. ಒಟ್ಟು ೨೭(ಶೇ.೫೦.೯೪) ನಗರ ಪ್ರದೇಶದ

ಸೂಚನದಾರರಲ್ಲಿ ೧೧ (ಶೇ.೩೭.೩೩) ಮಂದಿ ಮಹಿಳೆಯರು,ಉಳಿದ ೧೬(ಶೇ.೬೬.೬೭) ಮಂದಿ ಪುರುಷರಾಗಿದ್ದಾರೆ. ಗ್ರಾಮೀಣ ಪ್ರದೇಶದ ೨೬(ಶೇ.೪೯.೦೬) ಸೂಚನದಾರರಲ್ಲಿ ೧೮(ಶೇ.೬೨.೦೭) ಸೂಚನದಾರರು ಮಹಿಳೆಯರಾಗಿದ್ದು ಉಳಿದ ೮(ಶೇ.೩೩.೩೩) ಮಂದಿ ಸೂಚನದಾರರು ಪುರುಷರಾಗಿದ್ದರೆ. ಲಿಂಗವಾರು ಸೂಚನದಾರರನ್ನು ಗಮನಿಸಿದಾಗ, ಒಟ್ಟು ಸೂಚನದಾರರಲ್ಲಿ ೨೯(ಶೇ.೫೪.೭೨) ಮಂದಿ ಮಹಿಳಾ ಸೂಚನದಾರರಾಗಿದ್ದು ಉಳಿದ ೨೪(ಶೇ.೪೫.೨೮) ಸೂಚನದಾರರು ಪುರುಷರಾಗಿದ್ದಾರೆ.ಈಅಂಕಿ-ಅಂಶವನ್ನು ಗಮನಿಸಿದಾಗ ಪ್ರಸ್ತುತ ಸಂಸೋಧನೆಯಲ್ಲಿ ಮಹಿಳಾ ಸೂಚನದಾರರ ಸಂಖ್ಯೆ ಹೆಚ್ಚು ಇರುವುದನ್ನು ಗಮನಿಸಬಹುದಾಗಿದೆ. ಸಂಶೋಧಕನು ಕ್ಷೇತ್ರಕಾರ್ಯ ನಡೆಸುವ ಸಂದರ್ಭದಲ್ಲಿ ಹೆಚ್ಚಿನ ಪುರುಷರು ಕೆಲಸ ನಿಮಿತ್ತ ಹೊರಗಡೆ ಹೋಗಿದುದರ ಕಾರಣದಿಂದ ಮಹಿಳೆಯರನ್ನು ಹೆಚ್ಚಾಗಿ ಸಂದರ್ಶಿಸ ಬೇಕಾಯಿತು.

ಕೋಷ್ಟಕ-2.3: ಸೂಚನದಾರರ ಶಿಕ್ಷಣಮತ್ತುಲಿಂಗವಾರುಹಂಚಿಕೆಯವಿವರ

ಶಿಕ್ಷಣ / ಲಿಂಗ	ಮಹಿಳೆಯರು	ಪುರುಷರು	ಒಟ್ಟು
ಅನಕ್ಷರಸ್ಥರು	೬(೨೦.೬೯)	೪(೧೬.೬೭)	೧೦(೧೮.೮೭)
ಪ್ರಾಥಮಿಕ	೨೦(೬೮.೯೭)	೧೭(೭೦.೮೩)	೩೭(೬೯.೮೧)
ಪ್ರೌಢಶಾಲೆ	೧(೩.೪೫)	೧(೪.೧೭)	೨(೩.೭೭)
ಪದವಿ ಪೂರ್ವ	೧(೩.೪೫)	೧(೪.೧೭)	೨(೩.೭೭)
ಪದವಿ	೧(೩.೪೫)	೧(೪.೧೭)	೨(೩.೭೭)
ಸ್ನಾತಕೋತ್ತರ	೦	೦	೦
ಒಟ್ಟು	೨೯	೨೪	೫೩

ಸೂಚನದಾರರ ವಿದ್ಯಾರ್ಹತೆ ಮತ್ತು ಲಿಂಗವಾರು ಕೋಷ್ಟಕವನ್ನು ಗಮನಿಸಿದಾಗ ೫೩ ಸೂಚನದಾರರಲ್ಲಿ ಒಟ್ಟು ೧೦ (ಶೇ.೧೮.೮೭) ಜನ ಅನಕ್ಷರಸ್ಥರು ಇದ್ದು, ಅವರಲ್ಲಿ ೬

(ಶೇ.೨೦.೬೯) ಮಹಿಳೆಯರು ಮತ್ತು ೪(ಶೇ.೧೬.೬೭) ಪುರುಷ ಅನಕ್ಷರಸ್ಥರಾಗಿದ್ದಾರೆ. ಪ್ರಾಥಮಿಕ ಶಿಕ್ಷಣ ಕುರಿತಾದ ಅಂಕಿ-ಅಂಶವನ್ನು ಗಮನಿಸಿದಾಗ ಹೆಚ್ಚಿನ ಸೂಚನದಾರರು ಅಂದರೆ ೩೭(ಶೇ.೬೯.೮೧) ಪ್ರಾಥಮಿಕ ಶಿಕ್ಷಣವನ್ನು ಪಡೆದವರಾಗಿದ್ದಾರೆ, ಅವರಲ್ಲಿ ಮಹಿಳೆಯರ ಸಂಖ್ಯೆ೨೦ (ಶೇ.೬೮.೯೭) ಮತ್ತು ಪುರುಷರ ಸಂಖ್ಯೆ೧೭ (ಶೇ.೭೦.೮೩). ಪ್ರೌಢಶಾಲಾ ಶಿಕ್ಷಣವು ಒಂದು ಅತೀ ಮುಖ್ಯವಾದ ಹಂತವಾಗಿದ್ದು ಒಟ್ಟು ಸೂಚನದಾರಾರರಲ್ಲಿ ಕೇವಲ ೨(ಶೇ.೩.೭೭) ಜನರು ಮಾತ್ರ ಈ ಶಿಕ್ಷಣವನ್ನು ಪಡೆದವರಾಗಿದ್ದಾರೆ. ಅವರಲ್ಲಿ ೧(ಶೇ. ೩.೪೫) ಮಹಿಳೆ ಮತ್ತು ೧(ಶೇ. ೪.೧೭) ಪುರುಷ ಸೂಚನದಾರರಾಗಿದ್ದಾರೆ. ಪದವಿ ಪೂರ್ವ ಶಿಕ್ಷಣದ ಅಂಕಿಯನ್ನು ಗಮನಿಸಿದಾಗ ಒಟ್ಟು ೨(೩.೭೭) ರಷ್ಟು ಸೂಚನದಾರರು ಪದವಿ ಪೂರ್ವ ಶಿಕ್ಷಣವನ್ನು ಪಡೆದಿದ್ದು,ಅವರಲ್ಲಿ ೧(ಶೇ. ೩.೪೫) ಮಹಿಳೆ ಮತ್ತು ೧(ಶೇ. ೪.೧೭) ಪುರುಷ ಸೂಚನದಾರರಾಗಿದ್ದಾರೆ.ಪದವಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಒಟ್ಟು ೨(೩.೭೭) ರಷ್ಟು ಸೂಚನದಾರರು ಪದವಿ ಶಿಕ್ಷಣವನ್ನು ಅಂದರೆ ಉನ್ನತ ಶಿಕ್ಷಣವನ್ನು ಪಡೆದಿದ್ದು,ಅವರಲ್ಲಿ ೧(ಶೇ. ೩.೪೫) ಮಹಿಳೆ ಮತ್ತು ೧(ಶೇ. ೪.೧೭) ಪುರುಷ ಸೂಚನದಾರರಾಗಿದ್ದಾರೆ.ಈ ಎಲ್ಲ ಅಂಶವನ್ನು ಗಮನಿಸಿದಾಗ ಮೊಗೇರ ಸಮುದಾಯದ ಬಹುತೇಕರು ಕೇವಲ ಪ್ರಾಥಮಿಕ ಶಿಕ್ಷಣವನ್ನು ಪಡೆಯಲು ಸಕ್ತರಾಗಿದ್ದಾರೆ,ಸರಕಾರದ ವಿವಿಧ ಕಾರ್ಯಕ್ರಮಗಳ ಹೊರತಾಗಿಯು ಮೂಲಭೂತ ಶಿಕ್ಷಣವನ್ನು ಪಡೆಯಲು ಸಾಧ್ಯವಾಗಿಲ್ಲವೆನ್ನಬಹುದು. ಮಹಿಳೆಯರ ಸಂಖ್ಯೆಯನ್ನು ಕೂಡ ಗಮನಿಸಿದಾಗ ಅಷ್ಟೇನೂ ಆಶಾದಾಯಕ ಅನಿಸುವುದಿಲ್ಲ. ಮಹಿಳೆಯರಲ್ಲೂ ಪ್ರಾಥಮಿಕ ಶಿಕ್ಷಣದ ಮಟ್ಟವನ್ನು ಹೊರತು ಪಡಿಸಿ ಉಳಿದಂತೆ ಅವರ ಶಿಕ್ಷಣದ ಮಟ್ಟ ಅಟಿ ಕಡಿಮೆಯಿರುವುದು ಈ ಕೋಷ್ಠಕದಲ್ಲಿ ತಿಳಿದುಬರುತ್ತದೆ.


ಕೋಷ್ಠಕ-2.4: ಸೂಚನದಾರರ ವೈವಾಹಿಕ ಸ್ಥಾನಮಾನದ ವಿವರ

ವೈವಾಹಿಕ ಸ್ಥಿತಿ	ನಗರ		ಗ್ರಾಮೀಣ		ಒಟ್ಟು		
	ಪುರುಷ	ಮಹಿಳೆ	ಪುರುಷ	ಮಹಿಳೆ	ಪುರುಷ	ಮಹಿಳೆ	ಶೇಕಡವಾರು
ವಿವಾಹಿತ	೭	೭	೭	೧೨	೧೪ (೫೮.೩೩)	೧೯ (೬೫.೫೧)	೩೩ (೬೨.೨೬)
ಅವಿವಾಹಿತ	೮	೪	೧	೩	೯ (೩೭.೫೦)	೭ (೨೪.೧೩)	೧೬ (೩೦.೨೧)
ವಿಚ್ಛೇದಿತ	೦	೦	೦	೧	೦	೧ (೩.೪೪)	೧ (೧.೮೮)
ವಿಧವೆ	೦	೦	೦	೨	೦	೨ (೬.೮೯)	೨ (೩.೭೭)
ವಿದುರ	೧	೦	೦	೦	೧ (೪.೧೬)	೦	೧ (೧.೮೮)
ಒಟ್ಟು	೧೬	೧೧	೮	೧೮	೨೪(೪೫.೨೮)	೨೯(೫೪.೭೨)	೫೩(೧೦೦)

ಈ ಕೋಷ್ಠಕದಲ್ಲಿ ಗ್ರಾಮೀಣ ಪ್ರದೇಶದ ೦೭ ಜನ ಮತ್ತು ನಗರ ಪ್ರದೇಶದ ೦೭ ಜನ ಪುರುಷರು ವಿವಾಹಿತರಾಗಿದ್ದಾರೆ. ಒಟ್ಟು ೧೪(೫೮.೩೩) ಸೂಚನದಾರರು ಅವಿವಾಹಿತರಾಗಿದ್ದಾರೆ. ಒಟ್ಟು ೩೩(೬೨.೨೬) ವಿವಾಹಿತ ಸೂಚನದಾರರಲ್ಲಿ ೧೯(೬೫.೫೧) ಮಹಿಳೆಯರಾಗಿದ್ದು ಅವರಲ್ಲಿ ೭ ಜನ ನಗರ ಪ್ರದೇಶದವರು ಮತ್ತು ೧೨ ಜನ ಗ್ರಾಮೀಣಪ್ರ ದೇಶದವರಾಗಿದ್ದಾರೆ. ಅವಿವಾಹಿತರ ಸಂಖ್ಯೆಯನ್ನು ಗಮನಿಸಿದಾಗ ಒಟ್ಟು ೯(೩೭.೫೦) ಪುರುಷ ಮತ್ತು ೭(೨೪.೧೩) ಮಹಿಳಾ ಸೂಚನದಾರರಿದ್ದು, ಪುರುಷರ ಪೈಕಿ ೮ ಜನ ನಗರ ಪ್ರದೇಶದವರು ಮತ್ತು ೧ ಗ್ರಾಮೀಣ ಪ್ರದೇಶದವರಾಗಿದ್ದಾರೆ. ಆವಿವಾಹಿತ ಮಹಿಳೆಯರಲ್ಲಿ ೪ ಜನ ನಗರ ಪ್ರದೇಶದವರು ಮತ್ತು ೧ ಜನ ಗ್ರಾಮೀಣ ಪ್ರದೇಶದವರಾಗಿದ್ದಾರೆ. ಒಟ್ಟು ಅವಿವಾಹಿತರ ಸಂಖ್ಯೆ೧೬(೩೦.೨೧) ಆಗಿರುತ್ತದೆ.

ಕೋಷ್ಟಕ-2.5: ಸೂಚನದಾರರ ಕುಟುಂಬದ ಗಾತ್ರ

ಕುಟುಂಬದಗಾತ್ರ	ಕುಟುಂಬದಸಂಖ್ಯೆ		ಒಟ್ಟು
	ನಗರ	ಗ್ರಾಮೀಣ	
೧-೪	೧೨(೪೪.೪೪)	೧೦(೩೮.೪೬)	೨೨(೪೧.೫೦)
೫-೮	೧೩(೪೮.೧೪)	೧೨(೪೬.೧೫)	೨೫(೪೭.೧೬)
೯-೧೨	೨(೭.೪೦)	೪(೧೫.೩೮)	೬(೧೧.೩೨)
೧೩-೧೬	೦	೦	೦
೧೭+	೦	೦	೦
ಒಟ್ಟು	೨೭(೫೦.೯೪)	೨೬(೪೯.೦೬)	೫೩(೧೦೦)



ಮೇಲಿನ ಕೋಷ್ಟಕದಲ್ಲಿ ಒಟ್ಟು ೨೨(ಶೇ ೪೧.೫೦) ಸೂಚನದಾರರ ಕುಟುಂಬಗಳು ೧-೪ ಸಂಖ್ಯೆಯ ಸದಸ್ಯರನ್ನು ಹೊಂದಿದ್ದು,ಅವರಲ್ಲಿ ೧೨(೪೪.೪೪) ನಗರ ಮತ್ತು ೧೦(೩೮.೪೬) ಸೂಚನದಾರರು ಗ್ರಾಮೀಣ ಪ್ರದೇಶದವರಾಗಿದ್ದಾರೆ. ನಗರ ಮತ್ತು ಗ್ರಾಮೀಣದಲ್ಲಿ ಹೆಚ್ಚು ಕುಟುಂಬಗಳು ಅಂದರೆ ೨೫(೪೭.೧೬), ಕ್ರಮವಾಗಿ ೧೩(೪೮.೧೪) ಮತ್ತು ೧೨(೪೬.೧೫)

ಸೂಚನದಾರರ ಕುಟುಂಬದ ಸದಸ್ಯರ ಸಂಖ್ಯೆಯು ೫-೮ ನ್ನುಹೊಂದಿದೆ. ೯-೧೨ ಸಂಖ್ಯೆಯ ಕುಟುಂಬ ಗಾತ್ರವು ಅತೀ ಕಡಿಮೆ ಅಂದರೆ ೬(೧೧.೩೨) ಆಗಿರುತ್ತದೆ. ಅದರಲ್ಲಿ೨(೭.೪೦) ನಗರ ಪ್ರದೇಶದಾಗಿದ್ದು,ಉಳಿದ ೪(೧೫.೩೮) ನಗರ ಪ್ರದೇಶದವರಾಗಿದ್ದಾರೆ.ಈ ಅಂಕಿಯ ಪ್ರಕಾರ ನಗರ ಪ್ರದೇಶದಲ್ಲಿ ಹೆಚ್ಚು ಸಂಖ್ಯೆಯುಳ್ಳ ಕುಟುಂಬವು ಯಥೇಚ್ಚವಾಗಿ ಇರುವುದನ್ನು ಕಾಣಬಹುದು.

ಕೋಷ್ಟಕ-2.6: ಸೂಚನದಾರರ ಮನೆಮಾಲಿಕತ್ವ ಮತ್ತು ಮನೆ ಸ್ವರೂಪದ ವಿವರ

ಮನೆಯಸ್ವರೂಪ	ನಗರ		ಗ್ರಾಮೀಣ		ಒಟ್ಟು
	ಸ್ವಂತ	ಬಾಡಿಗೆ	ಸ್ವಂತ	ಬಾಡಿಗೆ	
ಆರ್.ಸಿ.ಸಿ	೧	೩	೦	೦	೪(೭.೬೯)
ಹಂಚು	೧೫	೦	೧೬	೧	೩೨(೬೦.೩೭)
ಆಶ್ರಯ	೧	೦	೦	೦	೧(೧.೮೮)
ಗುಡಿಸಲು	೦	೦	೫	೦	೫(೯.೪೩)
ಅರ್ಧಮಾಳಿಗೆ	೧	೦	೦	೦	೧(೧.೮೮)
ಅರ್ಧಹಂಚು	೨	೦	೩	೦	೫(೯.೪೩)
ಅರ್ಧಆರ್.ಸಿ.ಸಿ	೪	೦	೧	೦	೫(೯.೪೩)
ಒಟ್ಟು	೨೪	೩	೨೫	೧	೫೩(೧೦೦)

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಸ್ವಂತಮನೆಗಳಲ್ಲಿ ವಾಸ ಮಾಡುವ ಸೂಚನದಾರರ ಪ್ರಮಾಣ ಶೇಕಡಾ ೯೨ ರಷ್ಟು ಇದೆ ಮತ್ತು ಬಾಡಿಗೆ ಮನೆಗಳಲ್ಲಿ ವಾಸ

ಮಾಡುವವರ ಸಂಖ್ಯೆ ಕೇವಲ ೮ ರಷ್ಟುಇದೆ. ಆರ್.ಸಿ.ಸಿ ಮನೆಗಳಲ್ಲಿ ವಾಸಮಾಡುವವರ ಪ್ರಮಾಣ ೭.೬೯ ರಷ್ಟು ಇದ್ದು,ಹಂಚಿನ ಮನೆಗಳಲ್ಲಿ ಗಣನೀಯ ಪ್ರಮಾಣದ ಸೂಚನದಾರರು ಅಂದರೆ ೬೦.೩೭ ರಷ್ಟು ವಾಸವಾಗಿದ್ದಾರೆ. ಈ ಕೋಷ್ಠಕದಲ್ಲಿ ಬಹಳ ಮುಖ್ಯವಾಗಿ ಕಂಡು ಬರುವ ಅಂಶವೆಂದರೆ ಸರ್ಕಾರ ಅಥವಾ ಸಂಘ ಸಂಸ್ಥೆಗಳಿಂದ ವಸತಿ ಸೌಲಭ್ಯ ಪಡೆಯುವವರ ಅಥವಾ ದೊರಕಿಸಿ ಕೊಂಡವರ ಸಂಖ್ಯೆ ವಿರಳ. ನಗರ ಪ್ರದೇಶದ ೩ ಮತ್ತು ಗ್ರಾಮೀಣ ಪ್ರದೇಶದ ೧ ಸೂಚನದಾರ ಮಾತ್ರ ಬಾಡಿಗೆ ಮನೆಯಲ್ಲಿ ವಾಸಮಾಡುತಿದ್ದು ಉಳಿದವರೆಲ್ಲ ಸ್ವಂತ ಮನೆಗಳಲ್ಲಿವಾಸ ಮಾಡುತಿದ್ದಾರೆ. ಗ್ರಾಮೀಣ ಪ್ರದೇಶದ ೫(೯.೪೩) ಸೂಚನದಾರರು ಪ್ರಸ್ತುತ ಗುಡಿಸಲಿನಲ್ಲಿ ವಾಸ ಮಾಡುತಿದ್ದಾರೆಯೆಂಬುದು ಖೇದಕರ ವಿಷಯ.


ಕೋಷ್ಠಕ-2.7:ಸೂಚನದಾರರ ಮಹತ್ವದ ತೀರ್ಮಾನ ತೆಗೆದುಕೊಳ್ಳ ಬೇಕಾದಾಗ ಮನೆಯವರ ಸಲಹೆಕೇಳುವುದರ ವಿವರ

ಅಭಿಪ್ರಾಯ	ಗ್ರಾಮೀಣ	ನಗರ	ಒಟ್ಟುಮತ್ತು ಶೇಕಡವಾರು
ಕೇಳುತ್ತೇವೆ	೨೨	೨೫	೪೭(೮೮.೬೭)
ಕೇಳುವುದಿಲ್ಲ	೪	೨	೬(೧೧.೩೩)
ಒಟ್ಟು	೨೬	೨೭	೫೩(೧೦೦)
ಕೇಳುವುದಾದರೆಯಾವಸಂದರ್ಭಗಳಲ್ಲಿ			
ಎಲ್ಲಾಸಂದರ್ಭಗಳಲ್ಲಿ	೪	೧೩	೧೭(೩೬.೧೭)
ಕೆಲವುಸಂದರ್ಭಗಳಲ್ಲಿ	೫	೬	೧೧(೨೩.೪೦)
ವಿಶೇಷಸಂದರ್ಭಗಳಲ್ಲಿ	೧೩	೬	೧೯(೪೦.೪೨)
ಒಟ್ಟು	೨೨	೨೫	೪೭(೧೦೦)

ಮುಗೇರರ ಕುಟುಂಬಗಳಲ್ಲಿ ಮಹಿಳೆಯು ಕೂಡ ಪುರುಷನಷ್ಟೆ ಸಮನಾಂತರವಾಗಿ ಸಾಮಾಜಿಕ ಸ್ಥಾನಮಾನವನ್ನು ಪಡೆದಿದ್ದಾಳೆಯೆಂಬುದು ಸರ್ವವೇದ್ಯವಾದುದು. ಪ್ರಮುಖ ಕೌಟುಂಬಿಕ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಮಹಿಳೆಯ ಒಳಗೊಳ್ಳುವಿಕೆಯ ಬಗ್ಗೆ ಮಾಹಿತಿ ಕ್ರೋಢಿಕರಿಸಿದಾಗ ೪೭(೮೮.೬೭) ರಷ್ಟು ಸೂಚನದಾರರು ಮಹಿಳೆಯ ಅಭಿಪ್ರಾಯವನ್ನು ಕೇಳುತ್ತೇವೆಂದು ಅಭಿಪ್ರಾಯಪಟ್ಟರು. ಆದರೆ ಕೇವಲ ೬(೧೧.೩೩) ರಷ್ಟು ಸೂಚನದಾರರು ಮಹಿಳೆಯರ ಅಭಿಪ್ರಾಯವನ್ನು ಕೇಳುವುದಿಲ್ಲವೆಂದರು. ೪೭ ಸೂಚನದಾರರ ಪೈಕಿ೧೭(೩೬.೧೭) ಜನ ಎಲ್ಲಾ ಸಂದರ್ಭಗಳಲ್ಲಿ,೧೧(೨೩.೪೦) ಜನ ಕೆಲವು ಸಂದರ್ಭಗಳಲ್ಲಿ,೧೯(೪೨.೪೦) ರಷ್ಟು ಜನ ವಿಶೇಷ ಸಂದರ್ಭಗಳಲ್ಲಿ ಮಹಿಳೆಯರ ಅಭಿಪ್ರಾಯಗಳನ್ನು ಕೇಳುತ್ತಾರೆ. ಇವುಗಳನ್ನು ಗಮನಿಸಿದಾಗ ನಿಮ್ನವರ್ಗವಾದ ಮುಗೇರ ಸಮುದಾಯದಲ್ಲಿ ಮಹಿಳೆಯು ಆಂತರಿಕ ಸ್ವಾತಂತ್ರ್ಯಮತ್ತು ಅಭಿವ್ಯಕ್ತಿ ಅಧಿಕಾರವನ್ನು ಹೊಂದಿದ್ದಾಳೆಯೆಂಬುದು ಕಂಡುಬರುತ್ತದೆ. ಇದು ಮಾತ್ರವಲ್ಲದೆ ಮುಗೇರರ ಸಾಂಸ್ಕೃತಿಕ ಆಚರಣೆ ಮತ್ತು ಕಲಾ ಪ್ರಕಾರಗಳ ಅಭಿವ್ಯಕ್ತಿಗೊಳಿಸುವಲ್ಲೂ ಅಕೆಗೆ ತನ್ನದೇ ಆದ ಪ್ರಾಮುಖ್ಯತೆಯಿದೆಯೆಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದು ಬಂದಿದೆ.

ಕೋಷ್ಟಕ-2.8: ಸೂಚನದಾರರ ಹಿರಿಯರು ವಿವಾಹಗೊತ್ತುಪಡಿಸುವುದರ ವಿವರ:


ಅಭಿಪ್ರಾಯ	ನಗರ	ಗ್ರಾಮೀಣ	ಒಟ್ಟು
ಹೌದು	೨೩	24	೪೭ (೮೮.೬೭)
ಇಲ್ಲ	೪	೨	೬(೧೧.೩೨)
ಒಟ್ಟು	೨೭	೨೬	೫೩
ಹೌದಾದರೆ ಕಾರಣ:			
ಹೆತ್ತವರ ಜವಾಬ್ದಾರಿ	8	೭	೧೫
ಜಾತಿಯ ಕಟ್ಟು ಪಾಡು	೭	೧೨	೧೯
ಸಾಮಾಜಿಕ ಮಾನ್ಯತೆ	೩	೨	೫
ಭವಿಷ್ಯದ ಪ್ರಶ್ನೆ	೫	೩	೮
ಒಟ್ಟು	೨೩	೨೪	೪೭



ಆಧುನೀಕರಣದ ಪ್ರಕ್ರಿಯೆಯಲ್ಲೂ ಮುಗೇರ ಸಮುದಾಯ ತನ್ನ ಸಾಮೂದಾಯಿಕ ಮೌಲ್ಯಗಳನ್ನು ಯಥವತ್ತಾಗಿ ಕಾಪಾಡಿ ಕೊಂಡು ಬಂದಿದೆಯೆಂಬುದು ಈ ಮೇಲಿನ ಮಾಹಿತಿಯಿಂದ ತಿಳಿದುಬಂದಿದೆ. ತಮ್ಮ ಮಕ್ಕಳ ವಿವಾಹವನ್ನು ಹಿರಿಯರು ಗೊತ್ತು ಪಡಿಸುವ ಬಗ್ಗೆ ಮಾಹಿತಿ ಕ್ರೋಢಿಕರಿಸಿದಾಗ ಒಟ್ಟು೪೭(೮೮.೬೭) ಸೂಚನದಾರರು ವಿವಾಹವನ್ನು ಹಿರಿಯರೆ ಗೊತ್ತುಪಡಿಸಬೇಕೆಂದು ಅಭಿಪ್ರಾಯಪಟ್ಟರು. ಕೇವಲ ೬(೧೧.೩೨) ಸೂಚನದಾರರು ಹಿರಿಯರು ಗೊತ್ತುಪಡಿಸ ಬೇಕಿಲ್ಲವೆಂದು ಅಭಿಪ್ರಾಯಪಟ್ಟರು. ಬಹುತೇಕರು ಹಿರಿಯರು ಗೊತ್ತು ಪಡಿಸುವಿಕೆಯನ್ನು ಹೆತ್ತವರ ಜವಾಬ್ದಾರಿ (೧೫) ಮತ್ತು ಜಾತಿಯ ಕಟ್ಟು ಪಾಡು (೧೯) ಎಂದು ಅಭಿಪ್ರಾಯಪಟ್ಟರು. ಕ್ರಮವಾಗಿ ೫ ಮತ್ತು ೮ ಸೂಚನದಾರರು ಹಿರಿಯರು ವಿವಾಹವನ್ನು ಗೊತ್ತು ಪಡಿಸುವುದನ್ನು ಸಾಮಾಜಿಕ ಮಾನ್ಯತೆ ಮತ್ತು ಮಕ್ಕಳ ಭವಿಷ್ಯದ ದೃಷ್ಟಿಯ ನೆಲೆಯಲ್ಲಿ ಅಭಿಪ್ರಾಯಪಟ್ಟರು. ಒಟ್ಟಾರೆಯಾಗಿ ಇಂದಿಗೂ ವಿವಾಹದಂತಹ ಸಾಮಾಜಿಕ ಸಂಸ್ಥೆಯು ಮುಗೇರ ಸಮುದಾಯದಲ್ಲಿ ಅತೀ ಪ್ರಮುಖ ಅಂಶವಾಗಿದೆಯೆನ್ನಬಹುದು.

ಕೋಷ್ಟಕ-2.9: ಸೂಚನದಾರರ ಮಕ್ಕಳ ವಿವಾಹ ಮಾಡುವ ವಯಸ್ಸಿನ ವಿವರ

ವಯಸ್ಸು	ಅಭಿಪ್ರಾಯ		ಒಟ್ಟು
	ನಗರ	ಗ್ರಾಮೀಣ	
೧೫-೧೭	೦	೨(೦.೩೭)	೨(೦.೩೭)
೧೮-೨೦	೮(೧೫.೦೯)	೧೬(೬೧.೫೩)	೨೪(೫೩.೦೦)
೨೧-೨೩	೧೯(೩೫.೮೪)	೮(೧೫.೦೯)	೨೭(೫೦.೯೪)
೨೪+	೦	೦	೦
ಒಟ್ಟು	೨೭(೫೦.೯೪)	೨೬(೪೯.೦೬)	೫೩(೧೦೦)



ಈ ಮೇಲಿನ ಕೋಷ್ಟಕದಲ್ಲಿ ಮಕ್ಕಳ ವಿವಾಹದ ವಯಸ್ಸಿನ ಮಾಹಿತಿಯನ್ನು ಕ್ರೋಢಿಕರಿಸಲಾಗಿದೆ. ಒಟ್ಟು ೫೩ ಸೂಚನದಾರರಲ್ಲಿ ೨೪(೫೩.೦೦) ಜನ ತಮ್ಮ ಮಕ್ಕಳಿಗೆ ೧೮-೨೦ ನೇ ವಯಸಿನಲ್ಲಿ ಮದುವೆ ಮಾಡುವ ಬಗ್ಗೆ ಅಭಿಪ್ರಾಯ ನೀಡಿದ್ದಾರೆ. ಅವರಲ್ಲಿ ೮(೧೫.೦೯) ಜನ ನಗರ ಪ್ರದೇಶದವರು,೧೬(೬೧.೫೩) ಜನ ಗ್ರಾಮೀಣ ಪ್ರದೇಶದವರಾಗಿದ್ದಾರೆ. ೨೭(೫೦.೯೪) ಸೂಚನದಾರರು ಮಕ್ಕಳಿಗೆ ೨೧-೨೩ ವಯಸ್ಸಿಗೆ

ಮದುವೆ ಮಾಡುವುದು ಸೂಕ್ತವೆಂದು ಭಾವಿಸಿರುವುದು ಈ ಕೋಷ್ಠಕದಿಂದ ತಿಳಿದು ಬಂತು, ಅವರಲ್ಲಿ ೧೯(೩೫.೮೪) ಜನ ನಗರ ಪ್ರದೇಶದವರು ಮತ್ತು ೮(೧೫.೦೯) ಜನ ಗ್ರಾಮೀಣ ಪ್ರದೇಶದವರು. ಈ ಎಲ್ಲಾ ಮಾಹಿತಿಯನ್ನು ಕೂಲಂಕುಷವಾಗಿ ಗಮನಿಸಿದಾಗ ಮುಗೇರರಲ್ಲಿ ಬಹುತೇಕರು ತಮ್ಮಮಕ್ಕಳಿಗೆ ವಯಸ್ಸು ಪಕ್ವವಾದ ನಂತರ ಮದುವೆ ಮಾಡುವ ಒಲವುಳ್ಳವರಾಗಿದ್ದಾರೆ.

ಕೋಷ್ಠಕ-2.10: ಸೂಚನದಾರರ ಹೆಣ್ಣು ಮಕ್ಕಳಿಗೆ ಸಮಾನ ಶಿಕ್ಷಣ ಅವಕಾಶ ನೀಡುವಿಕೆ ಮತ್ತು ನೀಡದಿರಲು ಕಾರಣಗಳು


ಅಭಿಪ್ರಾಯ	ನಗರ	ಗ್ರಾಮೀಣ	ಒಟ್ಟು
ಒಪ್ಪುತ್ತೇನೆ	೨೭	೨೧	೪೮(೯೦.೫೬)
ಒಪ್ಪುವುದಿಲ್ಲ	೦	೫	೫(೯.೪೩)
ಒಟ್ಟು	೨೭	೨೬	೫೩
ಒಪ್ಪುವುದಿಲ್ಲವಾದರೆ ಕಾರಣ			
ಶಿಕ್ಷಣ ಅಗತ್ಯವಿಲ್ಲ	೦	2	೨
ಶಾಲೆಬಹಳದೂರ	೦	೩	೩
ಒಟ್ಟು	೦	5	೫

ಈ ಮೇಲಿನ ಕೋಷ್ಠಕದಲ್ಲಿ ಮುಗೇರ ಸಮುದಾಯದಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಮಾಹಿತಿಯನ್ನು ಕ್ರೋಢಿಕರಿಸಲಾಗಿದೆ. ಶಿಕ್ಷಣ ಸಾಮಾಜಿಕ ಅಭಿವೃದ್ಧಿ ಮತ್ತು ಚಲನಶೀಲತೆಯ ದ್ಯೋತಕವಾಗಿದೆ. ವಿಶೇಷವಾಗಿ ನಿಮ್ನ-ವರ್ಗಗಳ ಸರ್ವಾಂಗೀಣ ಅಭಿವೃದ್ಧಿಯು ಮೂಲಭೂತ ಶಿಕ್ಷಣದಲ್ಲಿ ಇದೆ.ಈ ಕಾರಣಕ್ಕೆ ಸರಕಾರಗಳು ಮತ್ತು ಸಂಸ್ಥೆಗಳು ಅನೇಕ ಕಾರ್ಯಕ್ರಮಗಳನ್ನು ಬಮ್ಮಿ ಕೊಂಡಿದೆ. ಹೆಣ್ಣು ಮಕ್ಕಳಿಗೆ ಮಗನಷ್ಟೇ ಶಿಕ್ಷಣ ಕೊಡಿಸುವ ಬಗ್ಗೆ ಸೂಚನದಾರರಲ್ಲಿ ಕೇಳಿದಾಗ ೪೮ (೯೦.೫೬) ಜನ ಸಮಾನ

ಪ್ರಾಧಾನ್ಯತೆ ಕೊಡುವುದಾಗಿ ಅಭಿಪ್ರಾಯಪಟ್ಟರು. ಅದರಲ್ಲೂ ನಗರ ಪ್ರದೇಶದ ಎಲ್ಲಾ ಸೂಚನದಾರರು ಸಮಾನವಾಗಿ ಪರಿಗಣಿಸುವುದಾಗಿ ತಿಳಿಸಿದರು. ಆದರೆ ಗ್ರಾಮೀಣ ಪ್ರದೇಶದ ಸೂಚನದಾರರಲ್ಲಿ ೨೧ ಒಪ್ಪಿದರೆ ೫ ಜನ ಒಪ್ಪುವುದಿಲ್ಲವೆಂದು ಅಭಿಪ್ರಾಯಪಟ್ಟರು. ಇದ್ದಕ್ಕೆ ಅವರು ನೀಡಿದ ಕಾರಣಗಳು ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಅಗತ್ಯವಿಲ್ಲ ಮತ್ತು ಶಾಲೆಗಳು ಮನೆಯಿಂದ ಅತೀ ದೂರದಲ್ಲಿರುವುದರಿಂದ ಸುರಕ್ಷತೆಯ ದೃಷ್ಟಿಯಿಂದ ಕಳುಹಿಸುವುದು ಸೂಕ್ತವಲ್ಲವೆಂದು ಅಭಿಪ್ರಾಯಪಟ್ಟರು. ಒಟ್ಟಿನಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮುಗೇರ ಸಮುದಾಯದಲ್ಲಿ ಸಕರಾತ್ಮಕ ಒಲವಿದ್ದು ಅಂತಹ ವ್ಯತಿರಿಕ್ತ ಅಭಿಪ್ರಾಯವಿಲ್ಲವೆನ್ನಬಹುದು.

ಕೋಷ್ಟಕ-2.11: ಸೂಚನದಾರರ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವ ವಿವರ

ಶಿಕ್ಷಣ ಮಟ್ಟ	ಪ್ರಾಥಮಿಕ	ಹೈಸ್ಕೂಲ್	ಪಿ.ಯು.ಸಿ	ಕಾಲೇಜು	ಸ್ನಾತಕೋತ್ತರ	ಒಟ್ಟು
ನಗರ	೦	೮	೧೦	೬	೩	೨೭
ಗ್ರಾಮೀಣ	೩	೧೪	೩	೨	೪	೨೬
ಒಟ್ಟು	೩(೫.೬೬)	೨೨(೪೧.೫೦)	೧೩(೨೪.೫೨)	೮(೧೫.೦೯)	೭(೧೩.೨೦)	೫೩(೧೦೦)



ಈ ಮೇಲಿನ ಕೋಷ್ಠಕದಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವ ಬಗ್ಗೆ ಮಾಹಿತಿಯನ್ನು ಚರ್ಚಿಸಲಾಗಿದೆ. ಒಟ್ಟು ೫೩ ಸೂಚನದಾರರಲ್ಲಿ ೧೪ (೨೬.೪೧) ಸೂಚನದಾರರು ತಮ್ಮ ಮಕ್ಕಳಿಗೆ ಹೈಸ್ಕೂಲುವರೆಗಿನ ಶಿಕ್ಷಣವನ್ನು ನೀಡುವುದಾಗಿ ಅಭಿಪ್ರಾಯ ಪಟ್ಟರು,ಅವರಲ್ಲಿ ನಗರ ಪ್ರದೇಶದವರು ೮ ಜನ ಮತ್ತು ೧೪ ಜನ ಗ್ರಾಮೀಣ ಪ್ರದೇಶದವರಾಗಿದ್ದಾರೆ. ಪಿ.ಯು.ಸಿ ವಿದ್ಯಾಭ್ಯಾಸಕ್ಕೆ ಸಂಬಂಧ ಪಟ್ಟಂತೆ ನಗರ ಪ್ರದೇಶದ ೧೦ ಜನ ಮತ್ತು ಗ್ರಾಮೀಣ ಪ್ರದೇಶದ ೩ ಜನ, ಒಟ್ಟಾರೆ ಯಾಗಿ ೧೩(೨೪.೫೨) ಸೂಚನದಾರರು ತಮ್ಮ ಮಕ್ಕಳನ್ನು ಈ ಮಟ್ಟದವರೆಗೆ ಕಳಿಹಿಸುವ ಅಭಿಪ್ರಾಯ ತಿಳಿಸಿದರು. ಕಾಲೇಜು ಮತ್ತು ಸ್ನಾತಕೋತ್ತರ ಶಿಕ್ಷಣಕ್ಕೆ ಸಂಬಂಧ ಪಟ್ಟಂತೆ ಕ್ರಮವಾಗಿ ೮(೧೫.೦೯) ಮತ್ತು೭(೧೩.೨೦) ಸೂಚನದಾರರು ಕೊಡಿಸುವುದಾಗಿ ಅಭಿಪ್ರಾಯಪಟ್ಟರು. ಒಟ್ಟಾರೆಯಾಗಿ ಮುಗೇರ ಸಮುದಾಯವು ಉನ್ನತ ಶಿಕ್ಷಣವನ್ನು ನೀಡುವಲ್ಲಿ ಅಷ್ಟೇನೂ ಆಸಕ್ತಿ ಹೊಂದಿಲ್ಲವೆಂದು ತಿಳಿದುಬರುತ್ತದೆ.

ಕೋಷ್ಟಕ-2.12: ಸೂಚನದಾರರ ಮಕ್ಕಳಿಗೆ ದೊರೆತಿರುವ ಸೌಲಭ್ಯಗಳ ವಿವರ


ಸೌಲಭ್ಯಗಳು	ಮೀಸಲಾತಿ	ವಿಧ್ಯಾರ್ಥಿ ವೇತನ	ವಿಧ್ಯಾರ್ಥಿ ನಿಲಯ	ಕಲಿಕಾ ಸಾಮಾಗ್ರಿ	ಒಟ್ಟು
ನಗರ	೯	೧೩	೨	೩	೨೭
ಗ್ರಾಮೀಣ	೯	೭	೫	೫	೨೬
ಒಟ್ಟು	೧೮(೩೩.೯೬)	೨೦(೩೭.೭೩)	೭(೧೩..೨೦)	೮(೧೫.೦೯)	೫೩(೧೦೦)

ದಲಿತ ಮತ್ತು ನಿಮ್ನವರ್ಗಗಳು ಶೈಕ್ಷಣಿಕವಾಗಿ ಹಿಂದುಳಿಯಲು ಸಾಮಾಜಿಕ ವ್ಯಸ್ಥೆಯ ಜೊತೆಗೆ ಸೌಲಭ್ಯಗಳ ಕೊರತೆಯು ಒಂದು ಮೂಲ ಕಾರಣ(ರಾಜಗೋಪಾಲ,೧೯೯೮). ಈ ನಿಟ್ಟಿನಲ್ಲಿ ಸ್ವಾತಂತ್ರೋತ್ತರ ಸರಕಾರಗಳು ಬಹಳಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಈ ಕೋಷ್ಟಕದಲ್ಲಿ ಸದ್ರಿ ಸೂಚನದಾರರ ಮಕ್ಕಳು ಪಡೆದಿರುವೆ ವಿವಿಧ ಸೌಲಭಯಗಳ ಬಗ್ಗೆ ಮಹಿತಿಯನ್ನು ಕ್ರೋಡಿಕರಿಸಲಾಗಿದೆ. ಒಟ್ಟು ೫೩ ಸೂಚನದಾರರಲ್ಲಿ ೨೦(೩೭.೭೩) ಜನ ತಮ್ಮ ವಿಧ್ಯಾರ್ಥಿ ಜೀವನದಲ್ಲಿ ವಿಧ್ಯಾರ್ಥಿವೇತನವನ್ನು ಪಡೆದಿರುವುದಾಗಿ ತಿಳಿಸಿದರು.ಅವರಲ್ಲಿ ನಗರ ಪ್ರದೇಶದವರು ೧೩ ಮತ್ತು ಗ್ರಾಮಿಣ ಪ್ರದೇಶದವರು ೭ ಸೂಚನದಾರರಾಗಿದ್ದಾರೆ. ಮೀಸಲಾತಿ ಸೌಲಭ್ಯಕ್ಕೆ ಸಂಬಂಧಪಟ್ಟಂತೆ ಒಟ್ಟು ೧೮(೩೩.೯೬) ಸೂಚನದಾರರು ಪಡೆದಿರುವ ಬಗ್ಗೆ ಅಭಿಪ್ರಾಯಪಟ್ಟರು,ಅವರಲ್ಲಿ ೯ ಜನ ನಗರ ಪ್ರದೇಶದವರು ಮತ್ತು ಉಳಿದ ೯ ಜನ ಗ್ರಾಮೀಣ ಪ್ರದೇಶದವರಾಗಿದ್ದಾರೆ. ವಿಧ್ಯಾರ್ಥಿನಿಲಯದ ಸೌಲಭ್ಯಕ್ಕೆ ಸಂಬಂಧಿಸಿದಂತೆ ಒಟ್ಟು೭(೧೩.೨೦) ಜನ ಸೌಲಭ್ಯ ಪಡೆದಿದ್ದು ಅವರಲ್ಲಿ ೨ ಜನ ನಗರ ಪ್ರದೇಶದವ್ರು ಮತ್ತು ಉಳಿದ ೫ ಜನ ಗ್ರಾಮೀಣ ಪ್ರದೇಶದವರಾಗಿದ್ದಾರೆ.ಕಲಿಕಾ ಸಾಮಗ್ರಿಯ ಪೂರೈಕೆಯು ಒಂದು ಶೈಕ್ಷಣಿಕ ಕಾರ್ಯಕ್ರಮವಾಗಿದ್ದು ಒಟ್ಟುಲ(೧೫.೦೯) ಸೂಚನದಾರರು ಈ

ಸೌಲಭ್ಯವನ್ನು ಪಡೆದಿರುವ ಬಗ್ಗೆ ಅಭಿಪ್ರಾಯಪಟ್ಟರು. ಅವರಲ್ಲಿ 3 ಜನ ನಗರ ಪ್ರದೇಶದವರು ಉಳಿದ ೫ ಜನ ಗ್ರಾಮೀಣ ಪ್ರದೇಶದವರಾಗಿದ್ದಾರೆ.

ಕೋಷ್ಠಕ-2.13: ಸೂಚನದಾರರ ಮಹಿಳೆಯರಿಗೆ ದೂರದ ಪ್ರದೇಶದಲ್ಲಿ ಶಿಕ್ಷಣ ಕೊಡಿಸುವ ವಿವರ

ಪ್ರಾಧಾನ್ಯತೆ	ಅಭಿಪ್ರಾಯ	ಶೇಕಡವಾರು
ಒಪ್ಪುತ್ತೇವೆ	೨೨	೪೧.೫೦
ಒಪ್ಪುವುದಿಲ್ಲ	೩೧	೫೮.೫೦
ಒಟ್ಟು	೫೩	೧೦೦
ಒಪ್ಪುವುದಿಲ್ಲವಾದರೆ ಕಾರಣ		
ಸುರಕ್ಷತೆಯ ಕಾರಣ	೧೨	೩೮.೭೦
ಆರ್ಥಿಕ ತೊಂದರೆ	೮	೨೫.೮೦
ಹೊಸ ಪ್ರದೇಶ/ಸ್ಥಳ	೭	೨೨.೫೮
ಸಂಗಡಿಗರ ಕೊರತೆ	೪	೧೨.೯೦
ಒಟ್ಟು	೩೧	೧೦೦




ಪ್ರಸ್ತುತ ಕಾಲಮಾನದಲ್ಲಿ ಸ್ತ್ರಿ-ಪುರುಷರೆಂಬ ಭೇಧವಿಲ್ಲದೆ ಉತ್ತಮ ಶಿಕ್ಷಣಕ್ಕಾಗಿ ದೂರದ ನಗರ ಪ್ರದೇಶಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುವುದು ಸರ್ವೇಸಾಮಾನ್ಯವಾದ ವಿಚಾರ.ಆದರೂ ಮಹಿಳೆಯರ ಕುರಿತಾದ ತಾರತಮ್ಯ ಮನೋಭಾವನೆ ಇನ್ನು

ಸಮಾಜದಲ್ಲಿ ಕಡಿಮೆಯಾಗಿಲ್ಲ ಹಾಗೂ ಮಹಿಳೇಯರ ಶಿಕ್ಷಣಾಕ್ಕೆ ಪೂರಕವಾದ ವಾತವರಣಾ ಇನ್ನು ನಿರ್ಮಾಣವಾಗಿಲ್ಲವೆಂಬುದು ಈ ಮೇಲಿನ ಕೋಷ್ಟಕದಿಂದ ತಿಳಿದು ಬರುತ್ತದೆ.ಒಟ್ಟು ೫೩ ಸೂಚನದಾರರಲ್ಲಿ ೨೨(೪೧.೫೦)ಸೂಚನದಾರರು ತಮ್ಮ ಮನೆಯ ಹೆಣ್ಣು ಮಕ್ಕಳಿಗೆ ದೂರದ ಊರಲ್ಲಿ ಶಿಕ್ಷಣ ದೊರೆಯುವ ಅವಕಾಶ ಸಿಕ್ಕರೆ ಕಳುಹಿಸಲು ಒಪ್ಪಿಗೆಯನ್ನು ಸೂಚಿಸಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ೩೧(೫೮.೫೦) ಸೂಚನದಾರರು ತಮ್ಮ ಹೆಣ್ಣು ಮಕ್ಕಳಿಗೆ ದೂರದ ನಗರಗಳಲ್ಲಿ ಶಿಕ್ಷಣ ನೀಡಲ್ಲು ಒಪ್ಪಿರುವುದಿಲ್ಲ. ಇದಕ್ಕೆ ಅವರು ಸೂಚಿದಿದ ಕಾರಣ ಹಲವಾರು.೧೨(೩೮.೭೦) ಸೂಚನದಾರರು ಸುರಕ್ಷತೆಯ ಕಾರಣ ನೀಡಿದರೆ,ಆರ್ಥಿಕ ತೊಂದರೆ (೨೫.೮೦),ಹೊಸ ಪ್ರದೇಶ/ಸ್ಥಳದ ಕಾರಣ ನೀಡಿದವರು ೭(೨೨.೫೮) ಸೂಚನದಾರರು ಮತ್ತು೪(೧೨.೯೦) ಜನ ಸಂಗಡಿಗರ ಕೊರತೆಯು ಕೂಡ ತಮ್ಮ ಮಕ್ಕಳನ್ನು ದೂರದ ಊರಿಗೆ ಶಿಕ್ಷಣ ಸಲುವಾಗಿ ಕಳುಹಿಸದಿರಲು ಕಾರಣವೆಂಬತೆ ಅಭಿಪ್ರಾಯಪಟ್ಟರು.

ಕೋಷ್ಟಕ-2.14: ಸೂಚನದಾರರ ಅನರೋಗ್ಯದ ಸಂದರ್ಭ ಚಿಕಿತ್ಸೆ ಪಡೆಯುವ ಸ್ಥಳ

ಚಿಕಿತ್ಸೆಯ ಸ್ಥಳ	ನಗರ	ಗ್ರಾಮ	ಒಟ್ಟು ಮತ್ತು ಶೇಕಡವಾರು
ಸರ್ಕಾರಿ ಆಸ್ಪತ್ರೆ	೪	೧೪	೧೮ (೩೩.೯೬)
ಸ್ಥಳಿಯ ಖಾಸಗಿ ಆಸ್ಪತ್ರೆ	೨೨	೩	೨೫(೪೭.೧೬)
ಗ್ರಾಮ ವೈದ್ಯರು	೦	೫	೫(೯.೪೩)
ಮಾಂತ್ರಿಕರ ಭೇಟಿ	೦	೨	೨(೩.೭೭)
ಸ್ವಂತ ಮನೆ ಔಷಧ	೧	೨	೩(೫.೬೬)
ಒಟ್ಟು	೨೭	೨೬	೫೩(೧೦೦)




ಆರೋಗ್ಯವು ಸಾಮಾಜಿಕ ಅಭಿವೃದ್ಧಿ ಮತ್ತು ಸಾಮಾಜಿಕ ಚಲನಶೀಲತೆಯನ್ನು ಅಳೆಯುವ ಮಾನದಂಡವಾಗಿದೆ. ಆರೋಗ್ಯವೆಂಬುದು ಬರಿಯ ಸಾಂಸ್ಥಿಕ ಅಂಶವಲ್ಲ ಬದಲಾಗಿ ಕ್ಲಪ್ತ ಸಮಯಕ್ಕೆ,ಸೂಕ್ತವಾದ ಚಿಕಿತ್ಸೆ ದೊರೆಯುವ ಸನ್ನಿವೇಶವನ್ನು ಪರಿಪೂರ್ಣ ಆರೋಗ್ಯ ವ್ಯವಸ್ಥೆಯೆನ್ನಬಹುದು. ಈ ಕೋಷ್ಠಕದಲ್ಲಿ ಮುಗೇರರು ಅನಾರೋಗ್ಯದ ಸಂದರ್ಭದಲ್ಲಿ ಯಾವ ಮೂಲದಿಂದ ಚಿಕಿತ್ಸೆ ಪಡೆಯುತ್ತಾರೆಯೆಂಬುದನ್ನು ಚರ್ಚಿಸಲಾಗಿದೆ.ಒಟ್ಟು ೫೩ ಸೂಚನದಾರರಲ್ಲಿ ೧೮(೩೩.೯೬) ಸೂಚನದಾರರು ತಮ್ಮ ಅನಾರೋಗ್ಯದ ಸಂದರ್ಭದಲ್ಲಿ ಸರ್ಕಾರಿ ಆಸ್ಪತ್ರೆಯಿಂದ ಚಿಕಿತ್ಸೆ ಪಡೆಯುತ್ತಾರೆಂಬುದಾಗಿ ಅಭಿಪ್ರಾಯಪಟ್ಟರು,ಅವರಲ್ಲಿ ೪ ನಗರ ಪ್ರದೇಶದವರು ಮತ್ತು ಉಳಿದ ೧೪ ಸೂಚನದಾರರು ಗ್ರಾಮೀಣ ಪ್ರದೇಶದವರಗಿದ್ದಾರೆ. ಸೂಚನದಾರರಲ್ಲಿ ಬಹುತೇಕರು ಅಂದರೆ ೨೫(೪೭.೧೬) ಜನ ತಮ್ಮ ಅನಾರೋಗ್ಯದ ಸಂದರ್ಭದಲ್ಲಿ ಸ್ಥಳಿಯ ಖಾಸಗಿ ಆಸ್ಪತ್ರೆಯಿಂದ ಚಿಕಿತ್ಸೆ ಪಡೆಯುವುದಗಿ ಅಭಿಪ್ರಾಯ ಪಟ್ಟರು,ಅವರಲ್ಲಿ ನಗರ ಪ್ರದೇಶದವರ ಸಂಖ್ಯೆ ಹೆಚ್ಚು ಅಂದರೆ೨೨ ಮತ್ತು ೩ ಸೂಚನದಾರರು ಗ್ರಾಮೀಣ ಪ್ರದೇಶದವರಾಗಿದ್ದಾರೆ. ಗ್ರಾಮ ವೈದ್ಯರಿಂದ ೫(೯.೪೩) ಸೂಚನದಾರರು,ಮಾಂತ್ರಿಕರಿಂದ ೨(೩.೭೭) ಸೂಚನದಾರರು,ಸ್ವಂತ

ಮನೆ ಔಷಧವನ್ನು ೩(೫.೬೬) ಸೂಚನದಾರರು ಮಾಡುವುದಾಗಿ ಅಭಿಪ್ರಾಯಪಟ್ಟರು. ಒಟ್ಟಾರೆಯಾಗಿ ಅತೀ ಕಡಿಮೆ ಸಂಖ್ಯೆಯ ಸೂಚನದಾರರು ಸರ್ಕಾರಿ ಆಸ್ಪತ್ರೆಯಿಂದ ಸೇವೆ ಪಡೆಯುವುದಾಗಿ ಈ ಮಾಹಿತಿಯಿಂದ ತಿಳಿದುಬರುತ್ತದೆ.

ಕೋಷ್ಟಕ-2.15: ಸೂಚನದಾರರ ಸ್ವಂತ ಜಮೀನಿನ ಸ್ವರೂಪ

ಜಮೀನಿನ ಸ್ವರೂಪ	ಅಭಿಪ್ರಾಯ	ಒಟ್ಟು ಮತ್ತು ಶೇಕಡವಾರು
ಒಣ ಭೂಮಿ	೧೭	೧೭(೬೦.೭೨)
ಕೃಷಿ ಭೂಮಿ	೫	೫(೧೭.೮೬)
ನೀರಾವರಿ ಭೂಮಿ	೬	೬(೧೧.೪೨)
ಒಟ್ಟು	೨೮	೨೮(೧೦೦)



ಮೇಲಿನ ಕೋಷ್ಟಕದ ಪ್ರಕಾರ ಜಮೀನು ಹೊಂದಿರುವ ಒಟ್ಟು ೨೮ ಸೂಚನದಾರರ ಪೈಕಿ ೧೭(೬೦.೭೨) ಸೂಚನದಾರರು ತಾವು ಒಣ ಭೂಮಿ ಹೊಂದಿರಿವುದಾಗಿ

ಅಭಿಪ್ರಾಯಪಟ್ಟರು. ೫(೧೭.೮೬) ಸೂಚನದಾರರು ತಾವು ಕೃಷಿ ಭೂಮಿಯನ್ನು ಹಾಗೂ ಉಳಿದ ೬(೧೧.೪೨) ಸೂಚನದಾರರು ನೀರಾವರಿ ಭೂಮಿಯನ್ನು ಹೊಂದಿರುವುದಾಗಿ ಅಭಿಪ್ರಾಯ ಪಟ್ಟರು. ಕ್ರೋಢಿಕರಿಸಿದ ಮಾಹಿತಿಯ ಪ್ರಕಾರ ಹೆಚ್ಚಿನ ಮುಗೇರರು ಒಣ ಭೂಮಿ ಅಂದರೆ ಮಳೆಗಾಲದಲ್ಲಿ ಮಾತ್ರ ಒಂದು ಕಾಲದ ಕೃಷಿಯನ್ನು ಮಾಡಾ ಬಹುದಾದ ಭೂಮಿಯನ್ನು ಹೊಂದಿರುವುದು ತಿಳಿದುಬರುತ್ತದೆ. ಅತೀ ಕಡಿಮೆ ಸಂಖ್ಯೆಯ ಮುಗೇರರು ಕೃಷಿ ಮತ್ತು ನೀರಾವರಿಯನ್ನು ಹೊಂದಿರುವುದುತಿಳಿದುಬಂದಿದೆ.

ಕೋಷ್ಠಕ-2.16: ಸೂಚನದಾರರು ಸ್ವಂತ ಜಮೀನು ಹೊಂದಿರುವ ವಿವರ


ಸ್ವಂತಜಮೀನು	ಅಭಿಪ್ರಾಯ	ಒಟ್ಟುಮತ್ತು ಶೇಕಡವಾರು
ಇದೆ	೨೮	೨೮(೫೨.೮೩)
ಇಲ್ಲ	೨೫	೨೫(೪೭.೧೭)
ಒಟ್ಟು	೫೩	೫೩(೧೦೦)
ಇದೆಯಾದರೆದೊರೆತುದುಹೇಗೆ		
ಖರೀದಿಸಿದ್ದು	೩	೩(೧೦.೭೨)
ಪಿತ್ರಾರ್ಜಿತ	೧೪	೧೪(೫೦.೦೦)
ಭೂಸುಧಾರಣೆಯಿಂದ	೭	೭(೨೫.೦೦)
ಸರ್ಕಾರಿಭೂಮಿ	೪	೪(೧೪.೨೮)
ಒಟ್ಟು	೨೮	೨೮ (೧೦೦)

ಈ ಮೇಲಿನ ಕೋಷ್ಠಕದ ಪ್ರಕಾರ ಒಟ್ಟು ೫೩ ಸೂಚನದಾರರಲ್ಲಿ ೨೮(೫೨.೮೩) ಜನ ಸ್ವಂತ ಭೂಮಿಯನ್ನು ಹೊಂದಿರುತ್ತಾರೆ ಅವರಲ್ಲಿ ಬಹುತೇಕರು ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರು ಮುಗೇರ ಕುಟುಂಬದವರಾಗಿದ್ದಾರೆ. ಸುಮಾರು ೨೫(೪೭.೧೭)

ಸೂಚನದಾರರು ತಮಗೆ ಸ್ವಂತ ಜಮೀನು ಇಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಜಮೀನು ಹೊಂದಿರುವ ಸೂಚನದಾರರಲ್ಲಿ ತಮ್ಮ ಜಮೀನಿನ ಮೂಲದ ಬಗ್ಗೆ ಪ್ರಶ್ನಿಸಿದಾಗ ೩(೧೦.೭೨) ಸೂಚನದಾರರು ಜಮೀನನ್ನು ಖರೀದಿಸಿರುವುದಾಗಿ, ೧೪(೫೦.೦೦) ಸೂಚನದಾರರು ತಮಗೆ ಜಮೀನು ಪಿತ್ರಾರ್ಜಿತವಾಗಿ ಬಂದಿರುವುದಾಗಿ, ೭(೨೫.೦೦) ಸೂಚನದಾರರು ತಮಗೆ ಜಮೀನು ಭೂಸುಧಾರಣೆಯ ಫಲವಾಗಿ ದೊರೆತಿರುವುದಾಗಿ ಮತ್ತು ಉಳಿದ ೪(೧೪.೨೮) ಸೂಚನದಾರರು ತಾವು ಸರ್ಕಾರಿ ಜಮೀನನ್ನು ಹೊಂದಿರುವುದಾಗಿ ಅಭಿಪ್ರಾಯಪಟ್ಟರು.ಈ ಎಲ್ಲಾ ಮಾಹಿತಿಯನ್ನು ಗಮನಿಸಿದಾಗ ಅತೀ ಕಡಿಮೆ ಸಂಖ್ಯೆಯ ಮುಗೇರರು ಸ್ವಂತ ಜಮೀನನ್ನು ಹೊಂದಿರುವುದು ಕಂಡುಬರುತ್ತದೆ. ಇನ್ನೊಂದು ದೃಷ್ಟಿಯಲ್ಲಿ ಇದು ಮುಗೇರರ ಆರ್ಥಿಕ ದೌರ್ಬಲ್ಯವನ್ನು ಪರೋಕ್ಷವಾಗಿ ಪ್ರಕಟ ಪಡಿಸುತ್ತದೆ.

ಕೋಷ್ಠಕ-2.17: ಸೂಚನದಾರರು ಹಣ ಉಳಿತಾಯ ಮಾಡಿದ ವಿವರ


ಹಣಉಳಿತಾಯ	ಅಭಿಪ್ರಾಯ	ಒಟ್ಟುಮತ್ತುಶೇಕಡವಾರು
ಹೌದು	೩೦	೩೦(೫೬.೬೧)
ಇಲ್ಲ	೨೩	೨೩(೪೩.೩೯)
ಒಟ್ಟು	೫೩	೫೩(೧೦೦)



ಈ ಮೇಲಿನ ಕೋಷ್ಠಕದಲ್ಲಿ ಸೂಚನದಾರರ ಉಳಿತಾಯ ಪ್ರವೃತ್ತಿಯ ಬಗ್ಗೆ ಚರ್ಚಿಸಲಾಗಿದೆ. ಒಟ್ಟು ೫೩ ಸೂಚನದಾರರಲ್ಲಿ ೩೦(೫೬.೬೧) ಜನ ತಾವು ಉಳಿತಾಯ ಮಾಡಿರುವುದಾಗಿ ಅಭಿಪ್ರಾಯಪಟ್ಟರು. ತಾವು ಯಾವುದೇ ರೀತಿಯ ಉಳಿತಾಯ ಮಾಡಿಲ್ಲವೆಂದು ೨೩ ಜನ ಸೂಚನದಾರರು ಅಭಿಪ್ರಾಯ ಪಟ್ಟಿದ್ದಾರೆ.

ಕೋಷ್ಠಕ-2.18: ಸೂಚನದಾರರು ಹಣಉಳಿತಾಯಮಾಡಿದಸ್ಥಳಗಳವಿವರ


ಹಣಉಳಿತಾಯ	ಅಭಿಪ್ರಾಯ	ಒಟ್ಟುಮತ್ತು ಶೇಕಡವಾರು
ಬ್ಯಾಂಕ್	೪	೪(೧೩.೩೩)
ಅಂಚೆಕಛೇರಿ	೭	೭(೨೩.೩೩)
ಜೀವವಿಮೆ	೬	೬(೨೦.೦೦)
ಮನೆಯಲ್ಲಿ	೨	೨(೬.೬೬)
ಇತರೆ	೧೧	೧೧(೩೬.೬೬)
ಒಟ್ಟು	೩೦	೩೦(೧೦೦)



ಹಣ ಮಾಡಿದ ಸೂಚನದಾರರಲ್ಲಿ ೪(೧೩.೩೩) ಸೂಚನದಾರರು ಬ್ಯಾಂಕ್ನ ಲ್ಲಿ, ೭(೨೩.೩೩) ಜನ ಅಂಚೆ ಕಛೇರಿಯಲ್ಲಿ, ಜೀವ ವಿಮೆಯಲ್ಲಿ ೬(೨೦.೦೦) ಸೂಚನದಾರರು,ತಮ್ಮ ಸ್ವಂತ ಮನೆಯಲ್ಲಿ ೨(೬.೬೬) ಜನ ಮತ್ತು ಬಹುತೇಕ ಅಂದರೆ ೧೧(೩೬.೬೬) ಸೂಚನದಾರರು ಇತರೆ ಸಂಸ್ಥೆಯಲ್ಲಿ ಹಣ ಉಳಿತಾಯ ಮಾಡಿರುವುದಾಗಿ ಅಭಿಪ್ರಾಯಪಟ್ಟರು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದ ಪ್ರಕಾರ ಬಹುತೇಕ ಸೂಚನದಾರರು ಸರಕಾರೇತರ ಸಂಸ್ಥೆಗಳಿಂದ ನಡೆಸಲ್ಪಡುವ ಸ್ವ-ಸಹಾಯ ಸಂಘಗಳಲ್ಲಿ ಗಣನೀಯವಾಗಿ ಹಣ ಉಳಿತಾಯ ಮಾಡಿರುವುದಾಗಿ ತಿಳಿಸಿದರು.

ಕೋಷ್ಟಕ-2.19: ಸೂಚನದಾರರ ಉಳಿತಾಯ ಹಣದ ಬಳಕೆ ಉದ್ದೇಶ

ಉದ್ದೇಶ	ಅಭಿಪ್ರಾಯ	ಒಟ್ಟುಮತ್ತು ಶೇಕಡವಾರು
ಮಕ್ಕಳವಿದ್ಯಾಭ್ಯಾಸ	೬	೬(೨೦.೦೦)
ವಿವಾಹಕ್ಕಾಗಿ	೮	೮(೨೬.೬೬)
ಮನೆಕಟ್ಟಲು	೪	೪(೧೩.೩೩)
ಸಾಲತೀರಿಸಲು	೨	೨(೬.೬೬)
ಭವಿಷ್ಯಕ್ಕಾಗಿ	೧೦	೧೦(೩೩.೩೩)
ಒಟ್ಟು	೩೦	೩೦(೧೦೦)



ಈ ಮೇಲಿನ ಕೋಷ್ಠಕದ ಪ್ರಕಾರ ಒಟ್ಟು ಉಳಿತಾಯ ಮಾಡಿರುವ ಸೂಚನದಾರರಲ್ಲಿ ೬(೨೦.೦೦) ಸೂಚನದಾರರು ತಮ್ಮ ಉಳಿತಾಯವನ್ನು ಮಕ್ಕಳ ವಿದ್ಯಾಭ್ಯಾಸಕ್ಕೆ ವಿನಿಯೋಗಿಸುತ್ತೇವೆಂದು ಅಭಿಪ್ರಾಯಪಟ್ಟರು. ೮(೨೬.೬೬) ರಷ್ಟು ಸೂಚನದಾರರು ತಾವು ಉಳಿತಾಯ ಮಾಡಿದ ಹಣವನ್ನು ತಮ್ಮ ಮಕ್ಕಳ ವಿವಾಹಕ್ಕಾಗಿ ಮತ್ತು ೪(೧೩.೩೩) ಸೂಚನದಾರರು ಮನೆ ಕಟ್ಟಲು, ೨(೬.೬೬) ಸೂಚನದಾರರು ತಮ್ಮ ಹಳೆಯ ಸಾಲ ತೀರಿಸಲು ಮತ್ತು ೧೦(೩೩.೩೩) ರಷ್ಟು ಸೂಚನದಾರರು ತಮ್ಮ ಭವಿಷ್ಯದ ಕಾರಣಕ್ಕಾಗಿ ತಾವು ಉಳಿತಾಯ ಮಾಡಿದ ಹಣವನ್ನು ಬಳಸುವುದಾಗಿ ಅಭಿಪ್ರಾಯಪಟ್ಟರು. ಒಟ್ಟಿನಲ್ಲಿ ಹೇಳುವುದಾದರೆ ಅತೀ ಹೆಚ್ಚು ಸಂಖ್ಯೆಯ ಸೂಚನದಾರರು ತಮ್ಮ ಸಾಲ ಮರುಪವತಿಸಲು ಮತ್ತು ತಮ್ಮ ಮಕ್ಕಳಾ ವಿವಾಹಕ್ಕಾಗಿ ಉಳಿತಾಯ ಮಾಡುವ ಪ್ರವೃತ್ತಿ ಹೊಂದಿರುವುದು ಈ ಮಾಹಿತಿಯಿಂದ ತಿಳಿದುಬರುತ್ತದೆ.

ಕೋಷ್ಠಕ-2.20: ಸೂಚನದಾರರುಹೊಂದಿರುವಮನೆಬಳಕೆಯ ವಸ್ತುಗಳವಿವರ


ಅಭಿಪ್ರಾಯ	ರೇಡಿಯೋ	ದೂರ ದರ್ಶನ	ಫ್ಯಾನ್	ಮೊಬೈಲ್	ಮಿಕ್ಸಿ	ಗ್ರೈಂಡರ್	ವಾಷಿಂಗ್	ಗ್ಯಾಸ್
ಇದೆ	೧೮	೨೯	೨೬	೪೨	೨೮	೧೨	೫	೧೪
ಇಲ್ಲ	೩೫	೨೪	೨೭	೧೧	೨೫	೪೧	೪೮	೩೯
ಒಟ್ಟು	೫೩	೫೩	೫೩	೫೩	೫೩	೫೩	೫೩	೫೩

ಈ ಮೇಲಿನ ಕೋಷ್ಠಕದಲ್ಲಿ ಸೂಚನದಾರರು ಹೊಂದಿರುವ ಮನೆ ಬಳಕೆಯ ವಸ್ತುಗಳ ಕುರಿತಾದ ಮಾಹಿತಿಯನ್ನು ಕ್ರೋಢಿಕರಿಸಲಾಗಿದೆ. ಒಟ್ಟು ೫೩ ಸೂಚನದಾರರಲ್ಲಿ ೧೮ ಸೂಚನದಾರರು ರೇಡಿಯೊ ಹೊಂದಿರುವುದಾಗಿ ಹಾಗೂ ಉಳಿದ ೩೫ ಸೂಚನದಾರರು ರೇಡಿಯೊ ಹೊಂದಿಲ್ಲವೆಂದು ಅಭಿಪ್ರಾಯಪಟ್ಟರು. ದೂರದರ್ಶನ ಹೊಂದಿರುವ ಬಗ್ಗೆ ಕೇಳಿದಾಗ ೨೯ ಸೂಚನದಾರರು ಹೊಂದಿರುವುದಾಗಿ ಉಳಿದ ೨೪ ಸೂಚನದಾರರು ತಮ್ಮ ಮನೆಯಲ್ಲಿ ದೂರದರ್ಶನವನ್ನು ಹೊಂದಿಲ್ಲವೆಂದು ತಿಳಿಸಿದರು. ಮುಗೇರ ಸಮುದಾಯದಲ್ಲಿ ಐಷರಾಮಿ ವಸ್ತುವೆಂದು ಪರಿಗಣಿಸಲ್ಪಟ್ಟಿರುವುದರಿಂದ, ಒಟ್ಟು ಸೂಚನದಾರರ ಪೈಕಿ ೨೬ ಸೂಚನದಾರರು ಹೊಂದಿರುವುದಾಗಿ ಮತ್ತು ೨೭ ಸೂಚನದಾರರು ಫ್ಯಾನ್ಹೊಂದಿಲ್ಲವೆಂದು ಅಭಿಪ್ರಾಯಪಟ್ಟರು. ಇಂದಿನ ಯುಗವು ಮೊಬೈಲ್ಯುಗವೆಂದು ಕರೆಯಲ್ಪಟ್ಟಿರುವುದು ಈ ಕೋಷ್ಠಕದಲ್ಲಿ ಕಂಡುಬಂದಿದೆ. ಒಟ್ಟು ಸೂಚನದಾರರಲ್ಲಿ ಬಹುತೇಕರು ಅಂದರೆ ೪೨ ಸೂಚನದಾರರು ತಮ್ಮಲ್ಲಿ ಸ್ವಂತ ಮೊಬೈಲ್ಫೋನ್ಹೊಂದಿರುವುದಾಗಿ ಮತ್ತು ಉಳಿದ ೧೧ ಸೂಚನದಾರು ತಾವು ಮೊಬೈಲ್ಫೋನ್ಹೊಂದಿಲ್ಲವೆಂದು ಅಭಿಪ್ರಾಯಪಟ್ಟರು. ಮಿಕ್ಸಿ ಮತ್ತು ಗ್ರೈಂಡ ರ್ಉಪಯೋಗಕ್ಕೆ ಸಂಬಂಧಿಸಿದಂತೆ ಕೇಳಿದಾಕ ಒಟ್ಟು ೪೦ ಸೂಚನದಾರರು ತಾವು ಈ ಎಲ್ಲಾ ವಸ್ತುಗಳನ್ನು ಹೊಂದಿರುವುದಾಗಿ ಮತ್ತು ೬೬ ಸೂಚನದಾರರು ಹೊಂದಿಲ್ಲವೆಂದು ತಿಳಿಸಿದರು. ವಾಷಿಂಗ್ಮೆಷಿ ನ್ಹೊಂದಿರುವವರ ಸಂಖ್ಯೆ ೫ ಮತ್ತು ಗ್ಯಾಸ್ಹೊಂದಿರುವವರ ಸಂಖ್ಯೆ ಕೇವಲ ೧೪ ಆಗಿದೆ. ಈ ಎಲ್ಲಾ ಅಂಕಿ-ಅಂಶವನ್ನು ಗಮನಿಸಿದಾಗ ಬಹುತೇಕ ಮುಗೇರರಲ್ಲಿ

ಮತ್ತು ಅವರ ಕುಟುಂಬದಲ್ಲಿ ಅತೀ ಕಡಿಮೆ ಮನೆ ಬಳಕೆಯ ವಸ್ತುಗಳು ಇರುವುದು ತಿಳಿದು ಬರುತ್ತದೆ.

ಕೋಷ್ಟಕ-2.21: ಸೂಚನದಾರರುಹೊಂದಿರುವವಾಹನಗಳವಿವರ

ವಾಹನಗಳು	ಇದೆ	ಇಲ್ಲ	ಒಟ್ಟು
ಸೈಕಲ್	೧೭(೩೨.೦೮)	೩೬(೬೭.೯೨)	೫೩
ದ್ವಿಚಕ್ರವಾಹನಗಳು	೮(೧೫.೦೯)	೪೫(೮೪.೯೧)	೫೩
ಅಟೋರಿಕ್ಷಾ	೩(೫.೬೬)	೫೦(೯೪.೩೪)	೫೩
ಕಾರು	೨(೩.೭೭)	೫೧(೯೬.೨೩)	೫೩
ಟೆಂಪೊ	೦	೫೩(೧೦೦)	೫೩



ಮೇಲ್ಕಾಣಿಸಿದ ಮಾಹಿತಿಯ ಪ್ರಕಾರ ಒಟ್ಟು ೫೩ ಸೂಚನದಾರರಲ್ಲಿ ೧೭ ಜನರು ಸೈಕಲನ್ನು ಹೊಂದಿರುವುದಾಗಿ ಮತ್ತು ೩೬ ಜನರು ಹೊಂದಿಲ್ಲವೆಂದು ಅಭಿಪ್ರಾಯ ಪಟ್ಟರು. ದ್ವಿ-ಚಕ್ರ ವಾಹನದ ಬಗ್ಗೆ ಪ್ರಸ್ತಾಪಿಸಿದಾಗ ೪೫ ಜನರು ತಮ್ಮಲ್ಲಿ ದ್ವಿಚಕ್ರ ವಾಹನವಿಲ್ಲವೆಂದು ಮತ್ತು ೮ ಸೂಚನದಾರರು ತಾವು ದ್ವಿಚಕ್ರ ವಾಹನ ಹೊಂದಿರುವುದಾಗಿ ಅಭಿಪ್ರಾಯಪಟ್ಟರು. ಆಟೋರಿಕ್ಷಾಕ್ಕೆ ಸಂಬಂಧಿಸಿದಂತೆ ಕೇವಲ ೩ ಜನ ಮತ್ತು ಉಳಿದ ೫೦ ಸೂಚನದಾರರು ಹೊಂದಿಲ್ಲವೆಂದರು. ಸ್ವಂತ ಬಳಕೆಯ ಕಾರಿನ ಬಗ್ಗೆ ಕೇಳಿದಾಗ ಕೇವಲ ೨ ಜನ ಇದೆಯೆಂದು

ಮತ್ತು ಉಳಿದ ೫೧ ಜನ ಇಲ್ಲವೆಂದರು. ಕೊನೆಯದಾಗಿ ಯಾವುದೇ ಸೂಚನದಾರರು ಟೆಂಪೋ ಹೊಂದಿಲ್ಲವೆಂದು ಈ ಮಾಹಿತಿಯಲ್ಲಿ ತಿಳಿದುಬಂದಿದೆ.

ಕೋಷ್ಟಕ-2.22: ಸೂಚನದಾರರುವಲಸೆಹೋಗಿರುವವಿವರ

ಅಭಿಪ್ರಾಯ	ನಗರ	ಗ್ರಾಮೀಣ	ಒಟ್ಟು
ಹೌದು	೭	೧೮	೨೫(೪೭.೧೭)
ಇಲ್ಲ	೨೦	೮	೨೮(೫೨.೮೩)
ಒಟ್ಟು	೨೭	೨೬	೫೩(೧೦೦)
ಎಲ್ಲಿಗೆ ವಲಸೆ ಹೋಗಿದ್ದಾರೆ			
ಬೇರೆತಾಲೂಕು	೦	೫	೫(೨೦)
ಬೇರೆಜಿಲ್ಲೆ	೨	೪	೬(೨೪)
ಬೇರೆರಾಜ್ಯ	೩	೮	೧೧(೪೪)
ಬೇರೆದೇಶ	೨	೧	೩(೧೨)
ಒಟ್ಟು	೭	೧೮	೨೫(೧೦೦)

ಈ ಕೋಷ್ಟಕದ ಪ್ರಕಾರ ಒಟ್ಟು ಸೂಚನದಾರರಲ್ಲಿ ೨೫(೪೭.೧೭) ಸೂಚನದಾರರ ಕುಟುಂಬಿಕರು ವಲಸೆ ಹೋಗಿರುವುದಾಗಿ ಅಭಿಪ್ರಾಯ ಪಟ್ಟರು, ಅವರಲ್ಲಿ ೭ ಜನ ನಗರ ಪ್ರದೇಶದವರು ಮತ್ತು ೧೪ ಜನ ಗ್ರಾಮೀಣ ಪ್ರದೇಶದವರಾಗಿದ್ದಾರೆ. ನಗರ ಪ್ರದೇಶದ ೨೦ ಜನ ಮತ್ತು ಗ್ರಾಮೀಣ ಪ್ರದೇಶದ ೮ ಜನರು ತಾವು ಅಥವಾ ತಮ್ಮ ಕುಟುಂಬದವರು ಯಾವುದೆ ಪ್ರದೇಶಕ್ಕೆ ವಲಸೆ ಹೋಗಿಲ್ಲವೆಮ್ದು ಅಭಿಪ್ರಾಯಪಟ್ಟರು. ವಲಸೆ ಹೋಗಿರುವ ಒಟ್ಟು ೨೫ ಜನರಪೈಕಿ ೫(೨೦) ಜನ ಬೇರೆ ತಾಲೂಕಿಗೆ,೬(೨೪) ಜನ ಬೇರೆ ಜಿಲ್ಲೆಗೆ,೧೧(೪೪) ಜನ ಬೇರೆ ರಾಜ್ಯಕ್ಕೆ ಮತ್ತು ೩(೧೨) ಜನ ಬೇರೆ ದೇಶಕ್ಕೆ ವಲಸೆ ಹೋಗಿರುವುದಾಗಿ ಅಭಿಪ್ರಾಯಪಟ್ಟರು.

ಕೋಷ್ಟಕ-2.23: ಸೂಚನದಾರರು ಸರಕಾರಿ ಸೌಲಭ್ಯಗಳನ್ನು ಪಡೆಯುತ್ತಿರುವ ವಿವರ

ಸರಕಾರಿಸೌಲಭ್ಯ	ನಗರ	ಗ್ರಾಮೀಣ	ಒಟ್ಟು
ಪಡೆದಿದ್ದೇವೆ	೧೫	೧೯	೩೪
ಪಡೆದಿಲ್ಲ	೧೨	೭	೧೯
ಒಟ್ಟು	೨೭	೨೬	೫೩
ಯಾವರೀತಿಯಸಹಾಯ..?			
ನಿವೇಶನ	೦	೨	೨
ಮನೆ	೨	೩	೫
ಹಂಚು	೩	೦	೩
ವಿದ್ಯುತ್	೨	೩	೫
ಶೌಚಾಲಯ	೬	೭	೧೩
ವೇತನ	೨	೪	೬
ಒಟ್ಟು	೧೫	೧೯	೩೪

ಈ ಕೋಷ್ಟಕದ ಪ್ರಕಾರ ಒಟ್ಟು ೫೪ ಸೂಚನದಾರರಲ್ಲಿ ೩೪ ಜನರು ಸರಕಾರದಿಂದ ವಿವಿಧ ರೀತಿಯ ಸಹಾಯವನ್ನು ಪಡೆದಿರುವುದಾಗಿ ಅಭಿಪ್ರಾಯಪಟ್ಟರು. ಅವರಲ್ಲಿ ನಗರ ಪ್ರದೇಶದವರು ೧೫ ಮತ್ತು ಗ್ರಾಮೀಣ ಪ್ರದೇಶದವರು ೧೯ ಸೂಚನದಾರರಾಗಿದ್ದಾರೆ. ಸರಕಾರಿ ಸೌಲಭ್ಯವನ್ನು ಪಡೆದವರಲ್ಲಿ ಗ್ರಾಮೀಣ ಪ್ರದೇಶದ ೨ ಜನ ನಿವೇಶನವನ್ನು, ನಗರ ಪ್ರದೇಶದ ೨ ಮತ್ತು ಗ್ರಾಮೀಣ ಪ್ರದೇಶದ ೩ ಸೂಚನದಾರರು ಮನೆಯನ್ನು ಪಡೆದಿರುವುದಾಗಿ ತಿಳಿಸಿದರು. ಮನೆಯ ಹಂಚಿನ ಬಗ್ಗೆ ಕೇಳಿದಾಗ ನಗರ ಪ್ರದೇಶದ ೩ ಸೂಚನದಾರರು ಪಡೆದಿರುತ್ತೇವೆಮ್ದು ಅಭಿಪ್ರಾಯಪಟ್ಟರು. ವಿದ್ಯುತ್ಸೌಲಭ್ಯವನ್ನು ನಗರ ಪ್ರದೇಶದ ೨ ಸೂಚನದಾರರು ಮತ್ತು ಗ್ರಾಮೀಣ ಪ್ರದೇಶದ ೩ ಜನರು ಪಡೆದಿರುವುದಾಗಿ ತಿಳಿಸಿದರು.ಶೌಚಲಯವು ಇಂದಿನ ಅಭಿವೃದ್ಧಿಯ ಮುಖ್ಯ ಮಾನದಂಡವಾಗಿರುವುದರಿಂದ ಮತ್ತು ಸ್ಥಳಿಯ ಸಂಸ್ಥೆಗಳು ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಿರುವ ಕಾರಣದಿಂದ ಈ ಅಧ್ಯಯನದಲ್ಲಿ ಈ ಸೌಲಭ್ಯ ಪಡೆದಿರುವ ಬಗ್ಗೆ ಕೇಳಲಾಯಿತು. ನಗರ ಪ್ರದೇಶದ ೬

ಸೂಚನದಾರರು ಮತ್ತು ಗ್ರಾಮೀಣ ಪ್ರದೇಶದ ೭ ಸೂಚನದಾರರು ಶೌಚಲಯದ ಸೌಲಭ್ಯವನ್ನು ಪಡೆದಿರುವಾಗಿ ತಿಳಿಸಿದರು. ವಿಧವಾ ಮತ್ತು ವೃದ್ಧಪ್ಯ ವೇತನದಂತಹ ಸೌಲಭ್ಯವನ್ನು ಗ್ರಾಮೀಣ ಪ್ರದೇಶದ ೪ ಜನ ಮತ್ತು ನಗರ ಪ್ರದೇಶದ ೨ ಸೂಚನದಾರರು ಪಡೆಯುತ್ತಿರುವುದಾಗಿ ಅಭಿಪ್ರಾಯಪಟ್ಟರು. ಒಟ್ಟಿನಲ್ಲಿ ಅತೀ ಕಡಿಮೆ ಸಂಖ್ಯೆಯ ಮುಗೇರರು ಅತ್ಯಲ್ಪ ಮಟ್ಟದ ಸರಕಾರಿ ಸೌಲಭ್ಯವನ್ನು ಪಡೆಯುತ್ತಿರುವುದು ಈ ಮಾಹಿತಿಯಿಂದ ವೇದ್ಯವಾಗುತ್ತದೆ.

ಕೋಷ್ಟಕ-2.24: ಸೂಚನದಾರರು ಸಂಘ/ಸಂಸ್ಥೆಗಳಲ್ಲಿ ಸದಸ್ಯತ್ವ ಹೊಂದಿರುವ ವಿವರ.

ಸದಸ್ಯತ್ವ	ನಗರ	ಗ್ರಾಮೀಣ	ಒಟ್ಟು
ಹೊಂದಿದ್ದೇವೆ	೨೦	೨೩	೪೩
ಹೊಂದಿಲ್ಲ	೭	೩	೧೦
ಒಟ್ಟು	೨೭	೨೬	೫೩
ಹೌದಾದರೆಯಾವುದರಲ್ಲಿ			
ಯುವಕ/ತಿಮಂಡಲ	೨	೦	೨
ಸ್ವಸಹಾಯ	೧೬	೧೮	೩೪
ಹಾಲಿನಡೈರಿ	೦	೪	೪
ಪಂಚಾಯತ್	೦	೧	೧
ರಾಜಕೀಯಪಕ್ಷ	೨	೦	೨
ಒಟ್ಟು	೨೦	೨೩	೪೩

ಮೇಲ್ಕಂಡ ಕೋಷ್ಟಕದ ಪ್ರಕಾರ ಒಟ್ಟು ೪೩ ಸೂಚನದಾರರು ವಿವಿಧ ಸಂಘ ಮತ್ತು ಸಂಸ್ಥೆಗಳಲ್ಲಿ ಸದಸ್ಯತ್ವ ಹೊಂದಿರುವುದಾಗಿ ತಿಳಿಸಿದರು. ಅವರಪ್ಪೈಕಿ ೨೦ ಜನರು ನಗರ ಪ್ರದೇಶದವರು ಮತ್ತು ೨೩ ಸೂಚನದಾರರು ಗ್ರಾಮೀಣ ಪ್ರದೇಶದವರಾಗಿದ್ದಾರೆ. ಸದಸ್ಯತ್ವ

ಹೊಂದಿರುವವರಲ್ಲಿ ೨ ಜನರು ಯುವಕ ಮತ್ತು ಯುವತಿ ಮಂಡಲದಲ್ಲಿ,೩೪ ಸೂಚನದಾರರು ಸ್ವಸಹಾಯ ಗುಂಪುಗಳಲ್ಲಿ,೪ ಜನರು ಹಾಲಿನ ಡೈರಿಯಲ್ಲಿ,೧ ಸ್ಥಳಿಯ ಸರಕಾರದಲ್ಲಿ, ೨ ಸೂಚನದಾರರು ಪ್ರಮುಖ ರಾಜಕೀಯ ಪಕ್ಷದಲ್ಲಿ ಸದಸ್ಯತ್ವ ಹೊಂದಿರುವುದಾಗಿ ತಿಳಿಸಿದರು.

ಅಧ್ಯಾಯ-ಮೂರು

ಪ್ರಮುಖ ಸಂಶೋಧನಾ ಫಲಿತಗಳು

೩.೧ ವೈಯಕ್ತಿಕ ಮಾಹಿತಿಗೆ ಸಂಬಂಧಿಸಿದ ಫಲಿತಗಳು

ಈ ಸಂಶೋಧನಾ ಅಧ್ಯಯನವು ತಿಳಿಯಪಡಿಸುವುದೇನಂದರೆ ಒಟ್ಟು ಸೂಚನದಾರರಲ್ಲಿ ೨೭(೫೦.೯೪) ಜನರು ನಗರ ಪ್ರದೇಶಕ್ಕೆ ಸೇರಿದವರಾಗಿದ್ದು,೨೬(೪೯.೦೬) ಸೂಚನದಾರರು ಗ್ರಾಮೀಣಾ ಪ್ರದೇಶಕ್ಕೆ ಸೇರಿದವರಾಗಿದ್ದಾರೆ. ವಯಸ್ಸಿಗೆ ಸಂಬಂಧಿಸಿದಂತೆ ಒಟ್ಟು ೧೯(೩೫.೮೪) ಸೂಚನದಾರರು ೩೦-೩೯ ರ ವಯೋಗುಂಪಿಗೆ ಸೇರಿದವರಾಗಿದ್ದಾರೆ. ಸೂಚನದಾರರರ ಲಿಂಗವಾರು ಹಂಚಿಕೆಯನ್ನು ಗಮನಿಸಿದಾಗ ಮಹಿಳಾ ಸೂಚನದಾರರ ಸಂಖ್ಯೆ ೨೯(೫೪.೭೨) ಮತ್ತು ಪುರುಷ ಸೂಚನದಾರರ ಸಂಖ್ಯೆ ೨೪(೪೫.೨೮) ಆಗಿದೆ. ಶೈಕ್ಷಣಿಕ ಅಂಶವನ್ನು ಗಮನಿಸಿದಾಗ ೩೭(೬೯.೮೧) ರಷ್ಟು ಸೂಚನದಾರರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಡೆದಿರುತ್ತಾರೆ. ವೈವಾಹಿಕ ಸ್ಥಿತಿಗತಿಯನ್ನು ಗಮನಿಸಿದಾಗ ೩೩(೬೨.೨೬) ರಷ್ಟು ಸೂಚನದಾರರು ವಿವಾಹಿತರಾಗಿದ್ದಾರೆ. ಕುಟುಂಬದ ಗಾತ್ರಕ್ಕೆ ಸಂಬಂಧಿಸಿದ ಮಾಹಿತಿಯನ್ನು ಗಮನಿಸಿದಾಗ ೨೫(೪೭.೧೬) ಸೂಚನದಾರರ ಕುಟುಂಬದ ಗಾತ್ರವು ೫-೮ ಸದಸ್ಯರನ್ನು ಒಳಗೊಂಡ ಕುಟುಂಬವೆಂದು ತಿಳಿದುಬಂದಿದೆ. ಮನೆಯ ಮಾಲಕತ್ವ ಮತ್ತು ಸ್ವರೂಪಕ್ಕೆ ಸಂಬಂಧಿಸಿದಂತೆ ೩೨(೬೦.೩೭) ಸೂಚನದಾರರು ಸ್ವಂತ ಹಂಚಿನ ಮನೆಯನ್ನು ಹೊಂದಿರುವುದು ತಿಳಿದುಬಂದಿದೆ.

೩.೨ ಸಾಮಾಜಿಕ ಸ್ಥಿತಿಗತಿಗಳಿಗೆ ಸಂಬಂಧಿಸಿದ ಫಲಿತಗಳು

ಈ ಅಧ್ಯಯನದಲ್ಲಿ ಕಂಡು ಕೊಂಡಂತೆ ಪ್ರಮುಖ ಕೌಟುಂಬಿಕ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಮಹಿಳೆಯ ಒಳಗೊಳ್ಳುವಿಕೆಯ ಬಗ್ಗೆ ಮಾಹಿತಿ ಕ್ರೋಢಿಕರಿಸಿದಾಗ ೪೭(೮೮.೬೭) ರಷ್ಟು ಸೂಚನದಾರರು ಮಹಿಳೆಯ ಅಭಿಪ್ರಾಯವನ್ನು ಕೇಳುತ್ತೇವೆಂದು

ಅಭಿಪ್ರಾಯಪಟ್ಟರು ಮತ್ತು ಎಲ್ಲಾ ಸಂದರ್ಭಗಳಲ್ಲೂ ಮಹಿಳೆಯರ ಅಭಿಪ್ರಾಯವನ್ನು ಪಡೆಯುವುದಾಗಿ ೧೭(೩೬.೧೭)ರಷ್ಟು ಸೂಚನದಾರರು ತಿಳಿಸಿದರು.ತಮ್ಮ ಮಕ್ಕಳ ವಿವಾಹವನ್ನು ಹಿರಿಯರು ಗೊತ್ತುಪಡಿಸುವ ಬಗ್ಗೆ ಮಾಹಿತಿ ಕ್ರೋಢಿಕರಿಸಿದಾಗ ಒಟ್ಟು ೪೭(೮೮.೬೭) ಸೂಚನದಾರರು ವಿವಾಹವನ್ನು ಹಿರಿಯರೆ ಗೊತ್ತುಪಡಿಸ ಬೇಕೆಮ್ದು ಅಭಿಪ್ರಾಯಪಟ್ಟರು. ಯಾಕೆಂದರೆ,ಬಹುತೇಕರು ಹಿರಿಯರು ಗೊತ್ತುಪಡಿಸುವಿಕೆಯನ್ನು ಹೆತ್ತವರ ಜವಾಬ್ದಾರಿ(೧೫) ಮತ್ತು ಜಾತಿಯ ಕಟ್ಟುಪಾಡು(೧೯) ಎಂದು ಅಭಿಪ್ರಾಯಪಟ್ಟರು. ಮಕ್ಕಳಿಗೆ ವಿವಾಹ ಮಾಡುವ ವಯಸ್ಸಿಗೆ ಸಂಬಂಧಿಸಿದಂತೆ,ಮಕ್ಕಳಿಗೆ ೨೧-೨೩ ವಯಸ್ಸಿಗೆ ಮದುವೆ ಮಾಡುವುದು ಸೂಕ್ತವೆಂದು ಭಾವಿಸಿರುವುದು ಕಂಡು ಬಂದಿದೆ. ಹೆಣ್ಣು ಮಕ್ಕಳಿಗೆ ಮಗನಷ್ಟೇ ಶಿಕ್ಷಣ ಕೊಡಿಸುವ ಬಗ್ಗೆ ಸೂಚನದಾರರಲ್ಲಿ ಕೇಳಿದಾಗ ೪೮(೯೦.೫೬) ಜನ ಸಮಾನ ಪ್ರಾಧಾನ್ಯತೆ ಕೊಡುವುದಾಗಿ ಅಭಿಪ್ರಾಯಪಟ್ಟರು. ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವ ಬಗ್ಗೆ ಕೇಳಿದಾಗ ,ನಗರ ಪ್ರದೇಶದ ೧೦ ಜನ ಮತ್ತು ಗ್ರಾಮೀಣ ಪ್ರದೇಶದ ೩ ಜನ,ಒಟ್ಟಾರೆಯಾಗಿ ೧೩(೨೪.೫೨) ಸೂಚನದಾರರು ತಮ್ಮ ಮಕ್ಕಳನ್ನು ಈ ಪಿ.ಯು.ಸಿ ಮಟ್ಟದವರೆಗೆ ಕಳಿಹಿಸುವ ಅಭಿಪ್ರಾಯ ತಿಳಿಸಿದರು. ಒಟ್ಟು ೫೩ ಸೂಚನದಾರರಲ್ಲಿ ೨೦(೩೭.೭೩) ಜನ ತಮ್ಮ ವಿಧ್ಯಾರ್ಥಿ ಜೀವನದಲ್ಲಿ ವಿಧ್ಯಾರ್ಥಿ ವೇತನವನ್ನು ಪಡೆದಿರುವುದಾಗಿ ತಿಳಿಸಿದರು. ೨೨(೪೧.೫೦) ಸೂಚನದಾರರು ತಮ್ಮ ಮನೆಯ ಹೆಣ್ಣು ಮಕ್ಕಳಿಗೆ ದೂರದ ಊರಲ್ಲಿ ಶಿಕ್ಷಣ ದೊರೆಯುವ ಅವಕಾಶ ಸಿಕ್ಕರೆ ಕಳುಹಿಸಲು ಒಪ್ಪಿಗೆಯನ್ನು ಸೂಚಿಸಿದ್ದಾರೆ. ಅಲ್ಲದೆ,೧೨(೩೮.೭೦) ಸೂಚನದಾರರು ಸುರಕ್ಷತೆಯ ಕಾರಣ ನೀಡಿ ತಮ್ಮ ಹೆಣ್ಣು ಮಕ್ಕಳಿಗೆ ದೂರದ ಊರಲ್ಲಿ ಶಿಕ್ಷಣ ನೀಡಲು ಒಪ್ಪುವುದಿಲ್ಲವೆಂದರು. ಅನಾರೋಗ್ಯದ ಸಂದಂರ್ಭದಲ್ಲಿ ಪಡೆಯುವ ಚಿಕಿತ್ಸೆ ಸಂಬಂಧಿಸಿದಂತೆ,೨೫(೪೭.೧೬) ಜನ ತಮ್ಮ ಅನಾರೋಗ್ಯದ ಸಂದರ್ಭದಲ್ಲಿ ಸ್ಥಳಿಯ ಖಾಸಗಿ ಆಸ್ಪತ್ರೆಯಿಂದ ಚಿಕಿತ್ಸೆ ಪಡೆಯುವುದಗಿ ಅಭಿಪ್ರಾಯಪಟ್ಟರು.

೩.೩ ಆರ್ಥಿಕ ಸ್ಥಿತಿ-ಗತಿಗೆ ಸಂಬಂಧಿಸಿದ ಫಲಿತಗಳು

ಈ ಅಧ್ಯಯನದಲ್ಲಿ ತಿಳಿದು ಕೊಂಡಂತೆ,೧೭(೬೦.೭೨) ಸೂಚನದಾರರು ತಾವು ಒಣ ಭೂಮಿ ಹೊಂದಿರಿವುದಾಗಿ ಅಭಿಪ್ರಾಯ ಪಟ್ಟರು.ಸೂಚನದಾರರಲ್ಲಿ ೨೮(೫೨.೮೩) ಜನ ಸ್ವಂತ ಭೂಮಿಯನ್ನು ಹೊಂದಿರುತ್ತಾರೆ ಅವರಲ್ಲಿ ಬಹುತೇಕರು ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರು ಮುಗೇರ ಕುಟುಂಬದವರಾಗಿದ್ದಾರೆ ಮತ್ತು ೧೪ (೫೦.೦೦) ಸೂಚನದಾರರು ತಮಗೆ ಜಮೀನು ಪಿತ್ರಾರ್ಜಿತವಾಗಿ ಬಂದಿರುವುದಾಗಿ ಅಭಿಪ್ರಾಯ ಪಟ್ಟರು.ಹಣ ಉಳಿತಾಯಕ್ಕೆ ಸಂಬಂಧಿಸಿದಂತೆ ಒಟ್ಟು ೩೦(೫೬.೬೧) ಜನ ತಾವು ಉಳಿತಾಯ ಮಾಡಿರುವುದಾಗಿ ಮತ್ತು ಉಳಿತಾಯದ ಹಣವನ್ನು ಭವಿಷ್ಯಕ್ಕಾಗಿ ಬಳಸುವುದಾಗಿ ೧೦(೩೩.೩೩) ರಷ್ಟು ಸೂಚನದಾರರು ಅಭಿಪ್ರಾಯ ಪಟ್ಟರು.ಮನೆ ಬಳಕೆಯ ವಸ್ತುಗಳ ಬಗ್ಗೆ ಮಾಹಿತಿಯಲ್ಲಿ ಒಟ್ಟು ೪೨ ಸೂಚನದಾರರು ಮೊಬೈಲ್ಹೊಂದಿ ರುವುದು ಕಂಡುಬಂದಿದೆ. ಸೂಚನದಾರರಲ್ಲಿ ೧೭(೩೨.೦೮) ಸೂಚನದಾರರು ಸೈಕಲನ್ನು ಹೊಂದಿರುವುದು ತಿಳಿದುಬಂದಿದೆ. ವಲಸೆಯು ಕೂಡ ಸಾಮಾಜಿಕ ಬದಲಾವಣೆಯ ಅಂಶವಾಗಿರುವುದರಿಂದ ಒಟ್ಟು ಸೂಚನದಾರರಲ್ಲಿ ೨೫(೪೭.೧೭) ಜನ ವಲಸೆ ಹೋಗಿರುವುದು ಮತ್ತು ಅವರಲ್ಲಿ ೧೧(೪೪) ರಷ್ಟು ಜನ ಬೇರೆ ರಾಜ್ಯಕ್ಕೆ ವಲಸೆ ಹೋಗಿರುವುದು ತಿಳಿದು ಬಂದಿದೆ. ಸರಕಾರಿ ಸೌಲಭ್ಯ ಪಡೆದಿರುವ ಬಗ್ಗೆ ಕೇಳಿದಾಗ ಒಟ್ಟು ಸೂಚನದಾರರಲ್ಲಿ ೩೪ ಜನರು ವಿವಿಧ ಸರಕಾರಿ ಸೌಲಭ್ಯವನ್ನು ಪಡೆದಿರುವುದಾಗಿ ತಿಳಿಸಿದರು.ಅವರಲ್ಲಿ ೧೩ ಸೂಚನದಾರರು ತಮ್ಮ ಮನೆಯ ಶೌಚಾಲಯ ನಿರ್ಮಾಣಕ್ಕೆ ಸೌಲಭ್ಯ ಪಡೆದಿರುವ ಬಗ್ಗೆ ಮಾಹಿತಿ ನೀದಿದರು. ಸಂಘ/ಸಂಸ್ಥೆಗಳಲ್ಲಿ ಸದಸ್ಯತ್ವ ಪಡೆಯುವುದು ಮತ್ತು ಅವುಗಳಲ್ಲಿ ಭಾಗವಹಿಸುವುದು ಸಾಮಾಜಿಕ ಚಲನಶೀಲತೆಯ ಪ್ರತೀಕವಾಗಿರುವುದರಿಂದ, ಒಟ್ಟು ಸೂಚನದಾರರಲ್ಲಿ ೪೩ ಸೂಚನದಾರರು ಸದಸ್ಯತ್ವ ಹೊಂದಿರುವುದಾಗಿ ತಿಳಿಸಿದರು ಮತ್ತು ಅವರಲ್ಲಿ ಬಹುತೇಕರು ಅಂದರೆ ೩೪ ಸೂಚನದಾರರು ಸ್ವ-ಸಹಾಯ ಸಂಘಗಳಲ್ಲಿ ತಾವು ಸದಸ್ಯತ್ವ ಹೊಂದಿರುವುದಾಗಿ ತಿಳಿಸಿದರು.

ಉಪಸಂಹಾರ

ತುಳುನಾಡಿನ ಮೂಲ ನಿವಾಸಿಗಳಾಗಿದ್ದು ಮಣ್ಣಿನ ಮಕ್ಕಳಾದ ಮುಗೇರರು ಇಲ್ಲಿನ ಹಲವು ಪರಿಶಿಷ್ಟ-ಜಾತಿಯಲ್ಲಿ ಭಿನ್ನವಾಗಿರುವ ಮತ್ತು ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ಸಮುದಾಯವಾಗಿದೆ.ಈ ಅಧ್ಯಯನದಲ್ಲಿ ಮುಗೇರರ ಬದಲಾದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ತಿಳಿದಿಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ.ಆದರೆ ಇದು ಒಂದು ಸಂಪೂರ್ಣ ಮತ್ತು ಚಾರಿತ್ರಿಕ ದಾಖಲೆಯಲ್ಲ ಬದಲಾಗಿ ಇನ್ನು ಮುಂದೆ ಅಧ್ಯಯನ ಮಾಡಬಹುದಾದ ಸಾಧ್ಯತೆಯನ್ನು ಗುರುತಿಸಿದೆ.ಈ ಸಂಶೋಧನೆ ಕಂಡು ಕೊಂಡಂತೆ ಅತಿ ಕಡಿಮೆ ಸಂಖ್ಯೆಯ ಮುಗೇರರು ಅಭಿವೃದ್ಧಿಯ ಸವಿಯನ್ನು ಅನುಭವಿಸಿದ್ದಾರೆ ಅಲ್ಲದೆ ಅತಿ ಹೆಚ್ಚಿನ ಸಂಖ್ಯೆಯ ಮುಗೇರರು ಇಂದಿಗೂ ಮೇಲು ಸ್ತರದ ಜಾತಿಯವರ ಮನೆಗಳಲ್ಲಿ, ತೋಟಗಳಲ್ಲಿ ಕೂಲಿ ಕಾರ್ಮಿಕರಾಗಿ ದುಡಿಯುವುದು ಕಂಡು ಬಂದಿದೆ. ಇದು ಒಂದು ದೃಷ್ಟಿಯಲ್ಲಿ ಕೃಷಿಯ ಜೊತೆಗಿನ ಇವರ ಅವಿನಭಾವ ಸಂಬಂಧವನ್ನು ತಿಳಿಸಿದರೆ ಇನ್ನೊಂದು ದೃಷ್ಟಿಯಲ್ಲಿ ಶೋಷಣೆ,ದೌರ್ಜನ್ಯವನ್ನು ವ್ಯಕ್ತಪಡಿಸುತ್ತದೆ.ಈ ಸಮುದಾಯದ ಯುವ ವರ್ಗ ಪರ್ಯಾಯ ಮಾರ್ಗದಲ್ಲಿ ನಗರ ಪ್ರದೇಶಕ್ಕೆ ವಲಸೆ ಹೋಗುವ ಪ್ರವೃತ್ತಿ ಇದ್ದರು ಇದರಿಂದ ಯಾವುದೇ ಹೆಚ್ಚಿನ ಪ್ರಯೋಜನ ಅಥವಾ ಸಾಂಸ್ಥಿಕ ಬದಲಾವಣೆ ಆಗಿಲ್ಲವೆಂಬುದು ಸರ್ವವೇದ್ಯವಾದ ಮಾತು.

ಅಭಿವೃದ್ಧಿ ದೃಷ್ಟಿಕೋನದಲ್ಲಿ ಮುಗೇರ ಸಮುದಾಯವನ್ನು ಅವಲೋಕಿಸಿದಾಗ ಸರಕಾರಿ ಸೌಲಭ್ಯಗಳು ಕೂಡ ಸೂಕ್ತ ಕುಟುಂಬಗಳಿಗೆ ಮತ್ತು ಸರಿಯಾದ ಸಮಯಕ್ಕೆ ದೊರೆಯುತ್ತಿಲ್ಲವೆಂಬುದು ಕಂಡು ಬಂದಿದೆ. ಮೀಸಲಾತಿಯಂತಹ ಸರಕಾರಿ ಸೌಲಭ್ಯವು ಬರಿಯ ಮುಗೇರರಲ್ಲಿನ ಉನ್ನತ ಕುಟುಂಬಗಳಿಗೆ ಅಥವಾ ನಗರ ಪ್ರದೇಶದ ಆಧುನಿಕೆ ವಿದ್ಯಾವಂತ ಜನರಿಗೆ ಮಾತ್ರ ಸೀಮಿತವಾಗಿರುವುದನ್ನು ನಾವು ಕಾಣ ಬಹುದಾಗಿದೆ.ಈ

ನಿಟ್ಟಿನಲ್ಲಿ ಸರಕಾರಗಳು ಇಂತಹ ಸೌಲಭ್ಯಗಳನ್ನು ವಿಕೇಂದ್ರಿಕರಣಗೊಳಿಸುವ ಅಥವಾ ಅಂತರ್ಗತ ಸಾಮಾಜಿಕ ನ್ಯಾಯ ಕಲ್ಪನೆಯನ್ನು ಅನುಷ್ಠಾನಗೊಳಿಸುವುದರ ಮೂಲಕ ಸರಿದೂಗಿಸ ಬೇಕಾದ ಅಗತ್ಯವಿದೆಯೆನ್ನಬಹುದು.ಇವರ ಶಿಕ್ಷಣ ಮಟ್ಟವನ್ನು ಗಮನಿಸಿದಾಗಲೂ ಅತೀ ಕಡಿಮೆ ಸಂಖ್ಯೆಯ ಯುವಕರು ಮತ್ತು ಉತ್ಪಾದಕ ವಯೋಮಾನದವರು ಕೇವಲ ಪ್ರಾಥಮಿಕ ಶಿಕ್ಷಣವನ್ನು ಪಡೆದಿರುವುದು ತಿಳಿದು ಬಂದಿದೆ.ಈ ನಿಟ್ಟಿನಲ್ಲಿ ಕುಟುಂಬದ ಹಿರಿತಲೆಗಳು ಅಥವಾ ಮುಖ್ಯಸ್ಥರು ತಮ್ಮ ಪ್ರಾಧ್ಧಿನಿತ್ಯತೆಯನ್ನು ತಮ್ಮ ಮಕ್ಕಳಾ ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ನೀಡಬೇಕಾಗಿದೆ.ಶಿಕ್ಷಣದಿಂದ ಮಾತ್ರ ಸಾಮಾಜಿಕ ಬದಲಾವಣೆ ಮತ್ತು ಅಭಿವೃದ್ಧಿ ಸಾಧ್ಯವೆನ್ನುವುದು ಸರ್ವವಿದಿತ ಮಾತು.ಈ ನಿಟ್ಟಿನಲ್ಲಿ ಮುಗೇರ ಸಮುದಾಯದಲ್ಲಿರುವ ಶಿಕ್ಷಿತರು,ಸರಕಾರಿ ಉದ್ಯೋಗಸ್ಥರು ಮತ್ತು ಈಗಾಗಲೇ ಸಮಾಜದ ಮುಖ್ಯ ವಾಹಿನಿ ಯಲ್ಲಿರುವ ಜನವರ್ಗ ಯೋಚಿಸ ಬೇಕಾಗಿದೆ.

ಈ ಅಧ್ಯಯನದ ಕ್ಷೇತ್ರಕಾರ್ಯದ ಸಂದಂರ್ಭದಲ್ಲಿ ಕಂಡುಬಂದಂತೆ ,ಬಹುತೆಕ ಸೂಚನದಾರರು ಅನಕ್ಷರಸ್ಥರಾಗಿದ್ದು ಸರಕಾರ ಮತ್ತು ಸರಕಾರೇತರ ಸಮ್ಸ್ಥೆಗಳು ವಿಶೇಷವಾಗಿ ಪರಿಶಿಷ್ಟ ಜಾತಿಯವರಿಗಾಗಿ ಯೋಜಿಸಿರುವ ಕಾರ್ಯಕ್ರಮಗಳ ಬಗ್ಗೆ ಸರಿಯಾದ ಮಾಹಿತಿ ಇಲ್ಲದಿರುವುದು ಮೇಲ್ನೋಟಕ್ಕೆ ತಿಳಿದು ಬಂದಿತ್ತು.ಈ ನಿಟ್ಟಿನಲ್ಲಿ ಮುಗೇರ ಸಮುದಾಯದ ಜಾತಿ ಸಂಘಗಳು ಕಾರ್ಯ ಪ್ರವೃತ್ತರಾಗುವ ಅಗತ್ಯವಿದೆ.

ಅದರಲ್ಲೂ ಮುಖ್ಯವಾಗಿ ಆಗಬೇಕಾಗಿರುವುದು, ಮುಗೇರ ಸಮುದಾಯ ಅನನ್ಯತೆ ಮತ್ತು ಭಿನ್ನತೆಯನ್ನು ಉಳಿಸಿಕೊಳ್ಳುವ ಮತ್ತು ಬೆಳೆಸುವ ಕಾರ್ಯ ಆಗಬೇಕಿದೆ.ಈ ಸಮುದಾಯದಲ್ಲಿ ಮಾತ್ರ ಕಂಡು ಬರುವ ಮತ್ತು ಆಸ್ತಿತ್ವದಲ್ಲಿರುವ ಸಾಂಸ್ಕೃತಿಕ ಆಚರಣೆಗಳಾದ ದುಡಿ-ಕುಣಿತ, ಪಿಲಿ-ಪಂಜಿಕುಣಿತ, ಚೆನ್ನು-ಕುಣಿತ ಮತ್ತು ಇವರ ಸಾಮೂದಾಯಿಕ ದೈವದ ಆಚರಣೆಗಳನ್ನು ಉಳಿಸುವ ಮತ್ತು ಮುಂದಿನ ಜನಾಂಗಕ್ಕೆ

ತಿಳಿಸುವ ಕಾರ್ಯಗಳು ಕೂಡ ಆಗಬೇಕಿದೆ. ಒಂದು ಸಂಸ್ಕೃತಿಯ ಉಳಿವು ಆ ಸಮುದಾಯದ ಉಳಿವು ಆಗಿರುವುದರಿಂದ ಸಮಾಜ ಎಲ್ಲಾ ಜನ ವರ್ಗದವರು ಕೂಡ ಈ ಬಗ್ಗೆ ಯೋಜಿಸ ಬೇಕಿದೆ.

ಒಟ್ಟಿನಲ್ಲಿ ಮುಗೇರ ಸಮಾಜದ ಸಾಮಾಜಿಕ-ಆರ್ಥಿಕ ಸ್ಥಿತಿಗಳಲ್ಲಿ ಹಲವಾರು ರೀತಿಯ ಬದಲಾವಣೆಗಳು ಆಗುತ್ತಿದ್ದರೂ ಇನ್ನೂ ಪೂರ್ಣ ಪ್ರಮಾಣದಲ್ಲಿ ಯಾವುದೇ ಸಾಮುದಾಯಿಕ ಬದಲಾವಣೆ ಆಗಿಲ್ಲವೆನ್ನಬಹುದು. ಮುಗೇರರಲ್ಲಿ ನಾವು ಕಾಣುವ ಬದಲಾವಣೆಯು ಕೇವಲ ಆಂಶಿಕ ಮತ್ತು ಮೇಲ್ನೋಟದ ಬದಲಾವಣೆ ಮಾತ್ರವೆಂದು ಹೇಳಬಹುದು.

ಮುಂದಿನ ಅಧ್ಯಯನಕ್ಕಾಗಿ ಸಲಹೆಗಳು

1. ಮೊಗೇರರ ಕುರಿತಾದ ಸಮಾಜಶಾಸ್ತ್ರೀಯ ಮತ್ತು ಅಭಿವೃದ್ಧಿ ದೃಷ್ಟಿಕೋನದ ಅಧ್ಯಯನ ಅಗತ್ಯವಿದೆ.
2. ಮೊಗೇರರ ಕೂಡುವಳಿ ಪದ್ಧತಿಯ ಕುರಿತು ಸಮಗ್ರ ಅಧ್ಯಯನ ಮಾಡಬಹುದಾಗಿದೆ.
3. ಮೊಗೇರರ ಪ್ರಾದೇಶಿಕ ಭಿನ್ನತೆ ಮತ್ತು ಅನನ್ಯತೆಯ ಬಗ್ಗೆಯೂ ಅಧ್ಯಯನ ಮಾಡಬಹುದಾಗಿದೆ.
4. ಅಭಿವೃದ್ಧಿ ಉಪಕ್ರಮಗಳಿಂದ ಉಂಟಾಗಿರುವ ಬದಲಾವಣೆಯನ್ನು ಗುರುತಿಸುವಂತಹ ಕ್ರಿಯಾ ಸಂಶೋಧನೆಗಳನ್ನು ಮಾಡಬಹುದಾಗಿದೆ.

ಪರಮರ್ಶಾನ ಗ್ರಂಥಗಳು

1.ಅಭಯಕುಮಾರ್,(1992),ಮುಗೇರರು-ಜನಾಂಗ ಜಾನಪದ ಅಧ್ಯಯನ,ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,ಬೆಂಗಳೂರು.

2.ಎಡ್ಗರ್ ಥರ್ಸ್ಟನ್ ಸಿ.ಐ.ಇ,(1909),ಕಾಸ್ಟ್ ಆಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯ,ಕಾಸ್ಮೊ ಪಬ್ಲಿಕೇಷನ್,ದೆಹಲಿ.

3.ಸ್ಟರಕ್ ಐ.ಸಿ.ಎಸ್,(1894), ಮದ್ರಾಸ್ ಡಿಸ್ಟ್ರಕ್ ಸದರ್ನ್ ಕೆನರಾ,ಮದ್ರಾಸ್ ಪ್ರೆಸಿಡೆನ್ಸಿ.

4.ಕಮಲಾಕ್ಷ.ಕೆ,(ಸಂ),(2007),ನಿಶಾನಿ ಸ್ಮರಣ ಸಂಚಿಕೆ,ತುಳುವೆರೊ ಆಯನೊ ಕಾಸರಗೋಡು ಜಿಲ್ಲಾ ಸಮಿತಿ,ಮಾಧ್ಯಮ ಪ್ರಕಾಶನ,ಬದಿಯಡ್ಕ.

5.ಕಮಲಾಕ್ಷ.ಪಿ,(1968),ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನರ ಸಾಮಾಜಿಕ ಇತಿಹಾಸ,ಕನ್ನಡ ಪುಸ್ತಕ ಪ್ರಾಧಿಕಾರ,ಬೆಂಗಳೂರು.

6.ರಮೇಶ ಕೆ.ವಿ,(1969),ತುಳುನಾಡಿನ ಇತಿಹಾಸ,ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಸಂಶೋಧನಾ ಕೇಂದ್ರ ಮತ್ತು ಗೀತಾ ಬುಕ್ ಹೌಸ್,ಮೈಸೂರು.

7.ವಿಶ್ವನಾಥ ರೈ.ಕುದ್ಯಾಡಿ,(1992),ನರ್ತನ ಜಗತ್ತು,ಸಹಕಾರಿ ಪ್ರಕಾಶನ,ಪುತ್ತೂರು.

8.ಭಟ್ಟ ಜಿ.ಎಸ್,(1992),ಹಸಲರ ಸಂಸ್ಕೃತಿ,ಕರ್ನಾಟಕ ಸಾಹಿತ್ಯ ಸಂಸ್ಕೃತಿ,ಬೆಂಗಳೂರು.

9.ಗಣನಾಥ ಎಕ್ಕಾರು,(2000),ತುಳುನಾಡಿನ ಜನಪದ ಆಟಗಳು,ಜ್ಞಾನೋದಯ ಪ್ರಕಾಶನ.ಮಂಗಳೂರು.

10.ಚಿನ್ನಪ್ಪ ಗೌಡ,(2002),ಸಂಸ್ಕೃತಿ ಸಿರಿ,ಮದಿಪು ಪ್ರಕಾಶನ,ಮಂಗಳಗಂಗೋತ್ರಿ,ಮಂಗಳೂರು.

11.ಕೊಯಿರಾ ಬಾಳೆಪುಣಿ ಎನ್,(1992),ಜನಪದ ಗಂಗೋತ್ರಿ,ಮಂಗಳೂರು.

12. ಕೊಯಿರಾ ಬಾಳೆಪುಣಿ ಎನ್,(20120),ಮುಗೇರರ ದುಡಿ ಕುಣಿತಗಳು:ಸ್ವರೂಪ ಮತ್ತು ಸಂಸ್ಕೃತಿ,ದುಡಿ ಪ್ರಕಾಶನ,ಬಾಳೆಪುಣಿ ಬಂಟ್ವಾಳ.

13.ರಾಮ್ ಅಹುಜಾ,(2002),ಸೊಸೈಟಿ ಇನ್ ಇಂಡಿಯಾ,ರಾವತ್ ಪಬ್ಲಿಕೇಷನ್,ನವದೆಹಲಿ

14.ದುಬೆ,ಎಸ್.ಸಿ,(1994),ಟ್ರಡಿಷನ್ ಎಂಡ್ ಡೆವೆಲಪಮೆಂಟ್,ವಿಕಾಸ್ ಪಬ್ಲಿಷಿಂಗ್ ಹೌಸ್,ನವ ದೆಹಲಿ.

15.ಇರಾವತಿ ಕಾರ್ವೆ,(1968),ಕಿನ್ ಶಿಪ್ ಆರ್ಗನೈಸೇಸನ್ ಇನ್ ಇಂಡಿಯಾ,ಏಷಿಯಾ ಪಬ್ಲಿಷಿಂಗ್ ಹೌಸ್,ಬಾಂಬೆ.

16.ಕುಪ್ಪುಸ್ವಾಮಿ,(1986),ಸೋಷೀಯಲ್ ಚೇಂಛ್ ಇನ್ ಇಂಡಿಯಾ,ವಿಕಾಸ್ ಪಬ್ಲಿಷಿಂಗ್ ಹೌಸ್,ನವ ದೆಹಲಿ.

17.ಲಂಡ್ ಬರ್ಗ್,(1958),ಸೋಷಿಯಾಲಜಿ,ಹಾರ್ಪರ್ ಅಂಡ್ ಬ್ರದರ್ಸ್,ನ್ಯೂಯರ್ಕ್.

18.ಶ್ರೀನಿವಾಸ.ಎಮ್.ಎನ್,(1980),ಸೋಷೀಯಲ್ ಚೇಂಛ್ ಇನ್ ಮಾಡರ್ನ್ ಇಂಡಿಯಾ,ಯುನಿವರ್ಸಿಟಿ ಕ್ಯಾಲಿಪೋರ್ನಿಯಾ ಪ್ರೆಸ್,ಬರ್ಕ್ಲಿ.

19.ಯೋಗೇಂದ್ರ ಸಿಂಗ್,(1973),ಮಾಡರ್ನೈಷೇಸನ್ ಆಫ್ ಇಂಡಿಯನ್ ಟ್ರಡಿಷನ್(ಎ ಸಿಸ್ಟಮ್ಯಾಟಿಕ್ ಸ್ಟಡಿ ಆಫ್ ಸೋಷಿಯಲ್ ಚೇಂಛ್) ಥಾಮ್ಸನ್ ಪ್ರೆಸ್,ದೆಹಲಿ.

೨೦.ರವೀಂದ್ರನಾಥ ರಾವ್,(೨೦೦೩),ಟ್ರೈಬಲ್ ಟ್ರಡಿಷನ್ ಅಂಡ್ ಚೇಂಜ್: ಎ ಸ್ಟಡಿ ಆಫ್ ಕುಡುಬಿ ಆಫ್ ಸೌತ್ ಇಂಡಿಯ,ಮಂಗಳ ಪಬ್ಲಿಕೆಶನ್,ಮಂಗಳೂರು.

೨೧.____________ ರಿಸರ್ಚ್ ಮೆಥಡಾಲಜಿ,ಮಂಗಳ ಪಬ್ಲಿಕೆಶನ್,ಮಂಗಳೂರು.

ಅನುಬಂಧಗಳು

ಬದಲಾಗುತ್ತಿರುವ ಮೊಗೇರರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು: ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಮತ್ತು ಮಂಗಳೂರು ತಾಲೂಕುಗಳ ಅಧ್ಯಯನ

ಎಂ.ಫಿಲ್(ಅಭಿವೃದ್ಧಿಅಧ್ಯಯನ) ಅಧ್ಯಯನಕ್ಕಾಗಿ ರಚಿಸಲ್ಪಟ್ಟ ಪ್ರಶ್ನಾವಳಿ

ಸೂಚನದಾರರಮೂಲಮಾಹಿತಿ:

೧.ಹೆಸರು:

೨.ವಯಸ್ಸು:

೩.ಲಿಂಗ: ಹೆಣ್ಣು/ಗಂಡು

೪.ಶಿಕ್ಷಣ:

೫.ವೃತ್ತಿ: ಕೂಲಿ/ಸರ್ಕಾರಿ/ಕೃಷಿ/ಖಾಸಗಿ/ಸ್ವಂತಉದ್ಯೋಗ

೬.ವಾಸಮಾಡಿರುವಸ್ಥಳ: ನಗರ/ಗ್ರಾಮೀಣ

೭.ವಾರ್ಷಿಕಆದಾಯ: ೦.೩೦,೦೦೦-೭೦,೦೦೦ ೩.೭೦,೦೦೧-೯೦,೦೦೦
ಅ.೯೦,೦೦೦-೧೧೦೦೦೦ ಆ.೧೧೦೦೦೦+

೮.ವೈವಾಹಿಕಸ್ಥಿತಿ: ವಿವಾಹಿತ/ಅವಿವಾಹಿತ/ವಿಚ್ಛೇದಿತೆ/ವಿಚ್ಛೇದಿತ/ವಿಧವೆ.

೯.ಕುಟುಂಬಗಾತ್ರ: ೧-೪,೫-೮,೯-೧೨,೧೩-೧೬,೧೭+

೧೦. ಮನೆಗೆಸ್ವಂತಶೌಚಾಲಯಇದೆಯಾ ? ೧.ಇದೆ ೨.ಇಲ್ಲ

೧೧.ಮನೆಯಮಾಲಿಕತ್ವ: ೧.ಸ್ವಂತ ೨.ಬಾಡಿಗೆ

ಸಾಮಾಜಿಕಸ್ಥಿತಿಗತಿಗಳು:

೧೨.ನಿಮ್ಮ ಕುಟುಂಬದ ಪ್ರಮುಖ ನಿರ್ಧಾರಗಳನ್ನು ಯಾರು ತೆಗೆದು ಕೊಳ್ಳುತ್ತಾರೆ ?

೧.ತಂದೆ ೨.ತಾಯಿ ೩.ಹಿರಿಯ ಮಗ ೪.ಹಿರಿಯ ಮಗಳು ೫.ಇತರರು (ಉಲ್ಲೇಖಿಸಿ)

೧೩.ಪ್ರಮುಖ ನಿರ್ಧಾರ ತೆಗೆದುಕೊಳ್ಳುವಾಗ ಮನೆಯವರ ಸಲಹೆ ಕೇಳುತ್ತೀರಾ ?

೧.ಹೌದು೨.ಇಲ್ಲ

೧೪.ಕೇಳುವುದಾದರೆ ಯಾವ ಸಂದರ್ಭಗಳಲ್ಲಿ ಕೇಳುತ್ತೀರಿ ?

೧.ಎಲ್ಲಾ ಸಂದರ್ಭಗಳಲ್ಲಿ ೨.ಕೆಲವು ಸಂದರ್ಭಗಳಲ್ಲಿ ೩.ವಿಶೇಷ ಸಂದರ್ಭಗಳಲ್ಲಿ

೧೫ನೀವು ನಿಮ್ಮ ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಪಾಲು ನೀಡುತ್ತೇರಾ ?

೧.ನೀಡುತ್ತೇವೆ ೨.ನೀಡುವುದಿಲ್ಲ

೧೬.ವಿವಾಹವನ್ನು ಹಿರಿಯರು ಗೊತ್ತುಪಡಿಸಿಯೇ ನಡೆಸಬೇಕೆಂದು ನೀಉ ಬಯಸುತ್ತೀರಾ ?

೧.ಹೌದು ೨.ಇಲ್ಲ

೧೭.ಹೌದಾದರೆ ಕಾರಣ ತಿಳಿಸಿ:__________________________________

೧೮.ನೀವು ನಿಮ್ಮ ಮಕ್ಕಳನ್ನು ಎಷ್ಟನೇ ವಯಸ್ಸಿಗೆ ಮದುವೆ ಮಾಡಿಸುವುದು ಸೂಕ್ತವೆಂದು ಭಾವಿಸುತ್ತೀರಿ ?

೧.ಪ್ರಾಥಮಿಕ ೨.ಹೈಸ್ಕೂಲು ೩.ಪಿ.ಯು.ಸಿ ೪.ಕಾಲೇಜು ೫.ಸ್ನಾತಕೋತ್ತರಪದವಿ

೧೯.ನೀವು ಮಗನಿಗೂ ನೀಡುವಷ್ಟು ಶಿಕ್ಷಣಾವನ್ನು ಮಗಳಿಗೂ ನೀಡುವುದು ಸರಿಯೆಂಬುದನ್ನು ಒಪ್ಪುತ್ತೀರಾ ?

೧.ಒಪ್ಪುತ್ತೇವೆ ೨.ಒಪ್ಪುವುದಿಲ್ಲ

೨೦.ಒಪ್ಪುವುದಿಲ್ಲವಾದರೆ ಯಾಕೆ:__________________________________

೨೧.ನಿಮ್ಮ ಮಕ್ಕಳಿಗೆ ಈ ಕೆಳಗಿನ ಯಾವುದಾದರೂ ಸೌಲಭ್ಯ ದೊರೆತಿದೆಯಾ ?

೧.ಮೀಸಲಾತಿ೨ .ವಿದ್ಯಾರ್ಥಿವೇತನ ೩.ವಿದ್ಯಾರ್ಥಿನಿಲಯ್ ೪.ಕಲಿಕಾಸಾಮಾಗ್ರಿ

೨೨.ನಿಮ್ಮ ಮಗಳಿಗೆ ದೂರದ ಪ್ರದೇಶದಲ್ಲಿ ಶಿಕ್ಷಣ ಪಡೆಯುವ ಅವಕಾಶ ದೊರೆತರೆ ಶಿಕ್ಷಣ ನೀಡಲು ನಿಮ್ಮ ಒಪ್ಪಿಗೆ ಇದೆಯಾ ?

೧.ಹೌದು ೨.ಇಲ್ಲ

೨೩.ಇಲ್ಲವಾದರೆ ಕಾರಣ ತಿಳಿಸಿ:_________________________________

೨೪.ಅನರೋಗ್ಯದ ಸಂದರ್ಭದಲ್ಲಿ ಎಲ್ಲಿಂದ ಚಿಕಿತ್ಸೆ ಪಡೆಯುತ್ತೀರಿ ?

೧.ಸರಕಾರಿಆಸ್ಪತ್ರೆ ೨.ಸ್ಥಳಿಯಖಾಸಗಿಆಸ್ಪತ್ರೆ ೩.ಗ್ರಾಮವೈದ್ಯರು೪ .ಮಾಂತ್ರಿಕರಭೇಟಿ ೫. ಸ್ಥಂತಮನೆಔಷಧಿ

ಆರ್ಥಿಕಸ್ಥಿತಿಗತಿಗಳು:

೨೫.ನಿಮಗೆ ಜಮೀನು/ಸಾಗುವಳಿ ಇದೆಯಾ?

೧.ಇದೆ ೨.ಇಲ್ಲ

೨೬.ಇದೆಯಾದರೆ ಹೇಗೆ ದೊರೆತಿದೆ ?

೧.ಖರಿದಿಸಿದ್ದು ೨.ಪಿತ್ರಾರ್ಜಿತ ೩.ಭೂಸುಧಾರಣೆಯಿಂದ ೪.ಸರಕಾರಿಭೂಮಿ

೨೭.ನಿಮ್ಮ ಜಮೀನಿನ ಭೂಮಿ ಯಾವುದು ?

೧.ಒಣಭೂಮಿ ೨.ಕೃಷಿಭೂಮಿ ೩.ನೀರಾವರಿಭೂಮಿ

೨೮.ನಿಮ್ಮ ಜಮೀನು ಆದಾಯದ ಮೂಲವೇ ?

೧.ಹೌದು ೨.ಇಲ್ಲ

೨೯.ನೀವು ಹಣ ಉಳಿತಾಯ ಮಾಡುತ್ತೀರಾ?

೧.ಮಾಡುತ್ತೇವೆ ೨.ಮಾಡುವುದಿಲ್ಲ

೩೦.ಮಾಡುವುದಾದರೆ ಎಲ್ಲಿ ಉಳಿತಾಯ ಮಾಡುತ್ತೀರಿ?

೧.ಬ್ಯಾಂಕ್ ೨.ಅಂಚೆಕಛೇರಿ ೩.ಜೀವವಿಮೆ ೪.ಮನೆಯಲ್ಲಿ ೫.ಇತರೇ(ಉಲ್ಲೇಖಿಸಿ)

೩೧.ಇಲ್ಲವಾದರೆ ಯಾಕಿಲ್ಲ?

೧.ಸೌಲಭ್ಯವಿಲ್ಲ ೨.ಗೊತ್ತಿಲ್ಲ

೩೨.ಉಳಿತಾಯ ಮಾಡಿದ ಹಣವನ್ನು ಯಾವ ಉದ್ದೇಶಕ್ಕೆ ಉಪಯೋಗಿಸ ಬೇಕೆಂದು ನಿರ್ಧರಿಸಿದ್ದೀರಿ?

೧.ಮಕ್ಕಳವಿದ್ಯಾಭ್ಯಾಸ ೨.ವಿವಾಹಕ್ಕಾಗಿ ೩.ಮನೆಕಟ್ಟಲು ೪.ಸಾಲತೀರಿಸಲು ೫.ಭವಿಷ್ಯಕ್ಕಾಗಿ

೩೩.ನಿಮ್ಮ ನೀರಿನ ಆಶ್ರಯ ಯಾವುದು?

೧.ಸ್ವಂತಬಾವಿ ೨.ಕೆರೆ ೩.ಸಾರ್ವಜನಿಕ ಕೊಳವೆ ಬಾವಿ ೪.ನೆರೆಯವರ ಬಾವಿ

೩೪.ನಿಮಗೆ ಯಾವುದಾದರೂ ಸಾಲವಿದೆಯಾ?

೧.ಹೌದು ೨.ಗಿರವಿದಾರರು

೩೫.ನೀವು ಯಾರಿಂದ ಸಾಲ ಪಡೆದಿದ್ದೀರಿ?

೧.ಬ್ಯಾಂಕ್ ೨.ಗಿರವಿದಾರರು ೩.ಕೈಸಾಲ ೪.ಸ್ವಸಹಾಯ ೫.ಇತರೆ

೩೬.ಸಾಲ ಮಾಡಲು ಕಾರಣವೇನು?

೧.ವಿವಾಹ ೨.ಮನೆಕಟ್ಟಲು ೩.ವಿದ್ಯಾಭ್ಯಾಸ ೪.ಅನಾರೋಗ್ಯ೫.ಇತರೆ

೩೭.ನಿಮ್ಮ ಮನೆಯಲ್ಲಿ ಯಾವೆಲ್ಲ ದಿನ ಬಳಕೆಯ ವಸ್ತುಗಳಿವೆ ?

೧.ರೇಡಿಯೋ ೨.ಟಿ.ವಿ ೩.ಫ್ಯಾನ್ ೪.ಮೊಬೈಲ್ ೫.ಮಿಕ್ಸಿ ೬.ಗ್ರೈಂಡರ್ ೭.ವಾಷಿಂಗ್ಮೆಸಿನ್ ೮.ಗ್ಯಾಸ್

೩೮.ನಿಮ್ಮ ಮನೆಯಲ್ಲಿ ಯಾವೆಲ್ಲ ವಾಹನಗಳಿವೆ ?

೧.ಸೈಕಲ್ ೨.ದ್ವಿಚಕ್ರ ೩.ಆಟೋರಿಕ್ಷಾ ೪.ಕಾರ್ ೫.ಟೆಂಪೋ ೬.ಯಾವುದೂಇಲ್ಲ

೩೯.ನಿಮ್ಮ ಕುಟುಂಬದಲ್ಲಿ ಯಾರಾದರು ವಲಸೆ ಹೋಗಿದ್ದಾರೆಯಾ ?

೧.ಹೌದು ೨.ಇಲ್ಲ

೪೦.ಹೌದಾದರೆ,ಯಾವ ಪ್ರದೇಶಕ್ಕೆ ವಲಸೆ ಹೋಗಿದ್ದಾರೆ ?

೧.ಬೇರೆತಾಲೂಕು ೨.ಬೇರೆಜಿಲ್ಲೆ ೩.ಬೇರೆರಾಜ್ಯ ೪.ಬೇರೆದೇಶ

೪೧.ವಲಸೆ ಹೋದವರಿಂದ ನಿಮಗೆ ಯಾವ ರೀತಿಯ ಸಹಾಯ ಪಡೆಯುತ್ತೀರಿ ?

೧.ಆರ್ಥಿಕ ೨.ವಸ್ತುಗಳರೂಪದಲ್ಲಿ ೩.ನೈತಿಕಸಹಾಯ ೪.ಸಾಂದರ್ಭಿಕಸಹಾಯ

೪೨. ನೀವು ಯಾವುದಾರೂ ಸರಕಾರಿ ಸೌಲಭ್ಯ ಪಡೆದಿದ್ದೀರಾ ?

೧.ಹೌದು ೨.ಇಲ್ಲ

೪೩,ಹೌದಾದರೆ ಯಾವ ರೀತಿಯ ಸಹಾಯ ?

೧.ಹಂಚು ೨.ಮನೆ ೩.ನೀವೇಶನ ೪.ವಿದ್ಯುತ್ಸಂಪರ್ಕ ೫.ಶೌಚಾಲಯನಿರ್ಮಾಣ ೬.ವಿಧವಾ

೪೪.ನೀವು ಯಾವುದಾದರೂ ಸಂಘಗಳಲ್ಲಿ ಸದಸ್ಯರಾಗಿದ್ದೀರಾ ?

೧.ಹೌದು೨.ಇಲ್ಲ

೪೫. ಹೌದಾದರೆ ಯಾವುದರಲ್ಲಿ ?

೧.ಯುವಕ/ಯುವತಿಸಂಘ ೨.ಸ್ವಸಹಾಯಸಂಘ ೩.ಹಾಲಿನಡ್ಯೆರಿ ೪.ಸಹಕಾರಿಸಂಘ

೫.ಪಂಚಾಯತ್ಸದಸ್ಯ ೬.ರಾಜಕೀಯಪಕ್ಷ.

ಪದಕೋಶ

ತುಳು	ಕನ್ನಡ
ಬಿರು–ಪಗರಿ	ಬಿಲ್ಲು ಬಾಣ
ಕೊಟ್ಯ	ಮುಳಿಹುಲ್ಲಿನ ಮನೆ
ಕೂಡುಕಟ್ಟ್	ಕೂಡುವಳಿ
ಮನ್ಸ	ದ.ಕ ಜಿಲ್ಲೆಯ ಪರಿಶಿಷ್ಟ ಜಾತಿ
ಮುಂಡಾಳ	ದ.ಕ ಜಿಲ್ಲೆಯ ಪರಿಶಿಷ್ಟ ಜಾತಿ
ಕಲಿ	ಶೇಂದಿ
ದುಡಿ	ಚರ್ಮ ವಾದ್ಯ
ಪಡ್ದಯಿ	ಪೂರ್ವ
ಬಾಲೆ	ಮಗು
ಗುತ್ತು	ಬಂಟ ಸಮುದಾಯದ ಮನೆ

ಭಾವಚಿತ್ರಗಳು



1. ಮೊಗೇರ ದೈವಗಳು



2. ಮೊಗೇರ ದೈವಗಳು

ಚಿತ್ರ ಕೃಪೆ: ಡಾ.ಕೊಯಿರಾ ಬಾಳೆಮಣಿ



3. ಮೊಗೇರರ ದುಡಿ



4. ಮೊಗೇರ ಆಟಿ ಕಳಂಜ

ಚಿತ್ರ ಕೃಪೆ: ಡಾ.ಕೊಯಿರಾ ಬಾಳೆಮಣಿ